# 01-10-2020

## ಸುಧಾರಿತ ಬ್ರಹ್ಮೋಸ್ ಸೂಪರ್ ಸಾನಿಕ್ ಪರೀಕ್ಷೆ ಯಶಸ್ವಿ




ನವದೆಹಲಿ : ಸುಮಾರು 400 ಕಿಲೋ ಮೀಟರ್ ಗೂ ಮೀರಿದ ಗುರಿಯನ್ನು ತಲುಪಿ ಹೊಡೆದುರುಳಿಸಬಲ್ಲ ಸಾಮರ್ಥ್ಯ ಹೊಂದಿದ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯ ಎರಡನೆಯ ಆವೃತ್ತಿಯ ಪರೀಕ್ಷೆ ಯಶಸ್ವಿಯಾಗಿದೆ.

* ರಷ್ಯಾ ಹಾಗೂ ಭಾರತ ರಾಷ್ಟ್ರಗಳು ಜಂಟಿಯಾಗಿ ಅಭಿವೃದ್ಧಿ ಪಡಿಸಿದ ಬ್ರಹ್ಮೋಸ್ ಕ್ಷಿಪಣಿಯ ಮೊದಲನೆಯ ಆವೃತ್ತಿಯು 290 ಕಿ.ಮೀ ಸಂಚರಿಸುವ ಸಾಮರ್ಥ್ಯ ಹೊಂದಿತ್ತು, ಆದರೆ ಇದೀಗ ಪರೀಕ್ಷೆಗೊಳಪಡಿಸಲಾದ ನೂತನ ಆವೃತ್ತಿ 400 ಕ್ಕೂ ಅಧಿಕ ಕಿಲೋ ಮೀಟರ್ ಗುರಿ ಭೇದಿಸಲಿದೆ. ಈ ಮೂಲಕ ಭಾರತೀಯ ರಕ್ಷಣಾ ಪಡೆಯ ಬಲ ಮತ್ತಷ್ಟು ಹಿರಿದಾಗಿದೆ.
* ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಈ ಕ್ಷಿಪಣಿಗಳನ್ನು ತಯಾರಿಸಿದ್ದು, ಪ್ರಧಾನಿ ಮೋದಿ, ರಕ್ಷಣಾ ಸಚಿವರು ಸೇರಿ ಹಲವು ಗಣ್ಯರು ಅಭಿನಂದಿಸಿದ್ದಾರೆ.

## ಲಾಕ್ಡೌನ್ ಅವಧಿಯಲ್ಲಿ ಗಂಟೆಗೆ 90 ಕೋಟಿ ಗಳಿಕೆ ಮಾಡಿದ ಮುಕೇಶ್ ಅಂಬಾನಿ



ಜಗತ್ತಿನಾದ್ಯಂತ ಕೊರೊನಾ ಕಾರಣಕ್ಕೆ ಬಹುತೇಕ ರಾಷ್ಟ್ರಗಳು ಲಾಕ್ ಡೌನ್ ಘೋಷಿಸಿದ್ದವು ಈ ಹಿನ್ನಲೆ ಹಲವು ರಾಷ್ಟ್ರಗಳು ಹಾಗೂ ಉದ್ಯಮಗಳು ತೀವ್ರ ಆರ್ಥಿಕ ನಷ್ಟವನ್ನು ಅನುಭವಿಸಿದ್ದರು. ಆದರೆ ಭಾರತದ ಅತಿ ಶ್ರೀಮಂತ ಹಾಗೂ ರಿಲಯನ್ಸ್ ಸಮೂಹದ ಮುಖ್ಯಸ್ಥ ಮುಕೇಶ್ ಅಂಬಾನಿಯವರು ಲಾಕ್ ಡೌನ್ ಅವಧಿಯಲ್ಲಿ ಗಂಟೆಗೆ ಅಂದಾಜು 90 ಕೋಟಿ ಯಷ್ಟು ಗಳಿಕೆ ಮಾಡಿದ್ದು, ಅಲ್ಲದೆ ರಿಲಯನ್ಸ್ ಇಂಡಸ್ಟ್ರೀಸ್ ಆಸ್ತಿಯ ಒಟ್ಟು ಮೌಲ್ಯ ಶೇಕಡ 73 ರಷ್ಟು ಏರಿಕೆಯಾಗಿ ಈಗ 6.59 ಲಕ್ಷ ಕೋಟಿ ರೂಪಾಯಿಗೆ ತಲುಪಿರುವದಾಗಿ ಇತ್ತೀಚಿಗೆ ವರದಿಯಾಗಿದೆ.

## ಫ್ರಾನ್ಸ್ ಸಹಭಾಗಿತ್ವದೊಂದಿಗೆ 2025 ಶುಕ್ರ ಗ್ರಹಕ್ಕೆ ISRO ನೌಕೆ




ವಿಶ್ವದ ಪ್ರಮುಖ ಕೆಲವೇ ಕೆಲವು ಬಾಹ್ಯಾಕಾಶ ಸಂಸ್ಥೆಗಳ ಪೈಕಿ ಹೆಸರು ಪಡೆದಿರುವ ಭಾರತೀಯ ಬಾಹ್ಯಾಕಾಶ ಸಂಸ್ಥೆ ಈಗಾಗಲೇ ಹಲವು ಸಾಧನೆಗಳೊಂದಿಗೆ ವಿಶ್ವದ ಗಮನ ಸೆಳೆದಿದೆ, ಇದೀಗ ಈ ಸಾಧನೆಗಳ ಪಟ್ಟಿಗೆ ಹೊಸ ಸೇರ್ಪಡೆ ಎಂಬಂತೆ 2025 ಕ್ಕೆ ಶುಕ್ರ ಗ್ರಹಕ್ಕೆ ಫ್ರಾನ್ಸ್ ರಾಷ್ಟ್ರದ ಸಹಯೋಗದೊಂದಿಗೆ ನೌಕೆ ಉಡಾಯಿಸಲು ಯೋಜನೆ ರೂಪಿಸಿರುವದಾಗಿ ತಿಳಿದು ಬಂದಿದೆ. ಗಾತ್ರ, ರಚನೆ, ಹಾಗೂ ಗುರುತ್ವ ಬಲಗಳಲ್ಲಿ ಬಹುತೇಕ ಭೂಮಿಯ ಹೋಲುವ ಗ್ರಹ ಇದಾಗಿದೆ. ಇದೆ ಕಾರಣದಿಂದ ISRO ಸಂಸ್ಥೆ ಈ ಗ್ರಹದ ಅಧ್ಯಯನಕ್ಕೆ 2025 ರಲ್ಲಿ ನೂತನ ಯೋಜನೆ ಕೈಗೊಂಡಿರುವದಾಗಿ ತಿಳಿದುಬಂದಿದೆ.

## ಬಾಬ್ರಿ ಮಸೀದಿ ಧ್ವಂಸ ಪ್ರಕರಣ: ಎಲ್ಲಾ ಆರೋಪಿಗಳು ನಿರ್ದೋಷಿಗಳು ಲಖನೌ ಸಿಬಿಐ ವಿಶೇಷ ಕೋರ್ಟ್ ತೀರ್ಪು

ಲಖನೌ: ತೀವ್ರ ಕುತೂಹಲ ಕೆರಳಿಸಿದ್ದ ಬಾಬ್ರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಲಖನೌ ಸಿಬಿಐ ವಿಶೇಷ ಕೋರ್ಟ್ ತನ್ನ ತೀರ್ಪು ಪ್ರಕಟಿಸಿದೆ ಈ ಪ್ರಕರಣದ ಪ್ರಮುಖ ಆರೋಪಿಗಳಾದ ಬಿಜೆಪಿಯ ಹಿರಿಯ ನಾಯಕರಾದ ಎಲ್ ಕೆ ಅಡ್ವಾಣಿ, ಮುರಳಿ ಮನೋಹರ ಜೋಷಿ, ಉಮಾ ಭಾರತಿ ಸೇರಿ ಎಲ್ಲಾ 32 ಮಂದಿ ಆರೋಪಿಗಳಿಗೆ ಕ್ಲೀನ್ ಚಿಟ್ ಸಿಕ್ಕಿದ್ದು, 28 ವರ್ಷಗಳ ದೀರ್ಘ ಕಾಲದ ಬಳಿಕ ಪ್ರಕರಣಕ್ಕೆ ಅಂತ್ಯ ಸಿಕ್ಕಿದೆ. " ಬಾಬ್ರಿ ಮಸೀದಿ ಧ್ವಂಸ ಪ್ರಕರಣ ಕೇವಲ ಒಂದು ಆಕಸ್ಮಿಕ ಘಟನೆಯಾಗಿದ್ದು, ಯಾವುದೇ ಪೂರ್ವ ನಿಯೋಜಿತ ಕೃತ್ಯವಾಗಿರುವದಿಲ್ಲ, ಹಾಗೂ ಉದ್ದೇಶಪೂರ್ವಕವಾಗಿ ಮಸೀದಿಯನ್ನು ನಾಶಮಾಡಿರುವುದಕ್ಕೆ ಯಾವುದೇ ಪ್ರಬಲ ಸಾಕ್ಷ್ಯಾಧಾರಗಳಿರುವದಿಲ್ಲ, ಹಾಗಾಗಿ ಈ ಪ್ರಕರಣದ ಎಲ್ಲ ಆರೋಪಿಗಳು ನಿರ್ದೋಷಿಗಳು" ಎಂದು ಸಿಬಿಐ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಎಸ್ ಕೆ ಯಾದವ್ ತೀರ್ಪು ಪ್ರಕಟಿಸಿದ್ದಾರೆ.

## 03-10-2020

### ಅಕ್ಟೋಬರ್ 02: ಮಹಾತ್ಮಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮದಿನ



ನವದೆಹಲಿ: ಅಕ್ಟೋಬರ್ 02 ರಂದು ದೇಶ್ಯಾದ್ಯಂತ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ 151 ನೇ ಹಾಗೂ ಮಾಜಿ ಪ್ರಧಾನಿಯಾದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ 116ನೇ ಜನ್ಮದಿನವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಇನ್ನು ದೆಹಲಿಯಲ್ಲಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಹಾತ್ಮ ಗಾಂಧಿ ಸ್ಮಾರಕ ರಾಜ್ ಘಾಟ್ ಮತ್ತು ಶಾಸ್ತ್ರೀ ಸ್ಮಾರಕವಿರುವ ವಿಜಯ್ ಘಾಟ್ ಸ್ಥಳಗಳಿಗೆ ತೆರಳಿ ಬಾಪು ಹಾಗೂ ಶಾಸ್ತ್ರೀಜಿಯವರಿಗೆ ಗೌರವ ಸಮರ್ಪಿಸಿದರು.

### ರಾಷ್ಟ್ರನಾಯಕರ ವಿದೇಶಪ್ರಯಾಣಕ್ಕಾಗಿ ವಿಶೇಷ ವಿಮಾನ ಅಮೇರಿಕಾದಿಂದ ಆಮದು



ಭಾರತದ ರಾಷ್ಟ್ರಪತಿ ಉಪರಾಷ್ಟ್ರಪತಿ ಹಾಗೂ ಪ್ರದಾನ ಮಂತ್ರಿಯವರ ವಿದೇಶ ಪ್ರಯಾಣಕ್ಕಾಗಿ ವಿಶೇಷ ವಿಮಾನವನ್ನು ಅಮೇರಿಕಾದಿಂದ ಆಮದು ಮಾಡಿಕೊಳ್ಳಲಾಯಿತು. ನೂತನ ಹಾಗೂ ಅತ್ಯಾಧುನಿಕ ತಂತ್ರಜ್ಞಾನಗಳನೊಳಗೊಂಡ ಬೋಯಿಂಗ್ 777 ವಿಮಾನ ದಿನಾಂಕ ಅಕ್ಟೋಬರ್ 02 ರಂದು ದೆಹಲಿಯನ್ನು ತಲುಪಿತು.

* ಒಟ್ಟು ಎರಡು ವಿಮಾನಗಳಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಪ್ರಸ್ತುತ ಒಂದು ವಿಮಾನ ಭಾರತ ತಲುಪಿದೆ.
* ಈ ನೂತನ ವಿಮಾನಕ್ಕೆ ಏರ್ ಇಂಡಿಯಾ ಒನ್ ಎಂದು ಹೆಸರಿಡಲಾಗಿದೆ.
* ಈ ವಿಮಾನವನ್ನು ಭಾರತೀಯ ವಾಯುಪಡೆಯ ಪೈಲಟ್‌ಗಲು ಚಲಾಯಿಸಲಿದ್ದಾರೆ.
* ಈ ವಿಮಾನಕ್ಕಾಗಿ ಭಾರತವು ಒಟ್ಟು 8400 ಕೋಟಿ ರೂಪಾಯಿಗಳನ್ನು ವ್ಯಯಿಸಿದೆ.

### ಅಮೇರಿಕಾದಿಂದ ₹62.43 ಕೋಟಿ ಮೌಲ್ಯದ ಬಿಡಿಭಾಗಗಳ ಖರೀದಿಗೆ ಒಪ್ಪಂದ



ವಾಷಿಂಗ್ಟನ್ : ಭಾರತದ C 130 J ಸೂಪರ್ ಹರ್ಕ್ಯುಲಸ್ ಸರಕು ವಿಮಾನಗಳಿಗೆ ಬೇಕಾಗಿರುವ ಸುಮಾರು ₹62.43 ಕೋಟಿ ಮೌಲ್ಯದ ಬಿಡಿಭಾಗ ಸೇರಿ ವಿವಿಧ ಉಪಕರಣಗಳ ಖರೀದಿಗಾಗಿ ಭಾರತವು ಅಮೆರಿಕಾಕಕ್ಕೆ ಮಡಿದ ಮನವಿಗೆ ಅಮೆರಿಕಾವು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಶೀಘ್ರದಲ್ಲಿ ಈ ಉಪಕರಣಗಳನ್ನು ಭಾರತಕ್ಕೆ ಪೂರೈಸಲಿದೆ. ಈ ಒಪ್ಪಂದದ ಮೂಲಕ ಉಭಯ ರಾಷ್ಟ್ರಗಳ ರಕ್ಷಣಾ ಕ್ಷೇತ್ರದ ಪರಸ್ಪರ ಸಹಕಾರ ಮತ್ತಷ್ಟು ಉತ್ತಮಗೊಳ್ಳಲಿದೆ ಎಂದು ರಕ್ಷಣಾ ಭದ್ರತಾ ಸಹಕಾರ ಸಂಸ್ಥೆಯು ಅಮೆರಿಕ ಸಂಸತ್ತಿಗೆ ನೀಡಿದ ಅಧಿಸೂಚನೆಯಲ್ಲಿ ಮಾಹಿತಿ ನೀಡಿದೆ.

* ಅಮೆರಿಕವು ಸಿ 130 ಜೆ ಸೂಪರ್ ಹರ್ಕ್ಯುಲಸ್ ಸರಕು ವಿಮಾನಗಳನ್ನೂ ಒಟ್ಟು 17 ರಾಷ್ಟ್ರಗಳಿಗೆ ಮಾರಾಟ ಮಾಡಿದ್ದು, ಇದರಲ್ಲಿ ಭಾರತವು ಕೂಡ ಒಂದು.

### ನಾಸಾದಿಂದ ಕಲ್ಪನಾ ಚಾವ್ಲಾ ಹೆಸರಿನ 'ಸಿಗ್ನಸ್' ಬಾಹ್ಯಾಕಾಶ ನೌಕೆ ಉಡಾವಣೆ



ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ NASA ವು ಇತ್ತೀಚಿಗೆ ಭಾರತ ಮೂಲದ ಅಮೆರಿಕನ್ ಗಗನಯಾತ್ರಿಯಾದ ಕಲ್ಪನಾ ಚಾವ್ಲಾ ಅವರ ಹೆಸರಿನ ಗಗನನೌಕೆ 'ಎನ್‌ಜಿ 14 ಸಿಗ್ನಸ್' ನ್ನು

ಯಶಸ್ವಿಯಾಗಿ ಉಡಾವಣೆ ಮಾಡಿದೆ.

* ಕಲ್ಪನಾ ಚವಾಲಾ ಅವರ ಹೆಸರಿನ ಗಗನ ನೌಕೆಯು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಸರಕು ಮತ್ತು ಸರಬರಾಜುಗಳನ್ನು ಸಾಗಿಸಲು ಉಡಾಯಿಸಲಾಗಿದೆ.

* ಅಮೆರಿಕಾವು ಈ ನೌಕೆಯನ್ನು ವರ್ಜಿನಿಯಾದ ನಾಸಾ ವಾಲಪ್ಸ್ ಫ್ಲೈಟ್ ಫೆಸಿಲಿಟಿಯಿಂದ ಉಡಾವಣೆಗೊಳಿಸಿದ್ದು, ಎರಡು ದಿನಗಳ ಬಳಿಕ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಲಿದೆ.

### ಜಗತ್ತಿನಲ್ಲಿಯೇ ಅತೀ ಎತ್ತರದ ಸುರಂಗ ಪ್ರಧಾನಿಯಿಂದ ಉದ್ಘಾಟನೆ




ಜಗತ್ತಿನಲ್ಲಿಯೇ ಅತೀ ಎತ್ತರದ ಸುರಂಗ ಎಂಬ ಖ್ಯಾತಿಗೆ ಪಾತ್ರವಾದ ಶಿಮ್ಲಾ ಸಮೀಪ ನಿರ್ಮಿಸಿರುವ ಒಟ್ಟು 9.02 ಕಿ.ಮೀ ಉದ್ದದ ಅಟಲ್ ಸುರಂಗ ಹೆದ್ದಾರಿ ಮಾರ್ಗವನ್ನು ಇದೆ ಅಕ್ಟೋಬರ್ 03 ರಂದು ಪ್ರಧಾನಿ ನರೇಂದ್ರ ಮೋದಿಯವರು ಉದ್ಘಾಟಿಸಿದರು.

* ಈ ಸುರಂಗ ಹೆದ್ದಾರಿಯು ಮನಾಲಿ ಹಾಗೂ ಲಹೌಲ್ ಸ್ಪಿತಿ ಕಣಿಯನ್ನು ವರ್ಷದ ಎಲ್ಲ ದಿನಗಳಲ್ಲಿಯೂ ಸಂಪರ್ಕಿಸಲಿದೆ.

* ಈ ಸುರಂಗವನ್ನು ಸಮುದ್ರ ಮಟ್ಟದಿಂದ ಸರಾಸರಿ 3,000 ಮೀಟರ್ (10,000 ಅಡಿ) ಎತ್ತರದಲ್ಲಿ ನಿರ್ಮಿಸಲಾಗಿದೆ.

* ಸುರಂಗದಲ್ಲಿ 5.525ಮೀಟರ್ಎತ್ತರದವರೆಗಿನ ವಾಹನಗಳಓಡಾಟಕ್ಕೆಅವಕಾಶವಿದೆ.

* ಸುರಂಗದಲ್ಲಿ ಹಲವು ಆಧುನಿಕ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ ಪ್ರಮುಖವಾಗಿ ಎರಡೂ ಬದಿಗಳಲ್ಲಿ ಪ್ರವೇಶ ನಿರ್ಬಂಧ. ತುರ್ತು ಸಂಪರ್ಕಕ್ಕಾಗಿ ದೂರವಾಣಿ ಸಂಪರ್ಕ ಸೇವೆ. ಪ್ರತಿ 60 ಮೀಟರಿಗೊಂದರಂತೆ ಅಗ್ನಿಶಾಮಕ ವ್ಯವಸ್ಥೆ. ಪ್ರತಿ 250 ಮೀಟರ್ ಗೆ ಒಂದರಂತೆ ಸಿಸಿಟಿವಿ ಕ್ಯಾಮೆರಾ ಸೇರಿ ಹಲವು ಸುರಕ್ಷಾ ಕ್ರಮಗಳನ್ನ ಕೈಗೊಳ್ಳಲಾಯಿದೆ.

### ಸಿಂಗಾಪುರ ಮೂಲದ ಜಿಐಸಿ ಮತ್ತು ಟಿಪಿಜಿ ಕಂಪನಿಯಿಂದ ರಿಲಯನ್ಸ್‌ನಲ್ಲಿ ಹೂಡಿಕೆ




ನವದೆಹಲಿ : ಇತ್ತೀಚಿಗೆ ಏಷ್ಯಾದ ಅತಿ ಶ್ರೀಮಂತ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದ ಮುಖೇಶ್ ಅಂಬಾನಿಯವರ ಸಾರಥ್ಯದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಸ್ಥೆಯಲ್ಲಿ ಸಿಂಗಾಪುರ ಮೂಲದ ಜಿಐಸಿ ಮತ್ತು ಟಿಪಿಜಿ ಕಂಪನಿಗಳು ರಿಲಯನ್ಸ್ ರೀಟೇಲ್ ಯುನಿಟ್‌ನಲ್ಲಿ ಒಟ್ಟು 7,35 ಕೋಟಿ ರೂ. ಹೂಡಿಕೆ ಮಾಡಿವೆ. ಈ ಮೂಲಕ ರಿಲಯನ್ಸ್ ರೀಟೇಲ್ ವೆಂಚರ್ಸ್ ಲಿಮಿಟೆಡ್‌ನ ಶೇಕಡ 1.63 ಪಾಲನ್ನು ಖರೀದಿಸಿವೆ.

## 05-10-2020

### ಬಿಹಾರ ಚುನಾವಣೆಗೆ ಅಧಿಕಾರಿಯಾಗಿ ತೃತೀಯಲಿಂಗಿ ಮಹಿಳೆ ನೇಮಕ



ನವದೆಹಲಿ: ಇದೆ ಮೊದಲ ಬಾರಿಗೆ ಬಿಹಾರ ವಿಧಾನಸಭಾ ಚುನಾವಣೆಗೆ ಅಧಿಕಾರಿಯಾಗಿ ಲಿಂಗ ಬದಲಾವಣೆಗೊಂಡ ಮಹಿಳೆಯೊಬ್ಬರನ್ನು ನೇಮಕ ಮಾಡಲಾಗಿದೆ.

* ಇದೆ ಅಕ್ಟೋಬರ್ 28 ರಂದು ನಡೆಯಲಿರುವ ಬಿಹಾರ ಚುನಾವಣಾ ಅಧಿಕಾರಿಯಾಗಿ ಮೋನಿಕಾ ದಾಸ್ ನೇಮಕಗೊಂಡದ್ದಾರೆ. ಇವರು ಪಾಟ್ನಾ ವಿವಿಯಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಯಾಗಿದ್ದು, 2015 ರಿಂದ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಕೆಲಸ ಮಾಡಿದ ಮೊದಲ ತೃತೀಯ ಲಿಂಗಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ದೇಶದ ಯಾವುದೇ ರಾಜ್ಯದಲ್ಲಿಯೂ ಇದುವರೆಗೆ ತೃತೀಯಲಿಂಗಿಯನ್ನು ಚುನಾವಣೆಯಲ್ಲಿ ಕರ್ತವ್ಯಕ್ಕೆ ನೇಮಿಸಿಲ್ಲ, ಆದರೆ ಬಿಹಾರ ಮೊದಲ ಬಾರಿಗೆ ಈ ರೀತಿ ತೃತೀಯ ಲಿಂಗಿ ಅಧಿಕಾರಿಯೊಬ್ಬರನ್ನು ನೇಮಿಸುವ ಮೂಲಕ ಐತಿಹಾಸಿಕ ದಾಖಲೆ ಹೊಂದಿದೆ.

### ವಿಶ್ವದ ಮೊದಲ ವಿಧಿವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆ: ಕೇಂದ್ರ ಸಚಿವ ಕಿಶನ್ ರೆಡ್ಡಿ



ಹೈದರಾಬಾದ್: ವಿಶ್ವದ ಮೊದಲ ವಿಧಿವಿಜ್ಞಾನ ವಿಶ್ವವಿದ್ಯಾಲಯವನ್ನು ಭಾರತದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದ್ದು, ಈ ಕುರಿತು ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ಜಿ ಕಿಶನ್ ರೆಡ್ಡಿ ಮಾಹಿತಿ ನೀಡೀದ್ದಾರೆ.

### ಕೊರೋನಾ : ಶಾಲೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಲ್ಲ



ನವದೆಹಲಿ : ಬರುವ ತಿಂಗಳಲ್ಲಿ ದೇಶದ ಎಲ್ಲ ಶಾಲೆಗಳು ಆರಂಭಗೊಳ್ಳುವ ನಿರೀಕ್ಷೆಯಿದ್ದು, ಕೋವಿಡ್ 19 ಸಾಂಕ್ರಾಮಿಕ ರೋಗ ಹರಡುವ ಆತಂಕ ಪಾಲಕರಲ್ಲಿರುವ ಕಾರಣ, ಆರಂಭಿಕ ಹಂತದಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗುವುದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ್ ವರ್ಧನ್ ಅವರು ಮಾಹಿತಿ ನೀಡಿದ್ದಾರೆ.

* ಶಾಲೆಗಳಿಗೆ ಹಾಜರಾಗುವ ಮಕ್ಕಳ ಪಾಲಕರು ಮಕ್ಕಳನ್ನು ಶಾಲೆಗೆ ಸೇರಿಸುವ ಮುನ್ನ ಸಹಿ ಮಾಡಿದ ಒಪ್ಪಿಗೆ ಪತ್ರವನ್ನು ನೀಡುವದು ಕಡ್ಡಾಯವೆಂದು ಇದೆ ವೇಳೆ ಅವರು ತಿಳಿಸಿದರು.

### ಮಾಜಿ ಕೇಂದ್ರ ಸಚಿವ ರಶೀದ್ ಮಸೂದ್ ನಿಧನ



ನವದೆಹಲಿ: ಪಶ್ಚಿಮ ಉತ್ತರ ಪ್ರದೇಶದ ಹಿರಿಯ ರಾಜಕಾರಣಿ, ಮಾಜಿ ಕೇಂದ್ರ ಸಚಿವರಾದ ಖಾಜಿ ರಶೀದ್ ಮಸೂದ್ ಅವರು ತಮ್ಮ 73 ನೇ ವಯಸ್ಸಿನಲ್ಲಿ ದೆಹಲಿಯ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾರೆ. ಇವರು ಒಟ್ಟು 09 ಬಾರಿ ಲೋಕಸಭೆ, ರಾಜ್ಯಸಭೆ ಸದಸ್ಯರಾಗಿದ್ದ ಆಯ್ಕೆಯಾಗಿದ್ದರು, ಹಾಗೂ ಕಾಂಗೆಸ್ಸ್ ಆಡಳಿತ ಕೇಂದ್ರ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿ ತಮ್ಮ ಸೇವೆ ಸಲ್ಲಿಸಿದ್ದಾರೆ.

### ರಾಜ್ಯಗಳಿಗೆ ನೀಡುವ ಸಾಲದ ಮೊತ್ತ 1.1 ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಳ



ನವದೆಹಲಿ : ದಿನಾಂಕ 05 ಅಕ್ಟೋಬರ್ 2020 ರಂದು ನಡೆದ 42ನೇ GST ಮಂಡಳಿ ಸಭೆಯಲ್ಲಿ ಇಲ್ಲಿಯವರೆಗೆ ರಾಜ್ಯಗಳಿಗೆ ಮೊದಲ ಸಾಲ ನೀಡುವ ಆಯ್ಕೆಯಲ್ಲಿ ನೀಡಲಾಗುತ್ತಿದ್ದ 97 ಸಾವಿರ ಕೋಟಿ ಸಾಲದ ಮೊತ್ತವನ್ನು 1.1 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸಲು ಒಪ್ಪಿಗೆ ಸೂಚಿಸಿದೆ.

### ಹೆಪಟೈಟಿಸ್ ಸಿ ವೈರಸ್ ಪತ್ತೆ ಹಚ್ಚಿದ ವಿಜ್ಞಾನಿಗಳಿಗೆ ನೊಬೆಲ್ ಪುರಸ್ಕಾರ



ಮಣಿಪಾಲ: ಇಡೀ ವಿಶ್ವದಲ್ಲೇ ಅತ್ಯುನ್ನತ ಪ್ರಶಸ್ತಿ ಎನಿಸಿರುವ ಈ ವರ್ಷದ ಮೊದಲ ನೊಬೆಲ್ ಪ್ರಶಸ್ತಿಯನ್ನು ಘೋಷಿಸಲಾಗಿದ್ದು, ಔಷಧಿ ವಿಭಾಗದಲ್ಲಿ ಹಾರ್ವೆ ಜೆ. ಆಲ್ಟರ್, ಮೈಕೆಲ್ ಹೌಟನ್ ಮತ್ತು ಚಾರ್ಲ್ಸ್ ಎಂ. ರೈಸ್ ಎಂಬ ಮೂರು ವಿಜ್ಞಾನಿಗಳಿಗೆ ಜಂಟಿಯಾಗಿ ನೀಡಲಾಗಿದೆ. ಈ ಮೂವರು ವಿಜ್ಞಾನಿಗಳು ಜಂಟಿಯಾಗಿ ಸಂಶೋಧನೆ ನಡೆಸುವ ಮೂಲಕ ಹೆಪಟೈಟಿಸ್ ಸಿ ವೈರಸ್ ಅನ್ನು ಕಂಡುಹಿಡಿದಿದ್ದಾರೆ. ನೊಬೆಲ್ ಪ್ರಶಸ್ತಿ : ಭೌತಶಾಸ್ತ್ರ, ರಸಾಯನಶಾಸ್ತ್ರ, ಸಾಹಿತ್ಯ, ಶಾಂತಿ ಮತ್ತು ಅರ್ಥಶಾಸ್ತ್ರ ಹಾಗೂ ಔಷಧ ವಿಭಾಗದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಆದರೆ ಗಣಿತ ಕ್ಷೇತ್ರಕ್ಕೆ ಈ ಪುರಸ್ಕಾರವನ್ನು ಕೊಡಲಾಗುವುದಿಲ್ಲ.

## ಭಾರತದಿಂದ ಶಕ್ತಿಶಾಲಿ SMART ಕ್ಷಿಪಣಿ ಯಶಸ್ವಿಪ್ರಯೋಗ



ನವದೆಹಲಿ : ಭಾರತವು ಇತ್ತೀಚಿಗೆ "SMART" ಎಂಬ ನೂತನ ಕ್ಷಿಪಣಿಯನ್ನು ಯಶಸ್ವಿಯಾಗಿ ಪ್ರಯೋಗಿಸಿದೆ.

* ಈ ಕ್ಷಿಪಣಿಯು ಸಮುದ್ರದಾಳದಲ್ಲಿರುವ ಶತ್ರುದೇಶಗಳ ಸಬ್‌ಮರೀನ್‌ಗಳನ್ನ ಪತ್ತೆ ಹಚ್ಚಿ ಹೊಡೆದುರುಳಿಸಬಲ್ಲ ಸಾಮರ್ಥ್ಯ ಹೊಂದಿದೆ.
* ಈ ಕ್ಷಿಪಣಿಯನ್ನು ದೇಶಿಯ ತಂತ್ರಜ್ಞಾನದೊಂದಿಗೆ DRDO ನಿರ್ಮಿಸಿದೆ.
* SMART (Supersonic Missile Assisted Release of Torpedo) ಕ್ಷಿಪಣಿಯನ್ನು ಒಡಿಶಾ ರಾಜ್ಯದ ಎಪಿಜೆ ಅಬ್ದುಲ್ ಕಲಾಂ ದ್ವೀಪದಿಂದ ಪರೀಕ್ಷೆಗೊಳಪಡಿಸಲಾಯಿತು.
* ಯುದ್ಧನೌಕೆಗಳಲ್ಲಿ ಈ ಕ್ಷಿಪಣಿಯನ್ನು ಸುಲಭವಾಗಿ ಸಾಗಿಸಬಹುದಾಗಿದ್ದು, ಸಾಮಾನ್ಯ ಸೂಪರ್ ಸಾನಿಕ್ ಕ್ಷಿಪಣಿ ರೀತಿಯಲ್ಲೇ ಇದನ್ನು ಉಡಾವಣೆ ಮಾಡಬಹುದಾಗಿದೆ.

# 06-10-2020

## ಕಸ್ತೂರಿರಂಗನ್ ವರದಿ ಜಾರಿಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಆದೇಶ



ಬೆಂಗಳೂರು: ಭಾರತದ ಪಶ್ಚಿಮಘಟ್ಟ ಪ್ರದೇಶದ ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಸಂಬಂಧಿಸಿದ ಕಸ್ತೂರಿ ರಂಗನ್ ವರದಿಯನ್ನು ಇದೆ ಡಿಸೆಂಬರ್ 31 ರೊಳಗೆ ಸಂಬಂಧಪಟ್ಟ ರಾಜ್ಯಗಳಲ್ಲಿ ಜಾರಿಗೊಳಿಸುವಂತೆ ಗಡವು ನೀಡಿ ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಆದೇಶ ಹೊರಡಿಸಿದೆ. ಅಲ್ಲದೆ ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಹಾಗೂ ವಿಳಂಬ ಮಾಡಿದರೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ನ್ಯಾಯಾಧಿಕರಣ ತಿಳಿಸಿದೆ.

## ದುಬೈನಲ್ಲಿ ವಿಶ್ವದ ಅತಿ ದೊಡ್ಡ ಕಾರಂಜಿ ಶೀಘ್ರಆರಂಭ



ದುಬೈ: ಪ್ರವಾಸೋದ್ಯಮದಲ್ಲಿ ಮುಂಚೂಣಿಯಲ್ಲಿರುವ ದುಬೈ ಇದೀಗ ಮತ್ತೊಂದು ನೂತನ ದಾಖಲೆಗೆ ಸಿದ್ಧಗೊಂಡಿದೆ, ಇಲ್ಲಿ ನಿರ್ಮಿಸಲಾಗಿರುವ ವಿಶ್ವದ ಅತಿ ದೊಡ್ಡ ಕಾರಂಜಿಯನ್ನು ಇದೇ ತಿಂಗಳ 22ರಂದು ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುವದು.

* ದುಬೈನ ಪಾಯಿಂಟೆ ಪ್ರದೇಶದಲ್ಲಿ ನಿರ್ಮಿಸಿರುವ ಈ ಕಾರಂಜಿಯು ಒಟ್ಟು 14,000 ಚದರ ಅಡಿಯಷ್ಟು ಪ್ರದೇಶದಲ್ಲಿ ವ್ಯಾಪಿಸಿದೆ.
* ಕಾರಂಜಿ ನಿರ್ಮಾಣಕ್ಕೆ ಬಳಸಿರುವ 'ಸೂಪರ್ ಶೂಟರ್'ಗಳು 105 ಮೀಟರ್‌ನಷ್ಟು ಎತ್ತರವಾಗಿವೆ.
* 3,000ಕ್ಕೂ ಅಧಿಕ ಎಲ್‌ಇಡಿ ದೀಪಗಳನ್ನು ಈ ಕಾರಂಜಿ ಒಳಗೊಂಡಿದೆ.
* ಪ್ರತಿದಿನ ರಾತ್ರಿ 7 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಖಲೀಜಿ, ಪಾಪ್, ಕ್ಲಾಸಿಕ್ ಹಾಗೂ

ಪಾಶ್ಚಿಮಾತ್ಯ ದೇಶಗಳ ಪ್ರಸಿದ್ಧ ಹಾಡುಗಳು ಮೂಲಕ ಪ್ರೇಕ್ಷಕರ ಮನತಣಿಸಲಿದೆ.

### ಕೇರಳದ ಎರ್ನಾಕುಳಂನಲ್ಲಿ ರೋಮನ್ ಸಾಮ್ರಾಜ್ಯ ಸ್ಫಿಂಕ್ಸ್ ಪತ್ತೆ



ಕೇರಳ ರಾಜ್ಯದ ಎರ್ನಾಕುಳಂ ಜಿಲ್ಲೆಯ ಪಟ್ಟಾನಂ ಗ್ರಾಮದ ವ್ಯಾಪ್ತಿಯ ಮನೆಯೊಂದರಲ್ಲಿ ಪ್ರಾಚೀನ ಕಾಲದ ರೋಮನ್ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಕುರುಹುಗಳು ಪತ್ತೆಯಾಗಿವೆ. ಪಟ್ಟಾನಂ ಗ್ರಾಮದ ಮನೆಯ ಹಿತ್ತಿಲಿನಲ್ಲಿ ಸಂಶೋಧನೆ ನಡೆಸಿದಾಗ 1.2 ಸೆಂಟಿಮೀಟರ್ ಉದ್ದದ ಸ್ಫಿಂಕ್ಸ್ (ಹೆಣ್ಣಿನ ಮುಖ ಮತ್ತು ಸಿಂಹದ ದೇಹವಿರುವ ರೆಕ್ಕೆಯುಳ್ಳ ಆಕೃತಿ) ಪತ್ತೆಯಾಗಿದೆ. ಈ ಮಾದರಿಯು ರೋಮನ್ ಸಾಮ್ರಾಜ್ಯದ ಮೊದಲನೇ ಚಕ್ರವರ್ತಿ ಅಗಸ್ಟಸ್ ಸೀಸರ್ ನ ಕಾಲಕ್ಕೆ ಸೇರಿದ್ದಾಗಿ ತಿಳಿದು ಬಂದಿದೆ. ಇನ್ನು ಪೆರಿಯಾರ್ ನದಿ ಹಿನ್ನೀರಿನ ವ್ಯಾಪ್ತಿಯಲ್ಲಿ ಈ ಮನೆಯಿರುವ ಕಾರಣ ಈ ಪ್ರದೇಶದಿಂದ ರೋಮ್‌ವರೆಗೆ ಇತಿಹಾಸ ಕಾಲದಲ್ಲಿ ವ್ಯಾಪಾರ ಸಂಬಂಧಗಳಿದ್ದಿರುವ ಸಾಧ್ಯತೆ ಇದೆ.

### ಹರ್ ಘರ್ ಜಲ್ ಯೋಜನೆ ಅನುಷ್ಠಾನದಲ್ಲಿ ರಾಜ್ಯಕ್ಕೆ 14ನೇ ಸ್ಥಾನ



ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "ಹರ್ ಘರ್ ಜಲ್ ಯೋಜನೆ"(ಪ್ರತಿ ಮನೆಗೆ ನೀರು) ಯಾ ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯವು 14 ನೇ ಸ್ಥಾನವನ್ನು ಪಡೆದುಕೊಂಡಿದೆ. ಕೇಂದ್ರಸರ್ಕಾರವು ಈ ಯೋಜನೆಯ ಮೂಲಕ ದೇಶದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರೊದಗಿಸುವ ಮುಖ್ಯ ಉದ್ದೇಶಹೊಂದಿದೆ. ಇನ್ನು ಈ ಯೋಜನೆಯ ಜಾರಿಯಲ್ಲಿ ಕರ್ನಾಟಕ ರಾಜ್ಯವು ಕೇವಲ ಶೇ.29 ಗುರಿ ಸಾಧಿಸಿದ್ದು, ದೇಶದ ರಾಜ್ಯಗಳ ಪೈಕಿ 14ನೇ ಸ್ಥಾನ ಪಡೆದಿದೆ.

* ಪ್ರಧಾನಿ ನರೇಂದ್ರ ಮೋದಿಯವರು 2019ರ ಆಗಸ್ಟ್ 15 ರ ಭಾಷಣದಲ್ಲಿ ಜಲಜೀವನ ಅಭಿಯಾನ ಘೋಷಿಸಿದ್ದರು, ಹಾಗು ಈ ಯೋಜನೆಯ ಮೂಲಕ ದೇಶದ ಸುಮಾರು 19 ಕೋಟಿ ಕುಟುಂಬಗಳಿಗೆ ನೇರವಾಗಿ ನೀರೊದಗಿಸುವದಾಗಿ ಹಾಗು ಯೋಜನೆಯನ್ನು 2024 ರೊಳಗಾಗಿ ಯೋಜನೆ ಪೂರ್ಣಗೊಳಿಸುವ ಕುರಿತು ತಿಳಿಸಿದ್ದರು.

* ಗೋವಾ ಎಲ್ಲ 2.63 ಲಕ್ಷ ಮನೆಗಳಿಗೆ ನೀರು ಒದಗಿಸುವ ಮೂಲಕ ಇತ್ತೀಚಿಗಷ್ಟೇ ಶೇ.100 ಗುರಿ ಸಾಧಿಸಿದೆ.

## 07-10-2020

### ಬಾಂಗ್ಲಾ ದೇಶದಲ್ಲಿ ಬೆಲ್ಟ್ ಅಯಂಡ್ ರೋಡ್ ಯೋಜನೆ ನಿರ್ಮಿಸುವುದಾಗಿ ಚೀನಾ ಘೋಷಣೆ




ಬೀಜಿಂಗ್ : ಭಾರತದ ನೆರೆಯ ರಾಷ್ಟ್ರ ಚೀನಾವು ಬಾಂಗ್ಲಾ ದೇಶದಲ್ಲಿ ಬಹು ಬಿಲಿಯನ್ ಡಾಲರ್ ಮೊತ್ತದಲ್ಲಿ "ಬೆಲ್ಟ್ ಆಯಂಡ್ ರೋಡ್" ಯೋಜನೆ ನಿರ್ಮಿಸುವದಾಗಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಘೋಷಿಸಿದ್ದಾರೆ. ಇತ್ತೀಚಿಗೆ ನಡೆದ ಚೀನ ಬಾಂಗ್ಲಾ ನಡುವಿನ ದ್ವಿಪಕ್ಷೀಯ ಸಂಬಂಧದ 45ನೇ ವಾರ್ಷಿಕೋತ್ಸವ ಸಭೆಯಲ್ಲಿ ಮಾತನಾಡಿದ ಚೀನಾ ಅಧ್ಯಕ್ಷ ಜಿನ್‌ಪಿಂಗ್ ಅವರು ಈ ಯೋಜನೆ ಘೋಷಿಸಿದ್ದು, ಈ ಯೋಜನೆ ಮೂಲಕ ಬಾಂಗ್ಲಾ ಚೀನಾ ನಡುವಿನ ಬಾಂಧವ್ಯವನ್ನು ಮತ್ತಷ್ಟು ಹೆಚ್ಚಿಸುವುದಾಗಿ ಇದೆ ವೇಳೆ ಅವರು ತಿಳಿಸಿದರು.

* ವಾಣಿಜ್ಯ ವ್ಯಾಪಾರ ಉದ್ದೇಶದಿಂದ ಏಷ್ಯಾ ಯುರೋಪ್ ನಿಂದ ಆಫ್ರಿಕದವರೆಗೆ ಒಂದೇ ರಸ್ತೆ ನಿರ್ಮಿಸುವ ಮುಖ್ಯ ಯೋಜನೆ ಇದಾಗಿದೆ.

* ಈ ಯೋಜನೆಯ ಮೂಲಕ ಸುಮಾರು 70 ರಾಷ್ಟ್ರಗಳಿಗೆ ರಸ್ತೆ ಸಂಪರ್ಕ ಸಾಧಿಸುವುದು ಚೀನಾದ ಮುಖ್ಯ ಉದ್ದೇಶವಾಗಿದೆ.

### ಜಗತ್ತಿನಲ್ಲಿ ಶೇಕಡಾ 10 ರಷ್ಟು ಜನರು ಕೊರೋನಸೋಂಕು ಪೀಡಿತ: WHO

ಜಿನೀವ (ಸ್ವಿಟ್ಸರ್‌ಲ್ಯಾಂಡ್) : ಈಗಾಗಲೇ ಜಗತ್ತಿನ ಸುಮಾರು ಶೇಕಡಾ 10 ರಷ್ಟು ಜನರು ಕೊರೋನ ವೈರಸ್ ಸೋಂಕಿಗೆ ಗುರಿಯಾಗಿರುವ ಸಾಧ್ಯತೆ ಇರುವದಾಗಿ ವಿಶ್ವ ಆರೋಗ್ಯ ಸಂಸ್ಥೆ ಅಭಿಪ್ರಾಯ ಪಟ್ಟಿದೆ. ಅಂದರೆ ಪ್ರತಿ ಹತ್ತು ಜನರಲ್ಲಿ ಒಬ್ಬರಿಗೆ ಸೋಂಕು ತಗಳಿರುವುದಾಗಿ ವಿಶ್ವಸಂಸ್ಥೆ ತಿಳಿಸಿದೆ. ಈ ಮೂಲಕ ಜಗತ್ತಿನ ಅತಿ ಹೆಚ್ಚಿನ ಜನಸಮುದಾಯ ಈ ಸಾಂಕ್ರಾಮಿಕದ ಸೋಂಕಿಗೆ ಗುರಿಯಾಗುವ ಅಪಾಯ ಎದುರಾಗಿದೆ.

### ರಾಜ್ಯದಲ್ಲಿ 'ಕರಾವಲೆನ್ಸ್' ಎಂಬ ಹೊಸಸಸ್ಯಪ್ರಭೇದ ಪತ್ತೆ



ರಾಜ್ಯದ ಕರಾವಳಿಯುದ್ದಕ್ಕೂ ವ್ಯಾಪಿಸಿರುವ ಪಶ್ಚಿಮ ಘಟ್ಟಗಳು ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಜೀವವೈವಿಧ್ಯ ಹೊಂದಿರುವ ತಾಣವಾಗಿ ಗುರುತಿಸಿಕೊಂಡಿವೆ. ಇದೀಗ ಪಶ್ಚಿಮಘಟ್ಟ ಪರ್ವತ ಶ್ರೇಣಿಗಳ ಕರ್ನಾಟಕ ವಲಯದಲ್ಲಿ ಮತ್ತೊಂದು ಹೊಸ ಸಸ್ಯ ಪ್ರಭೇದವನ್ನು ವಿಜ್ಞಾನಿಗಳು ಗುರುತಿಸಿದ್ದಾರೆ. ಈ ಸಸ್ಯ ಪ್ರಭೇದವು ಪಶ್ಚಿಮಘಟ್ಟದ ಉತ್ತರ ಕನ್ನಡ ಜಿಲ್ಲೆ ಕುಮಟಾ ಭಾಗದ ಲ್ಯಾಟರೈಟ್ ಕಲ್ಲುಗಳ ಮೇಲೆ ಪತ್ತೆಯಾಗಿದ್ದು, ಕರ್ನಾಟಕದ 'ಕರಾವಳಿ' ಹೋಲುವ 'ಎರಿಯೋಕಾಲನ್ ಕರಾವಲೆನ್ಸ್' ಎಂದು ನಾಮಕರಣ ಮಾಡಲಾಗಿದೆ. ಇದುವರೆಗೆ ಒಟ್ಟು 1,814 ಹೂಬಿಡದ ಪ್ರಭೇದಗಳನ್ನು ಒಳಗೊಂಡಿದ್ದ ಪಶ್ಚಿಮಘಟ್ಟಕ್ಕೆ ಪ್ರದೇಶಕ್ಕೀಗ ಹೊಸ ಪ್ರಭೇದ ಸೇರ್ಪಡೆಯಾಗಿದೆ.

### 2020 ರ ಡಾ.ಶಿವರಾಮ ಕಾರಂತ ಬಾಲವನ ಪ್ರಶಸ್ತಿಗೆ ಪ್ರೊ.ಅಮೃತ ಸೋಮೇಶ್ವರ ಆಯ್ಕೆ



ಮಂಗಳೂರು ಜಿಲ್ಲೆ ಪುತ್ತೂರಿನ ಶಿವರಾಮ ಕಾರಂತ ಬಾಲವನ ಪ್ರತಿಷ್ಠಾನದಿಂದ ಪ್ರತಿವರ್ಷ ಕೊಡಮಾಡುವ 2020ನೇ ಸಾಲಿನ ಶಿವರಾಮ ಕಾರಂತ ಬಾಲವನ ಪ್ರಶಸ್ತಿಗೆ ಹಿರಿಯ ಸಾಹಿತಿ, ಸಂಶೋಧಕ, ಪ್ರಸಂಗಕರ್ತ ಪ್ರೊ.ಅಮೃತ ಸೋಮೇಶ್ವರವರನ್ನು ಆಯ್ಕೆ ಮಾಡಲಾಗಿದೆ. ಡಾ.ಶಿವರಾಮ ಕಾರಂತರ ಜನ್ಮ ದಿನಾಚರಣೆಯ ಪ್ರಯುಕ್ತ, ಪ್ರಶಸ್ತಿ ಪ್ರದಾನ ಸಮಾರಂಭವು ಇದೆ ಅಕ್ಟೋಬರ್ 10ರಂದು ಪುತ್ತೂರಿನ ಬಾಲವನದಲ್ಲಿ ನಡೆಯಲಿದ್ದು, ಸೋಮೇಶ್ವರ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಗುವದು.

* ಪ್ರಶಸ್ತಿಯು ₹25 ಸಾವಿರ ನಗದು, ಫಲಕ, ಪ್ರಮಾಣ ಪತ್ರ, ಶಾಲು, ಹಾರಗಳನ್ನು ಒಳಗೊಂಡಿದೆ.

### 88ನೇ IAF ದಿನಾಚರಣೆ : ರಫೇಲ್ ಫೈಟರ್ ಜೆಟ್ ಸೇರಿ ವಿವಿಧ ವಿಮಾನಗಳ ತಾಲೀಮಿಗೆ ಸಿದ್ಧತೆ



ನವದೆಹಲಿ : ಪ್ರತಿ ವರ್ಷ ಅಕ್ಟೋಬರ್ 08 ರಂದು ಭಾರತೀಯ ವಾಯುಪಡೆಯ ವಾರ್ಷಿಕ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ಬಾರಿ IAF ತನ್ನ 88 ನೇ ವಾರ್ಷಿಕ ದಿನಾಚರಣೆ ಇದೆ ಅಕ್ಟೋಬರ್ 8ರಂದು ಆಚರಿಸಿಕೊಳ್ಳಲಿದೆ. ಈ ವಾರ್ಷಿಕೋತ್ಸವದ ಅದ್ದೂರಿ ಕಾರ್ಯಕ್ರಮಕ್ಕಾಗಿ ಹಲವು ಸಿದ್ಧತೆಗಳು ನಡೆದಿದ್ದು, ಘಾಜಿಯಾಬಾದ್‌ನ ಹಿಂಡೋನ್ ವಾಯುನೆಲೆಯಲ್ಲಿ ಈಗಾಗಲೇ ರಫೇಲ್ ಫೈಟರ್ ಜೆಟ್ ಸೇರಿ ಭಾರತೀಯ ವಾಯುಪಡೆಯ ಅನೇಕ
ಯುದ್ಧ ವಿಮಾನಗಳು ವಿವಿಧ ಪ್ರದರ್ಶನದ ತಾಲೀಮು ನಡೆಸಿದವು.

### ಸ್ಟೇಟ್ ಬ್ಯಾಂಕ್ ಇಂಡಿಯಾ ಅಧ್ಯಕ್ಷರಾಗಿ ದಿನೇಶ್ ಕುಮಾರ್ ಖರಾ ನೇಮಕ



ನವದೆಹಲಿ: ಹಿರಿಯ ಬ್ಯಾಂಕರ್ ದಿನೇಶ್ ಕುಮಾರ್ ಖರಾ ಅವರನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(SBI)ನ ನೂತನ ಅಧ್ಯಕ್ಷರನ್ನಾಗಿ ನೇಮಿಸಿ ಸರ್ಕಾರ ಆದೇಶಿಸಿದೆ. ಇಲ್ಲಿಯವರೆಗೆ ಈ ಹುದ್ದೆಯನ್ನು, ರಜನೀಶ್ ಕುಮಾರ್ ನಿರ್ವಹಿಸುತ್ತಿದ್ದು, ಅವರ ಮೂರು ವರ್ಷಗಳ ಸೇವೆ ಪೂರ್ಣಗೊಂಡ ಹಿನ್ನೆಲೆ ಸರ್ಕಾರ ನೂತನ ಅಧ್ಯಕ್ಷರಾಗಿ ದಿನೇಶ್ ಕುಮಾರ್ ಖರಾ ಅವರನ್ನು ನೇಮಿಸಿದೆ. ಇನ್ನು ದಿನೇಶ್ ಕುಮಾರ್ ಖರಾ ಅವರು ಮುಂದಿನ ಮೂರೂ ವರ್ಷಗಳವರೆಗೆ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ.

## 08-10-2020

### ತಂತ್ರಜ್ಞಾನದ ಹಕ್ಕುಸ್ವಾಮ್ಯ : 'ಸುಪ್ರೀಂ' ಮೆಟ್ಟಿಲೇರಿದ ಒರಾಕಲ್ ಮತ್ತು ಗೂಗಲ್




ವಾಷಿಂಗ್ಟನ್ : ತಂತ್ರಜ್ಞಾನ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆಗಳಾದ ಗೂಗಲ್ ಹಾಗು ಒರಾಕಲ್ ನಡುವೆ ಹಕ್ಕುಸ್ವಾಮ್ಯ ಕುರಿತು ವಿವಾಧ ಉಂಟಾಗಿದ್ದು, ಪ್ರಸ್ತುತ ಪ್ರಕರಣವು ಅಮೆರಿಕದ ಸುಪ್ರೀಂ ಕೋರ್ಟ್ ಅಂಗಳದಲ್ಲಿದ್ದು, ಕೋಟ್ಯಂತರ ಡಾಲರು ಮೊತ್ತದ ಪ್ರಕರಣ ಇದಾಗಿದೆ. ಪ್ರಸ್ತುತ ಗೂಗಲ್ ಅಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ ನಲ್ಲಿ ಬಳಸಿಕೊಳ್ಳಲಾದ ಲಕ್ಷಾಂತರ ಹೊಸ ಕಂಪ್ಯೂಟರ್ ಕೋಡ್‌ಗಳ ಪೈಕಿ ಒರಾಕಲ್‌ನ ಜಾವಾ ತಂತ್ರಜ್ಞಾನ ಕೂಡ ಒಳಗೊಂಡಿದೆ. ಇದೆ ಕಾರಣಕ್ಕಾಗಿ ಒರಾಕಲ್ ಸಂಸ್ಥೆಯು 'ಇದು ಕೃತಿಚೌರ್ಯ ಹಾಗೂ ಹಕ್ಕುಸ್ವಾಮ್ಯದ ಉಲ್ಲಂಘನೆಯಾಗಿದೆ' ಎಂದು ಸುಪ್ರೀಂ ಕೋರ್ಟ್ ಮೆಟ್ಟಲೇರಿದೆ.

### ಕಪ್ಪು ಕುಳಿಗಳ ಕುರಿತ ಸಂಶೋಧಕರಿಗೆ ಭೌತಶಾಸ್ತ್ರ ನೊಬೆಲ್ ಪ್ರಶಸ್ತಿ



ಸ್ಟಾಕ್‌ಹೋಮ್ : ಬ್ರಿಟನ್‌ನ ರೋಜರ್ ಪೆನ್ ರೋಸ್, ಜರ್ಮನಿಯ ರೈನ್‌ಹಾರ್ಟ್ ಗೆಂಝೆಲ್ ಮತ್ತು ಅಮೆರಿಕದ ಆಯಂಡ್ರಿಯಾ ಗೇಝ್‌ರಿಗೆ ಎಂಬ ಮೂವರು ವಿಜ್ಞಾನಿಗಳು ಕಪ್ಪು ಕುಳಿಗಳ ಬಗ್ಗೆ ನಡೆಸಿದ ಸಂಶೋಧನೆಗಳನ್ನು ಪರಿಗಣಿಸಿ 2020 ನೇ ಸಾಲಿನ ಭೌತಶಾಸ್ತ್ರ ನೊಬೆಲ್ ಪ್ರಶಸ್ತಿಯನ್ನು ಜಂಟಿಯಾಗಿ ಘೋಷಣೆ ಮಾಡಲಾಗಿದೆ. ಕಪ್ಪು ಕುಳಿ : ಕಪ್ಪು ಕುಳಿ ಒಂದು ಬಾಹ್ಯಾಕಾಶದ ಒಂದು ಭಾಗವಾಗಿದ್ದು, ಇದರಲ್ಲಿನ ದ್ರವ್ಯವು ಒತ್ತೊತ್ತಾಗಿ ಬೆಸೆದುಕೊಂಡಿದ್ದು, ಇದರಿಂದ ಉಂಟಾಗುವ ಗುರುತ್ವ ಕ್ಷೇತ್ರದಿಂದ ತಪ್ಪಿಸಿಕೊಳ್ಳಲು ಬೆಳಕಿಗೂ ಕೂಡ ಸಾಧ್ಯವಾಗುವುದಿಲ್ಲ.

### ಇಂಡೋ ಪೆಸಿಫಿಕ್ ಪ್ರಾಂತ್ಯದಲ್ಲಿ ಚೀನ ಉದ್ಧತನ ನಿಯಂತ್ರಣಕ್ಕೆ ಸಂಕಲ್ಪ



ನವದೆಹಲಿ : ಇತ್ತೀಚಿಗೆ ಜಪಾನ್ ರಾಜಧಾನಿ ಟೋಕಿಯೋದಲ್ಲಿ ಭಾರತ, ಆಸ್ಟ್ರೇಲಿಯಾ, ಜಪಾನ್, ಅಮೆರಿಕ ರಾಷ್ಟ್ರಗಳ ವಿದೇಶಾಂಗ ಸಚಿವರ ಚತುಷ್ಕೋನ ಭದ್ರತಾ ಸಮ್ಮೇಳನ (ಕ್ವಾಡ್ ಸಮ್ಮೇಳನ) ನಡೆಯಿತು. ಈ ಸಮ್ಮೇಳನದಲ್ಲಿ ಎಲ್ಲ ರಾಷ್ಟ್ರಗಳ ಮುಖ್ಯಸ್ಥರುಗಳು ಇಂಡೋ ಪೆಸಿಫಿಕ್ ಪ್ರಾಂತ್ಯದಲ್ಲಿನ ಚೀನದ ಉದ್ಧಟತನವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಪರಸ್ಪರ ಸಹಕಾರ ನೀಡುವ ಕುರಿತು ನಿರ್ಧಾರಕ್ಕೆ ಬರಲಾಯಿತು. ಈ ಚತುಷ್ಕೋನ ಭದ್ರತಾ ಸಮ್ಮೇಳನ ಸಭೆಯಲ್ಲಿ ಭಾರತದಿಂದ ವಿದೇಶಾಂಗ ಸಚಿವ ಜೈಶಂಕರ್, ಅಮೆರಿಕದ ವಿದೇಶಾಂಗ ಸಚಿವ ಮೈಕ್ ಪೊಂಪಿಯೊ , ಆಸ್ಟ್ರೇಲಿಯಾದ ಮ್ಯಾರಿಸ್ ಪಾಯ್ನೆ ಹಾಗೂ ಜಪಾನ್‌ನ ತೊಷಿಮಿಟ್ಸು ಮೊಟೆಗಿ ಭಾಗಿಯಾಗಿದ್ದರು.

### ಮಹಿಳಾ ವಿಜ್ಞಾನಿಗಳ ಪಾಲಾದ ರಸಾಯನಶಾಸ್ತ್ರ ವಿಭಾಗದ ನೊಬೆಲ್ ಪುರಸ್ಕಾರ



2020 ನೇ ಸಾಲಿನ ರಸಾಯನಶಾಸ್ತ್ರದ ನೊಬೆಲ್ ಪುರಸ್ಕೃತರ ಹೆಸರು ಬಹಿರಂಗಗೊಂಡಿದ್ದು, ಈ ವಿಭಾಗದಲ್ಲಿ ವಿಶೇಷ ಸಂಶೋಧನೆ ನಡೆಸಿದ ಇಬ್ಬರು ಮಹಿಳಾ ವಿಜ್ಞಾನಿಗಳಾದ ಎಮ್ಯಾನುಯೆಲ್ ಚಾರ್ಪೆಂಟಿಯರ್ ಮತ್ತು ಜೆನಿಫರ್ ಎ.ಡೌಡ್ನ ಅವರನ್ನು ನೊಬೆಲ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಇಬ್ಬರು ಮಹಿಳಾ ವಿಜ್ಞಾನಿಗಳು ತಳಿಗುಣ(ಜೀನ್) ತಂತ್ರಜ್ಞಾನ (ಜೀನೋಮ್ ಎಡಿಟಿಂಗ್) ವಿಧಾನದ ಅಭಿವೃದ್ಧಿಗಾಗಿ ನಡೆಸಿದ ಸಂಶೋಧನೆಯನ್ನು ಪರಿಗಣಿಸಿ ಈ ಪುರಸ್ಕಾರ ನೀಡಲಾಗಿದೆ.

## 09-10-2020

### 2021ಕ್ಕೆ ಜಗತ್ತಿನಾದ್ಯಂತ 15 ಕೋಟಿ ಜನಕ್ಕೆ ಕಡುಬಡತನ : ವಿಶ್ವ ಬ್ಯಾಂಕ್




ವಾಷಿಂಗ್ಟನ್: ಜಾಗತಿಕವಾಗಿ ವ್ಯಾಪಿಸಿದ ಕೋರೋಣ ಸೋಂಕಿನ ಹಿನ್ನಲೆ ಜಗತ್ತಿನಾದ್ಯಂತ ಕಡುಬಡವರ ಸಂಖ್ಯೆ 2021 ರೊಳಗಾಗಿ 15 ಕೋಟಿ ತಲುಪಬಹುದೆಂದು ವಿಶ್ವ ಬ್ಯಾಂಕ್ ಎಚ್ಚರಿಸಿದೆ. ಕೋರೋಣ ಇಂದಾಗಿ ಬಹುತೇಕ ಎಲ್ಲ ದೇಶಗಳು ವಿಧಿಸಿದ ಲಾಕ್ ಡೌನ್ ಇಂದಾಗಿ ಜನರು ತೀವ್ರವಾಗಿ ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದು, ಎಲ್ಲ ದೇಶಗಳು ಆರ್ಥಿಕತೆಯನ್ನು ಬಲಪಡಿಸುವಲ್ಲಿ ಉತ್ತಮ ಕ್ರಮಗಳನ್ನು ಕೈಗೊಳ್ಳುವದು ಅಗತ್ಯವೆಂದು ವಿಶ್ವ ಬ್ಯಾಂಕ್ ತಿಳಿಸಿದೆ. 1998ರ ಬಳಿಕ ಇದೆ ಮೊದಲ ಬಾರಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಮುಂದಿನ ಒಂದು ವರ್ಷ ಅವಧಿಯಲ್ಲಿ ಶೇಕಡಾ 1.4 ರಷ್ಟು ಜನರು ತೀವ್ರ ಬಡತನಕ್ಕೊಳಗಾಗಲಿದ್ದಾರೆ ಎಂದು ವಿಶ್ವ ಬ್ಯಾಂಕ್ ಎಚ್ಚರಿಸಿದೆ.

### ವಿವಿಧ ತಂತ್ರಜ್ಞಾನಗಳಲ್ಲಿ ಪರಸ್ಪರ ಸಹಕಾರ : ಭಾರತ ಜಪಾನ್ ಒಪ್ಪಂದ



ನವದೆಹಲಿ: 5ಜಿ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ಸೇರಿ ಇತರ ಪ್ರಮುಖ ಕ್ಷೇತ್ರಗಳಲ್ಲಿನ ಬೆಳವಣಿಗೆ ಕುರಿತು ಪರಸ್ಪರ ಸಹಕಾರಕ್ಕಾಗಿ ಭಾರತ ಮತ್ತು ಜಪಾನ್ ರಾಷ್ಟ್ರಗಳು ಇತ್ತೀಚಿಗೆ ಒಪ್ಪಂದ ಮಾಡಿಕೊಂಡಿವೆ. ಚೀನಾ ಮೂಲದ ಸಂಸ್ಥೆ 'ಹುವಾಯಿ' 5ಜಿ ತಂತ್ರಜ್ಞಾನವನ್ನು ಹೊಂದಿದ್ದು, ಈಗಾಗಲೇ ವಿಶ್ವದ ಹಲವು ರಾಷ್ಟ್ರಗಳು ಈ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಿದ್ಧತೆ ನಡೆಸಿವೆ. ಇದೀಗ ಭಾರತ ಕೂಡ ಈ ತಂತ್ರಜ್ಞಾನ ಕುರಿತು ಜಪಾನ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಇನ್ನು ಭದ್ರತಾ ಲೋಪದ ಕಾರಣ "ಹುವಾಯಿ" ಕಂಪನಿಯನ್ನು ಅಮೆರಿಕಾವು ನಿಷೇಧಿಸಿದ್ದು, ಇತರೆ ರಾಷ್ಟ್ರಗಳೂ ಈ ಕಂಪನಿಯ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳದಂತೆ ಸೂಚಿಸಿದೆ.

### IRCTC ಯ ತೇಜಸ್ ಕಾರ್ಪೊರೇಟ್ ರೈಲು ಸೇವೆ ಮತ್ತೆ ಆರಂಭ



ನವದೆಹಲಿ: ಕೋರೋಣ ಹಿನ್ನಲೆ ಸ್ಥಗಿತಗೊಳಿಸಲಾಗಿದ್ದ IRCTC ಯ ತೇಜಸ್ ಎಕ್ಸ್ ಪ್ರೆಸ್ ರೈಲುಗಳ ಕಾರ್ಯಾಚರಣೆಯನ್ನು ಮತ್ತೆ ಇದೆ ದಿನಾಂಕ ಅಕ್ಟೋಬರ್ 17 ರಿಂದ ಲಖನೌ ನವದೆಹಲಿ ಮತ್ತು ಅಹಮದಾಬಾದ್ ಮುಂಬೈ ಮಾರ್ಗ ಮಧ್ಯ ಪುನರಾರಂಭಿಸುವುದಾಗಿ ರೈಲ್ವೆ ಇಲಾಖೆ ತಿಳಿಸಿದೆ. ಈ ಪ್ರಯಾಣಕ್ಕೆ ಕೆಲ ನಿಬಂಧನೆಗಳನ್ನು ವಿಧಿಸಲಾಗಿದ್ದು, ಪ್ರಯಾಣಿಕರು ಮತ್ತು ಸಿಬ್ಬಂದಿಗೆ ಫೇಸ್ ಕವರ್ / ಮಾಸ್ಕ್ ಬಳಕೆ ಕಡ್ಡಾಯ, ಆರೋಗ್ಯ ಸೇತು ಅಪ್ಲಿಕೇಶನ್ ಅನ್ನು ಇನ್‌ಸ್ಟಾಲ್ ಮಾಡಿಕೊಳ್ಳವುದು ಸೇರಿ ಹಲವು ಮಾರ್ಗಸೂಚಿಗಳನ್ನು ವಿಧಿಸಲಾಗಿದೆ. ಅಲ್ಲದೆ, ಪ್ರಯಾಣಿಕರಿಗೆ ಸ್ಯಾನಿಟೈಸರ್ ಬಾಟಲ್, ಒಂದು ಮಾಸ್ಕ್, ಒಂದು ಫೇಸ್ ಶೀಲ್ಡ್ ಮತ್ತು ಒಂದು ಜೋಡಿ

ಕೈಗವಸುಗಳನ್ನು ಹೊಂದಿರುವ 'ಕೋವಿಡ್ 19 ಪ್ರೊಟೆಕ್ಷನ್ ಕಿಟ್' ನೀಡಲಾಗುವುದು.

## ಮೋದಿ ನಾಯಕತ್ವಕ್ಕೆ 20 ವರ್ಷ



ನವದೆಹಲಿ : ಪ್ರಸ್ತುತ ಭಾರತದ ಪ್ರಧಾನ ಮಂತ್ರಿ ಹುದ್ದೆಯಲ್ಲಿರುವ ನರೇಂದ್ರ ಮೋದಿಯವರು ದಿನಾಂಕ 08 ಅಕ್ಟೋಬರ್ 2020 ಕ್ಕೆ ಒಳಗೊಂಡಂತೆ ತಮ್ಮ ಸುದೀರ್ಘ 20 ವರ್ಷಗಳ ರಾಜಕೀಯ ನಾಯಕತ್ವ ಪೂರೈಸಿದರು. ಮೋದಿಯವರು 19 ವರ್ಷಗಳ ಹಿಂದೆ ಇದೆ ದಿನಾಂಕದಂದು ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ನಂತರ 13 ವರ್ಷಗಳ ಕಾಲ ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿ ನಂತರ 2014ರಿಂದ ಈವರೆಗೆ ಅವರು ಪ್ರಧಾನಿಯಾಗಿ ಎರಡನೆ ಬಾರಿ ಅತ್ಯುನ್ನತ ಹುದ್ದೆಯಲ್ಲಿ ಮುಂದುವರೆದಿದ್ದಾರೆ.

## ಅಕ್ಟೋಬರ್ 08 : ಭಾರತೀಯ ವಾಯುಸೇನಾ ಸಂಸ್ಥಾಪನಾ ದಿನ




ಭಾರತೀಯ ವಾಯುಪಡೆ 1932ರ ಅಕ್ಟೋಬರ್ 8 ರಂದು ಪ್ರಾರಂಭವಾಗಿದ್ದು, ಈ ದಿನದ ಸವಿನೆನಪಿಗಾಗಿ ಪ್ರತಿ ವರ್ಷ ಅಕ್ಟೋಬರ್ 08 ರಂದು ಭಾರತೀಯ ವಾಯುಸೇನಾ ಸಂಸ್ಥಾಪನಾ ದಿನವನ್ನು ಆಚರಿಸುತ್ತ ಬರಲಾಗಿತ್ತಿದೆ. ಅದೇ ರೀತಿ ಈ ವರ್ಷ 88ನೇ ಭಾರತೀಯ ವಾಯುಸೇನಾ ಸಂಸ್ಥಾಪನಾ ದಿನವನ್ನು ಗಾಜಿಯಾಬಾದ್ ಹಾಗೂ ಹಿಂಡನ್ ವಾಯುನೆಲೆಯಲ್ಲಿ ವಾಯುಪಡೆ ಪರೇಡ್, ವೈಮಾನಿಕ ಪ್ರದರ್ಶನ ಮೂಲಕ ಆಯೋಜಿಸಲಾಗಿತ್ತು. ಈ ವಿಶೇಷ ಸಂದರ್ಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್, ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು, ಪ್ರಧಾನಮಂತ್ರಿ ನರೇಂದ್ರ ಮೋದಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಅನೇಕ ಗಣ್ಯಾತಿಗಣ್ಯರು ಶುಭ ಕೋರಿದರು.

## ಪ್ರತಿಷ್ಠಿತ ಸಾಹಿತ್ಯ ನೊಬೆಲ್ ಪ್ರಶಸ್ತಿಗೆ ಅಮೆರಿಕದ ಲೂಯಿಸ್ ಗ್ಲುಕ್ಸ್ ಆಯ್ಕೆ




ಟಾಕ್ ಹೋಂ : ಅಮೆರಿಕಾದ ಮಹಿಳಾ ಕವಯತ್ರಿ ಲೂಯಿಸ್ ಗ್ಲುಕ್ಸ್ ಅವರು 2020 ನೇ ಸಾಲಿನ ಪ್ರತಿಷ್ಠಿತ ಸಾಹಿತ್ಯ ನೊಬೆಲ್ ಪ್ರಶಸ್ತಿಗೆ ಆಯ್ಕೆಯಾಗಿರುವುದಾಗಿ ಸ್ಟಾಕ್ ಹೋಂನ ಸ್ವೀಡಿಷ್ ಅಕಾಡೆಮಿಯಲ್ಲಿ ಅಕ್ಟೋಬರ್ 08 ರಂದು ಅಧಿಕೃತ ಘೋಷಣೆ ಮಾಡಲಾಗಿದೆ. ಏಪ್ರಿಲ್ 22, 1943 ರಂದು ನ್ಯೂಯಾರ್ಕ್ ನಗರದಲ್ಲಿ ಜನಿಸಿದ ಇವರು, ಲೇಖಕಿಯಾಗಿ ಅವರ ವೃತ್ತಿಜೀವನದ ಜೊತೆಗೆ, ಹಲವು ಸಂಸ್ಥೆಗಳಲ್ಲಿ ಶಿಕ್ಷಕರಾಗಿ ಜೀವನ ನಡೆಸಿದ್ದಾರೆ. ಇವರು ಇದುವರೆಗೆ ಒಟ್ಟು ಹನ್ನೆರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದು ಕವನ ಹಾಗೂ ಕಾವ್ಯ ಕುರಿತಂತೆ ಅನೇಕ ಪ್ರಬಂಧಗಳನ್ನು ರಚಿಸಿದ್ದಾರೆ.

## ಫೋರ್ಬ್ಸ್ 2020ನೇ ಸಾಲಿನ ಟಾಪ್ 100ರ ಪಟ್ಟಿ ಪ್ರಕಟ



ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಸತತ 13ನೇ ವರ್ಷ ಭಾರತದ ಅತ್ಯಂತ ಶ್ರೀಮಂತ ಭಾರತೀಯ ಆಗಿದ್ದಾರೆ. ದಿನಾಂಕ 08 ಅಕ್ಟೋಬರ್ 2020 ರಂದು ಫೋರ್ಬ್ಸ್ 2020ನೇ ಸಾಲಿನ ಟಾಪ್ 100ರ ಪಟ್ಟಿ ಪ್ರಕಟಗೊಂಡಿದ್ದು, ಈ ಪಟ್ಟಿಯಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿಯವರು ಅಗ್ರಸ್ಥಾನದಲ್ಲಿದ್ದಾರೆ. ಅಲ್ಲದೆ ಸತತ 13 ವರ್ಷಗಳಿಂದ ಅವರು ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರೆದಿದ್ದಾರೆ. ಈ ಪಟ್ಟಿಯಲ್ಲಿ ಸ್ಥಾನ ಪಡೆದವರೆಲ್ಲರ ಒಟ್ಟಾರೆ ನಿವ್ವಳ ಆಸ್ತಿ ಮೌಲ್ಯ ಕಳೆದ ಬಾರಿಗಿಂತ 14% ಹೆಚ್ಚಳವಾಗಿದ್ದು, $ 517.5 ಬಿಲಿಯನ್ ನಷ್ಟಿದೆ ಎಂದು ಫೋರ್ಬ್ಸ್ ವರದಿ ಮಾಡಿದೆ. ಭಾರತದ ಟಾಪ್

ಶ್ರೀಮಂತರಪಟ್ಟಿ:
1. ಮುಕೇಶ್ ಅಂಬಾನಿ (88.7 ಬಿಲಿಯನ್ ಡಾಲರ್)
2. ಗೌತಮ್ ಅದಾನಿ (25.2 ಬಿಲಿಯನ್ ಡಾಲರ್)
3.ಶಿವ್ ನಾಡಾರ್ (20.4ಬಿಲಿಯನ್ ಡಾಲರ್)
4. ರಾಧಾಕಿಶನ್ ದಮಾನಿ (15.4 ಬಿಲಿಯನ್ ಡಾಲರ್)
5. ಹಿಂದೂಜಾ ಸೋದರರು (12.8 ಬಿಲಿಯನ್ ಡಾಲರ್)

### ಕೇಂದ್ರ ಸಚಿವ ರಾಮ್ ವಿಲಾಸ್ ಪಾಸ್ವಾನ್ ನಿಧನ




ನವದೆಹಲಿ: ಕೇಂದ್ರ ಸಚಿವ, ಲೋಕ್ ಜನಶಕ್ತಿ ಪಾರ್ಟಿ(ಎಲ್‌ಜೆಪಿ) ಸಂಸ್ಥಾಪಕ, ದಲಿತ ನಾಯಕ ರಾಮ್ ವಿಲಾಸ್ ಪಾಸ್ವಾನ್ ಅವರು ತಮ್ಮ 74 ವರ್ಷ ವಯಸ್ಸಿನಲ್ಲಿ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲಿ ನಿಧನರಾಗಿದ್ದಾರೆ ಎಂದು ಸಚಿವರ ಪುತ್ರ ಚಿರಾಗ್ ಮಾಹಿತಿ ನೀಡಿದ್ದಾರೆ.
* ಸತತ 5 ದಶಕಗಳಿಂದ ರಾಜಕೀಯದಲ್ಲಿ ಸಕ್ರೀಯರಾಗಿದ್ದ ಇವರು ಎನ್ ಡಿಎ ಮೈತ್ರಿಕೂಟದ ಎಲ್ ಜೆಪಿ ಪಕ್ಷದಿಂದ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು.
* ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಇವರು 1969ರಲ್ಲಿ ಬಿಹಾರ ವಿಧಾನಸಭೆಗೆ ಶಾಸಕರಾಗಿ ಮೊದಲ ಬಾರಿ ಆಯ್ಕೆಯಾದರು.
* 1977, 1980, 1989, 1996, 1999, 2004 ಮತ್ತು 2014 ರಲ್ಲಿ ಒಟ್ಟು ಎಂಟು ಬಾರಿ ಅವರು ಲೋಕಸಭೆಗೆ ಚುನಾಯಿತರಾಗಿದ್ದರು.

## 10-10-2020

### BCAS ನ ಮುಖ್ಯಸ್ಥರಾಗಿ ಕರ್ನಾಟಕದ ಎಂ. ಎ. ಗಣಪತಿ ನೇಮಕ



ಮಡಿಕೇರಿ : ನಾಗರಿಕ ವಿಮಾನ ಯಾನದ ಭದ್ರತಾ ವಿಭಾಗ (BCAS)ನ ಮಹಾ ನಿರ್ದೇಶಕರನ್ನಾಗಿ ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಮೂಲದ ಹಿರಿಯ ಐಪಿಎಸ್ ಅಧಿಕಾರಿ ಮನೆಯಪಂಡ ಎ. ಗಣಪತಿ ಅವರನ್ನು ನೇಮಕ ಮಾಡಲಾಗಿದೆ. ಇವರು 1986ನೇ ಸಾಲಿನ ಉತ್ತರಾಖಂಡ ಕೇಡರ್‌ನ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದು, 2024ರ ಫೆಬ್ರವರಿಯಲ್ಲಿ ಸೇವಾ ನಿವೃತ್ತರಾಗಲಿದ್ದು, ಅಲ್ಲಿಯವರೆಗೆ ಬಿಸಿಎಎಸ್ ಮಹಾ ನಿರ್ದೇಶಕರಾಗಿ ತಮ್ಮ ಸೇವೆ ಸಲ್ಲಿಸಲಿದ್ದಾರೆ. ಈ ಮೊದಲು ಬಿಸಿಎಎಸ್ ಮುಖ್ಯಸ್ಥರ ಹುದ್ದೆಯಲ್ಲಿದ್ದ ರಾಕೇಶ್ ಅಸ್ತಾನರವರನ್ನು ಗಡಿ ಭದ್ರತಾ ಪಡೆಯ ಮಹಾ ನಿರ್ದೇಶಕರನ್ನಾಗಿ ನೇಮಕ ಮಾಡಿದ ಹಿನ್ನಲೆ ತೆರವಾಗಿದ್ದ ಈ ಸ್ಥಾನಕ್ಕೆ ಗಣಪತಿಯವರನ್ನು ನೇಮಿಸಲಾಗಿದೆ.
* 2016ರಲ್ಲಿ ಉತ್ತರಾಖಂಡ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

### ಅಕ್ಟೋಬರ್ 09 = ವಿಶ್ವ ಅಂಚೆ ದಿನ




ಅಕ್ಟೋಬರ್ 09, 1874ರಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ ಬರ್ನ್‌ನಲ್ಲಿ ಸ್ಥಾಪನೆಯಾದ ಯುನಿವರ್ಸಲ್ ಪೋಸ್ಟಲ್ ಯೂನಿಯನ್(UPU) ಸವಿನೆನಪಿಗಾಗಿ ಪ್ರತಿ ವರ್ಷ ಅಕ್ಟೋಬರ್ 09 ರಂದು ವಿಶ್ವ ಅಂಚೆ ದಿನವನ್ನು ಆಚರಿಸಲಾಗುತ್ತದೆ. 1969ರಲ್ಲಿ ಜಪಾನ್‌ನ ರಾಜಧಾನಿ ಟೋಕಿಯೋದಲ್ಲಿ ಅಕ್ಟೋಬರ್ 09 ನ್ನು ವಿಶ್ವ ಅಂಚೆ ದಿನವನ್ನಾಗಿ ಘೋಷಿಸಲಾಯಿತು.

### RBI ವಿತ್ತೀಯ ನೀತಿ ಪ್ರಕಟ : ರೆಪೊ ಮತ್ತು ರಿಸರ್ವ್ ರೆಪೊ ದರಗಳಲ್ಲಿ ಯಥಾಸ್ಥಿತಿ ಮುಂದುವರಿಕೆ



ಮುಂಬೈ: ಪ್ರಸಕ್ತ ತ್ರೈಮಾಸಿಕದ ವಿತ್ತೀಯ ನೀತಿಯನ್ನು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ್ ದಾಸ್ ಪ್ರಕಟಿಸಿದ್ದು, ರೆಪೊ ದರ ಯಾವುದೇ ಬದಲಾವಣೆ ಇಲ್ಲದೆ ಶೇಕಡಾ 4ರಷ್ಟೇ ಮುಂದುವರಿಯಲಿದೆ. ಹಾಗೂ ರಿಸರ್ವ್ ರೆಪೊ ದರ ಕೂಡ ಬದಲಾಗದೆ ಶೇಕಡಾ 3.35ರಷ್ಟು ಮುಂದುವರಿಯಲಿದೆ ಎಂದು ಮಾಹಿತಿ ನೀಡಿದರು. ಇನ್ನು 2020 2021ರ ಆರ್ಥಿಕ ವರ್ಷದಲ್ಲಿ ಭಾರತದ ಒಟ್ಟು GDP ಬೆಳವಣಿಗೆ ದರ ಶೇಕಡಾ 9.5ರಷ್ಟು ಕಡಿಮೆಯಾಗುವ ಸಾಧ್ಯತೆ ಇರುವುದಾಗಿ ಇದೆ ಎಂದು ತಿಳಿಸಿದರು.

## ಮೆಟ್ರೊ ನಿಲ್ದಾಣಕ್ಕೆ ಬಯೋಕಾನ್ ನಿಂದ ₹65 ಕೋಟಿ ಅನುದಾನ



ಬೆಂಗಳೂರು: ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಪ್ರಗತಿಯಲ್ಲಿರುವ 'ನಮ್ಮ ಮೆಟ್ರೊ' ಎರಡನೇ ಹಂತದ ಕಾಮಗಾರಿಯಲ್ಲಿ ನಿರ್ಮಾಣವಾಗುತ್ತಿರುವ ಹೆಬ್ಬಗೋಡಿ ಮೆಟ್ರೊ ನಿಲ್ದಾಣದ ಅಭಿವೃದ್ಧಿಗಾಗಿ ಬಯೋಕಾನ್ ಫೌಂಡೇಷನ್ ನಿಂದ ₹65 ಕೋಟಿ ರೂಪಾಯಿ ಅನುದಾನ ನೀಡಲಾಯಿತು. ಈ ಕುರಿತು ಒಪ್ಪಂದಕ್ಕೆ ಬಯೋಕಾನ್ ಫೌಂಡೇಷನ್ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ಅಕ್ಟೋಬರ್ 08 ರಂದು ಪರಸ್ಪರ ಸಹಿ ಹಾಕಿದವು.

* ಇದೆ ವೇಳೆ ಹೆಬ್ಬಗೋಡಿ ಮೆಟ್ರೋ ನಿಲ್ದಾಣಕ್ಕೆ "ಬಯೋಕಾನ್ ಹೆಬ್ಬಗೋಡಿ ಮೆಟ್ರೊ ನಿಲ್ದಾಣ' ಎಂದು ನಾಮಕರಣ ಮಾಡಲು ಉಭಯ ಸಂಸ್ಥೆಗಳು ಸರ್ಕಾರವನ್ನು ಕೋರಲಿವೆ.

* ಬಯೋಕಾನ್ ಫೌಂಡೇಷನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಷಾ ಹಾಗೂ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್ ಈ ವೇಳೆಯಲ್ಲಿ ಉಪಸ್ಥಿತರಿದ್ದರು.

## ವಿಶ್ವ ಆಹಾರ ಯೋಜನೆಗೆ 2020ರ ನೊಬೆಲ್‌ಶಾಂತಿಪ್ರಶಸ್ತಿ



ವಿಶ್ವ ಸಂಸ್ಥೆಯ ಭಾಗವಾಗಿರುವ ವಿಶ್ವ ಆಹಾರ ಯೋಜನೆಯು ಹಸಿವು ನೀಗಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಪರಿಗಣಿಸಿ, 2020ನೇ ಸಾಲಿನ ನೊಬೆಲ್ ಶಾಂತಿ ಪುರಸ್ಕಾರ ನೀಡಲು ನಾರ್ವೆಯ ನೊಬೆಲ್ ಸಮಿತಿ ತೀರ್ಮಾನಿಸಿದೆ.

* ಈ ಬಾರಿ ನೊಬೆಲ್ ಶಾಂತಿ ಪ್ರಶಸ್ತಿ ಒಟ್ಟು 211 ವ್ಯಕ್ತಿಗಳು ಹಾಗೂ 107 ಸಂಸ್ಥೆಗಳನ್ನು ನಾಮನಿರ್ದೇಶನ ಮಾಡಲಾಗಿತ್ತು, ಇವುಗಳ ಪೈಕಿ ವಿಶ್ವ ಆಹಾರ ಯೋಜನೆಗೆ ಪ್ರಶಸ್ತಿ ಭಾಗ್ಯ ದೊರೆತಿದೆ.

* ನೊಬೆಲ್ ಶಾಂತಿ ಪುರಸ್ಕಾರವು 10 ಮಿಲಿಯನ್ ಕ್ರೋನಾ (ಅಂದಾಜು ₹8 ಕೋಟಿ) ನಗದು ಬಹುಮಾನ ಹಾಗೂ ಚಿನ್ನದ ಪದಕವನ್ನು ಒಳಗೊಂಡಿದೆ. ಇನ್ನು ಈ ಪ್ರಶಸ್ತಿ ಸಮಾರಂಭವು ಡಿಸೆಂಬರ್ 10ರಂದು ನಾರ್ವೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ.

## ರಡಾರ್ ನಿಗ್ರಹ ಕ್ಷಿಪಣಿ 'ರುದ್ರಂ 1' ಪರೀಕ್ಷೆ ಯಶಸ್ವಿ



ನವದೆಹಲಿ: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಅಭಿವೃದ್ಧಿ ಪಡಿಸಿದ 'ರುದ್ರಂ 1' ರಡಾರ್ ನಿಗ್ರಹ ಕ್ಷಿಪಣಿಯನ್ನು (ಆಯಂಟಿ ರೇಡಿಯೇಷನ್ ಮಿಸೈಲ್) ಒಡಿಶಾದ ಬಾಲಾಸೋರ್‌ನಲ್ಲಿ ಯಶಸ್ವಿಯಾಗಿ ಪರೀಕ್ಷೆಮಾಡಲಾಯಿತು. ರುದ್ರಂ 1 ನ ವಿಶೇಷತೆಗಳು :

* ಶಬ್ದಕ್ಕಿಂತ ಎರಡು ಪಟ್ಟು ಹೆಚ್ಚು ವೇಗದಲ್ಲಿ ನುಗ್ಗುವ ಸಾಮರ್ಥ್ಯ

* ಶತ್ರು ಪಡೆಯ ರಡಾರ್‌ಗಳು ಹಾಗೂ ಕಣ್ಗಾವಲು ವ್ಯವಸ್ಥೆಯನ್ನು ನಾಶ ಪಡಿಸಬಲ್ಲುದು.

* ಭಾರತೀಯ ವಾಯುಪಡೆಯು ಸುಖೋಯ್ 30MKI ಯುದ್ಧ ವಿಮಾನಗಳ ಮೂಲಕ ಈ ಕ್ಷಿಪಣಿಯನ್ನು ಪ್ರಯೋಗಿಸಬಹುದಾಗಿದೆ.

## 12-10-2020

### ದೇಹದಾರ್ಢ್ಯ ಪಟು ಎ.ವಿ.ರವಿಗೆ ಮದರ್ ಥೆರೇಸಾ ರಾಷ್ಟ್ರೀಯ ಪ್ರಶಸ್ತಿ




ಕೋಲಾರ : ಕನ್ನಡ ಚಿತ್ರರಂಗದ ನಟರಾಗಿರುವ ಡಾ.ಎ.ವಿ ರವಿ ಅವರು ಮದರ್ ಥೆರೇಸಾ ರಾಷ್ಟ್ರೀಯ ಪ್ರಶಸ್ತಿ ಗೆ ಆಯ್ಕೆಯಾಗಿದ್ದಾರೆ. ಇವರು ಈಗಾಗಲೇ ಮಿ.ಇಂಡಿಯಾ, ಏಕಲವ್ಯ ಪ್ರಶಸ್ತಿ ಸೇರಿ ಹಲವು ಪುರಸ್ಕಾರಗಳನ್ನು ಪಡೆದಿರುತ್ತಾರೆ. ಅಂತರಾಷ್ಟ್ರೀಯ ದೇಹದಾರ್ಢ್ಯ ಪಟುವಾಗಿರುವ ಇವರು ಕರ್ನಾಟಕ ಜಿಮ್ ಮತ್ತು ಫಿಟ್ನೆಸ್ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಕೂಡ ಆಗಿದ್ದಾರೆ.

* ಮದರ್ ಥೆರೇಸಾ ರಾಷ್ಟ್ರೀಯ ಪ್ರಶಸ್ತಿ ಯನ್ನು "ದಿ ನ್ಯಾಷನಲ್ ಕ್ರಿಸ್ ಕೌನ್ಸಿಲ್ ಆಫ್ ಇಂಡಿಯಾ" ಹಾಗೂ "ದಿ ನ್ಯೂಸ್ ಪೇಪರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ" ಸಂಸ್ಥೆಗಳು ಜಂಟಿಯಾಗಿ ಈ ಪ್ರಶಸ್ತಿ ಪ್ರದಾನ ಮಾಡಲಿವೆ.

### ಫ್ರೆಂಚ್ ಓಪನ್ ಜಯಿಸಿದ ರಫೆಲ್ ನಡಾಲ್



ಪ್ಯಾರಿಸ್: ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಸ್ಪೇನ್‌ನ ರಫೆಲ್ ನಡಾಲ್ ಅವರು ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಈ ಮೂಲಕ ಅವರು ಒಟ್ಟು 13ನೇ ಬಾರಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿ ಚಾಂಪಿಯನ್ ಎನಿಸಿಕೊಂಡರು. ದಿನಾಂಕ 11 ಅಕ್ಟೋಬರ್ 2020 ರಂದು ನಡೆದ ಫೈನಲ್ ಪಂದ್ಯದಲ್ಲಿ 6 0, 6 2, 7 5 ಅಂಕಗಳಿಂದ ನೊವಾಕ್ ಜೊಕೊವಿಚ್ ಅವರ ವಿರುದ್ಧ ಜಯಗಳಿಸಿದರು.

* ಈ ಗೆಲುವಿನ ಮೂಲಕ ನಡಾಲ್ ಅವರು ಸ್ವಿಟ್ಜರ್ಲೆಂಡ್‌ನ ದಿಗ್ಗಜ ರೋಜರ್ ಫೆಡರರ್ ಅವರ 20 ಗ್ರ್ಯಾನ್‌ಸ್ಲಾಂ ಜಯದ ದಾಖಲೆಯನ್ನು ಸರಿಗಟ್ಟಿದರು.

* ನಡಾಲ್ ಅವರಿಗೆ ಫ್ರೆಂಚ್ ಓಪನ್‌ನಲ್ಲಿ ನೂರನೇ ಗೆಲುವು ಆಗಿರುವುದು ಮತ್ತೊಂದು ವಿಶೇಷ.

### ರಾಜಮಾತೆ ವಿಜಯರಾಜೇ ಸಿಂಧ್ಯಾ ಸ್ಮರಣಾರ್ಥ 100 ರೂ. ನಾಣ್ಯ ಬಿಡುಗಡೆ




ನವದೆಹಲಿ : ಗ್ವಾಲಿಯಾರ್ ರಾಜಮಾತೆ ಎನಿಸಿರುವ ವಿಜಯರಾಜೇ ಸಿಂಧ್ಯಾ ಅವರ ಜನ್ಮಶತಮಾನೋತ್ಸ ಅಂಗವಾಗಿ ಭಾರತದ ರಾಷ್ಟ್ರಪತಿಗಳಾದ ಪ್ರಧಾನಿ ನರೇಂದ್ರ ಮೋದಿಯವರು ಹಣಕಾಸು ಸಚಿವಾಲಯವು ಮುದ್ರಿಸಿದ ವಿಶೇಷ 100 ರೂ. ಮುಖಬೆಲೆಯ ನಾಣ್ಯವನ್ನು ಬಿಡುಗಡೆ ಮಾಡಿದರು. ಬಿಜೆಪಿಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ವಿಜಯರಾಜೇ ಸಿಂಧಿಯಾ ಅವರು ಗ್ವಾಲಿಯರ್‌ನ ರಾಜಮಾತಾ ಎಂದೇ ಜನಪ್ರಿಯರಾಗಿದ್ದಾರೆ. ಇವರು ಲೋಕಸಭೆಗೆ ಒಟ್ಟು 7 ಬಾರಿ ಹಾಗೂ ರಾಜ್ಯಸಭೆಗೆ ಎರಡು ಬಾರಿ ಆಯ್ಕೆಯಾಗಿದ್ದರು.

### ಕರ್ನಾಟಕ ರಾಜ್ಯ ಸಚಿವ ಸಂಪುಟದಲ್ಲಿ ಬದಲಾವಣೆ ಮಾಡಿದ ಮುಖ್ಯಮತ್ರಿ ಯಡಿಯೂರಪ್ಪ



ಬೆಂಗಳೂರು : ಕರ್ನಾಟಕ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ರಾಜ್ಯ ಸಚಿವ ಸಂಪುಟದಲ್ಲಿ ಬದಲಾವಣೆ ಮಾಡಿದ್ದು, ಪ್ರಮುಖ ಮೂರು ಖಾತೆಗಳ ಮರುಹಂಚಿಕೆ ಮಾಡಲಾಗಿದೆ.

* ಡಾ.ಕೆ.ಸುಧಾಕರ್ ಅವರಿಗೆ ವೈದ್ಯಕೀಯ ಶಿಕ್ಷಣ ಖಾತೆಯ ಜೊತೆಗೆ, ಹೆಚ್ಚುವರಿಯಾಗಿ ಆರೋಗ್ಯ ಖಾತೆಯನ್ನು ನೀಡಿದ್ದಾರೆ.

* ಶ್ರೀರಾಮುಲು ಅವರಿಗೆ ಸಮಾಜಕಲ್ಯಾಣ ಖಾತೆಯನ್ನು ಹಂಚಿಕೆ ಮಾಡಿದ್ದಾರೆ.

* ಗೋವಿಂದ ಕಾರಜೋಳ್ ಅವರಿಗೆ ಲೋಕೋಪಯೋಗಿ ಖಾತೆ ಯನ್ನು ಮರು ಹಂಚಿಕೆ ಮಾಡಿದ್ದಾರೆ. ಡಾ.ಕೆ.ಸುಧಾಕರ್ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಖಾತೆ ಶ್ರೀರಾಮುಲುಗೆ ಸಮಾಜಕಲ್ಯಾಣ ಖಾತೆ ಗೋವಿಂದ ಕಾರಜೋಳ್ ಲೋಕೋಪಯೋಗಿ ಇಲಾಖೆ ಖಾತೆ

### ಏಕಕಾಲದಲ್ಲೇ 44 ಸೇತುವೆಗಳನ್ನೂ ಉದ್ಘಾಟಿಸಿದ ರಾಜನಾಥ್ ಸಿಂಗ್



ನವದೆಹಲಿ: ಬಾರ್ಡರ್ ರೋಡ್ ಆರ್ಗನೈಸೇಶನ್ (ಬಿಆರ್‌ಒ) ಒಟ್ಟು ಏಳು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಿರ್ಮಿಸಿದ 44 ಸೇತುವೆಗಳನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇತ್ತೀಚಿಗೆ ಉದ್ಘಾಟನೆಗೊಳಿಸಿದರು. ಜಮ್ಮು ಕಾಶ್ಮೀರದಲ್ಲಿ 10, ಲಡಾಖ್ ನಲ್ಲಿ 8, ಹಿಮಾಚಲಪ್ರದೇಶದಲ್ಲಿ 3, ಪಂಜಾಬ್ ನಲ್ಲಿ 4, ಉತ್ತರಾಖಂಡ್ ನಲ್ಲಿ 8 , ಅರುಣಾಚಲದಲ್ಲಿ 8 ಮತ್ತು ಸಿಕ್ಕಿಂನ 4 ಸೇತುವೆಗಳು ಸೇರಿ ಒಟ್ಟು 44 ಸೇತುವೆಗಳನ್ನು ಬಾರ್ಡರ್ ರೋಡ್ ಆರ್ಗನೈಸೇಶನ್ (ಬಿಆರ್‌ಒ) ನಿರ್ಮಾಣಗೊಳಿಸಿದ್ದು, ಕೇಂದ್ರ ರಕ್ಷಣಾ ಸಚಿವರು ವಿಡಿಯೋ ಕಾನ್ಫರೆನ್ಸ್ ಸಭೆಯ ಮೂಲಕ ಈ ಎಲ್ಲ ಸೇತುವೆಗಳಿಗೆ ಚಾಲನೆ ನೀಡಿದರು.

### ದೆಹಲಿ ಸರ್ಕಾರದಿಂದ ಎಲೆಕ್ಟ್ರಿಕ್ ವಾಹನಗಳ ರಸ್ತೆ ತೆರಿಗೆ ಮನ್ನಾ



ಬ್ಯಾಟರಿಯಿಂದ ಚಲಿಸುವ ಎಲೆಕ್ಟ್ರಿಕ್ ವಾಹನಗಳಿಗೆ ದೆಹಲಿ ಸರ್ಕಾರ ವಿಧಿಸುತ್ತಿದ್ದ ರಸ್ತೆ ತೆರಿಗೆಯಿಂದ ವಿನಾಯಿತಿ ಘೋಷಿಸಿದ್ದು, ಈ ಮೂಲಕ ವಾಹನಗಳಿಂದ ಉಂಟಾಗುತ್ತಿದ್ದ ಮಾಲಿನ್ಯವನ್ನು ನಿಯಂತ್ರಿಸಬಹುದಾಗಿದೆ. ದಿನಾಂಕ 11 ಅಕ್ಟೋಬರ್ ಭಾನುವಾರದಂದು ದೆಹಲಿ ಸಾರಿಗೆ ಸಚಿವ ಕೈಲಾಶ್ ಗೆಹ್ಲೋಟ್ ಈ ಕುರಿತು ಟ್ವೀಟ್ ಮಾಡುವ ಮೂಲಕ ಮಾಹಿತಿ ನೀಡಿದ್ದು, ಬ್ಯಾಟರಿಯಿಂದ ಚಲಿಸುವ ವಾಹನಗಳಿಗೆ ರಸ್ತೆ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಕೇಜ್ರಿವಾಲ್ ಸರ್ಕಾರವು ಆಗಸ್ಟ್ ತಿಂಗಳಲ್ಲಿ ಎಲೆಕ್ಟ್ರಿಕ್ ವಾಹನ ನೀತಿ ಘೋಷಿಸಿದ್ದು, ಈ ಘೋಷಣೆಯ ಪ್ರಕಾರ ದೆಹಲಿಯಲ್ಲಿ ಎಲೆಕ್ಟ್ರಿಕಲ್ ವಾಹನಗಳಿಗೆ ನೋಂದಣಿ ಶುಲ್ಕ, ರಸ್ತೆ ತೆರಿಗೆ ಮನ್ನಾ ಸೇರಿ ಹೊಸ ಎಲೆಕ್ಟ್ರಿಕ್ ಕಾರಿಗೆ 1.5 ಲಕ್ಷ ರುಪಾಯಿವರೆಗೆ ಪ್ರೋತ್ಸಾಹಧನ ಸೇರಿ ಹಲವು ಸೌಲಭ್ಯಗಳನ್ನುಎಲೆಕ್ಟ್ರಿಕ್ ವಾಹನ ಬಳಕೆದಾರರಿಗೆ ಘೋಷಿಸಿತ್ತು.

## 13-10-2020


### ಭಾರತದ ಒಟ್ಟು 8 ಬೀಚ್‌ಗಳಿಗೆ ಅಂತಾರಾಷ್ಟ್ರೀಯ ಮಟ್ಟದ 'ಬ್ಲೂ ಫ್ಲ್ಯಾಗ್' ಮಾನ್ಯತೆ



ನವದೆಹಲಿ: ಭಾರತದ ಒಟ್ಟು ಐದು ರಾಜ್ಯ ಹಾಗೂ 2 ಕೇಂದ್ರಾಡಳಿತ ಪ್ರದೇಶಗಳ ವ್ಯಾಪ್ತಿಯ ಕಡಲ ತೀರಗಳಿಗೆ ಅಂತಾರಾಷ್ಟ್ರೀಯ ಮಟ್ಟದ 'ಬ್ಲೂ ಫ್ಲ್ಯಾಗ್' ಮಾನ್ಯತೆ ಲಭಿಸಿದೆ. ಈ ಕುರಿತು ಕೇಂದ್ರ ಪರಿಸರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದ್ದಾರೆ. ಬ್ಲೂ ಫ್ಲಾಗ್ ಮಾನ್ಯತೆ ಪಡೆದ ಕಡಲ ತೀರಗಳ ವಿವರಗಳು :

*ಕಾಸರಗೋಡು ಮತ್ತು ಪಡುಬಿದ್ರಿ (ಕರ್ನಾಟಕ),
*ಕಪ್ಪಡ್ (ಕೇರಳ),
* ಋಷಿಕೊಂಡ (ಆಂಧ್ರಪ್ರದೇಶ),
* ಶಿವರಾಜ್‌ಪುರ (ದ್ವಾರಕಾ ಗುಜರಾತ್),
* ಘೋಘ್ಲಾ (ದಿಯು),
* ಗೋಲ್ಡನ್ ಬೀಚ್(ಒಡಿಶಾ),
* ರಾಧಾನಗರ್ (ಅಂಡಮಾನ್ ನಿಕೋಬಾರ್)
* ಭಾರತವು ಕೇವಲ ಎರಡು ವರ್ಷ ಅವಧಿಯಲ್ಲಿ ಒಟ್ಟು 8 ಬ್ಲೂ ಫ್ಲ್ಯಾಗ್ ಗಳಿಸಿದ ಏಷ್ಯಾ ಪೆಸಿಫಿಕ್ ಪ್ರದೇಶದ ಪ್ರಥಮ ದೇಶ ಎನಿಸಿಕೊಂಡಿದೆ. ಬ್ಲೂ ಫ್ಲಾಗ್ ಮಹತ್ವ : ಬ್ಲೂ ಫ್ಲಾಗ್ ಮಾನ್ಯತೆ ಪಡೆದ ಕಡಲ ತೀರಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಅನುದಾನದಲ್ಲಿ ಎಲ್ಲ ಮೂಲ ಸೌಕರ್ಯ ಕಲ್ಪಿಸಿ ಅಭಿವೃದ್ಧಿಸುವದರಿಂದ, ಪ್ರವಾಸಿಗರು ಅದರಲ್ಲೂ ವಿದೇಶಿಗರು ಈ ಬೀಚ್‌ಗಳಿಗೆ ಪ್ರವಾಸ ಮಾಡಲು ಇಷ್ಟಪಡುತ್ತಾರೆ. ಇದರಿಂದಾಗಿ ಪ್ರವಾಸೋದ್ಯಮದ ಮೇಲೆ ಅವಲಂಬಿತವಾಗಿರುವ ಎಲ್ಲ ಕ್ಷೇತ್ರಗಳೂ ಅಭಿವೃದ್ಧಿ ಕಾಣಲಿವೆ.

## ಖ್ಯಾತ ಹಿರಿಯ ಸಂಗೀತ ನಿರ್ದೇಶಕ ರಾಜನ್ ವಿಧಿವಶ



ಬೆಂಗಳೂರು: ಕನ್ನಡದ ಸೇರಿದಂತೆ ತೆಲುಗು, ತಮಿಳು, ಮಲಯಾಳಂ, ತುಳು ಭಾಷೆಯ ಸುಮಾರು 375 ಕ್ಕೂ ಅಧಿಕ ಸಿನಿಮಾಗಳಿಗೆ ಸಂಗೀತ ಸಂಯೋಜಿಸಿದ್ದ ಖ್ಯಾತ ಸಂಗೀತ ನಿರ್ದೇಶಕ ರಾಜನ್ ಅವರು ತಮ್ಮ 87 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದಿದ್ದಾರೆ. ಇವರು ಸಹೋದರರಾದ ನಾಗೇಂದ್ರ ಜತೆ ಸಂಗೀತ ಸಂಯೋಜನೆ ಮಾಡುತ್ತಿದ್ದ ಇವರು ರಾಜನ್ ನಾಗೇಂದ್ರ ಎಂದಲೇ ಖ್ಯಾತಿ ಪಡೆದಿದ್ದರು. ಇವರ ಜೋಡಿ 1950ರಿಂದ 1990ರವರೆಗೆ ರಾಜನ್ ನಾಗೇಂದ್ರ ಜೋಡಿ ಎಂದಲೇ ಪ್ರಸಿದ್ಧಿ ಪಡೆದಿದ್ದರು.

## ಲಿಬಿಯಾದಲ್ಲಿ ಅಪಹರಣಕ್ಕೊಳಗಾದ 7 ಜನ ಭಾರತೀಯರ ಬಿಡುಗಡೆ



ಟ್ರಿಪೋಲಿ : ಇತ್ತೀಚಿಗೆ ಲಿಬಿಯಾದಲ್ಲಿ ಅಪಹರಣಕ್ಕೊಳಗಾದ 7 ಜನ ಭಾರತೀಯರು ಸುರಕ್ಷಿತರಾಗಿ ಬಿಡುಗಡೆಗೊಂಡಿರುವುದಾಗಿ ತುನಿಷಿಯಾದ ಭಾರತೀಯ ರಾಯಭಾರಿ ಕಚೇರಿಯ ಅಧಿಕಾರಿ ಪುನೀರ್ ರಾಯ್ ಕುಂಡಲ್ ಖಚಿತಪಡಿಸಿದ್ದಾರೆ. ಅಪಹರಣಕ್ಕೊಳಗಾದ ಈ 7 ಜನ ಭಾರತೀಯರು ಆಂಧ್ರಪ್ರದೇಶ, ಬಿಹಾರ, ಗುಜರಾತ್, ಉತ್ತರಪ್ರದೇಶ ರಾಜ್ಯಗಳ ಮೂಲದವರಾಗಿದ್ದು, ಲಿಬಿಯಾ ದೇಶದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನಡೆಸುತ್ತಿದ್ದರು. ಇವರು ಇತ್ತೀಚಿಗೆ ಭಾರತಕ್ಕೆ ಹಿಂದಿರುಗಲು ವಿಮಾನ ನಿಲ್ದಾಣಕ್ಕೆ ಪ್ರಯಾಣ ಬೆಳೆಸಿದ ವೇಳೆ ಅಪಹರಣಕ್ಕೊಳಗಾಗಿದ್ದರು.

## ಕೇಂದ್ರ ಸರ್ಕಾರದ SVAMITVA ಯೋಜನೆಗೆ ಪ್ರಧಾನಿ ಮೋದಿಯಿಂದ ಚಾಲನೆ




ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಈ ವರ್ಷ ಏಪ್ರಿಲ್ 24ರಂದು ಆರಂಭಿಸಿದ "SVAMITVA" ಯೋಜನೆಗೆ ಚಾಲನೆ ನೀಡಿದರು. ಈ ನೂತನ ಯೋಜನೆಯಡಿ ಒಟ್ಟು 6 ರಾಜ್ಯಗಳ ಅಂದಾಜು 132,000 ಭೂ ಮಾಲೀಕರು ತಮ್ಮ ಒಡೆತನದ ಜಮೀನನ್ನು ಆರ್ಥಿಕ ಆಸ್ತಿಗಳಾಗಿ ಪರಿವರ್ತಿಸಲು ಅವಕಾಶ
ನೀಡಲಾಗುವದು ಅಲ್ಲದೆ ಆಸ್ತಿ ಕಾರ್ಡ್ ಗಳನ್ನ ಪಡೆಯಲು ಇವರು ಅರ್ಹರಾಗಿರುತ್ತಾರೆ.

* ಇನ್ನು 2024 ನೇ ವರ್ಷದ ವೇಳೆಗೆ ಒಟ್ಟು 640,000 ಹಳ್ಳಿಗಳ ಗುರಿಯನ್ನು ಈ ಯೋಜನೆ ಹೊಂದಿದೆ.
* ಪ್ರಸ್ತುತ ಈ ಯೋಜನೆಯಡಿಯಲ್ಲಿ ಉತ್ತರ ಪ್ರದೇಶದ 346, ಹರಿಯಾಣದಿಂದ 221, ಮಹಾರಾಷ್ಟ್ರದ 100, ಉತ್ತರಾಖಂಡದ 50, ಮಧ್ಯ ಪ್ರದೇಶದ 44 ಮತ್ತು ಕರ್ನಾಟಕದ 2 ಗ್ರಾಮ ಸೇರಿ ಒಟ್ಟು 763 ಗ್ರಾಮಗಳಲ್ಲಿ ಪ್ರಾಪರ್ಟಿ ಕಾರ್ಡ್ ಗಳನ್ನು ವಿತರಿಸಲಾಗುವುದು.

## ಅಮೆರಿಕಕ್ಕೆ 18 ಲಕ್ಷ ಮಾಸ್ಕಗಳ ದೇಣಿಗೆ ನೀಡಿದ ಭಾರತ



ವಾಷಿಂಗ್ಟನ್: ಅಮೆರಿಕದ ದೇಶದ ಫಿಲಡೆಲ್ಫಿಯಾಕ್ಕೆ ಭಾರತದಿಂದ ಅಂದಾಜು 18 ಲಕ್ಷ ಮಾಸ್ಕಗಳನ್ನು ದೇಣಿಗೆ ನೀಡಿ ರಫ್ತು ಮಾಡಲಾಗಿದೆ. ಅಮೆರಿಕದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿದ ಆರನೇ ಪ್ರಮುಖ ನಗರವಾಗಿರುವ ಫಿಲಡೆಲ್ಫಿಯಾದ ಮೇಯರ ಅವರ ಮನವಿಯ ಮೇರೆಗೆ ಭಾರತವು ಮಾಸ್ಕ ಗಳನ್ನೂ ಕಳುಹಿಸಿಕೊಟ್ಟಿದ್ದು, ಈ ಮಾಸ್ಕಗಳನ್ನು ಇಲ್ಲಿನ ಮುಖ್ಯ ಭೂಮಿಕೆ ಕೆಲಸಗಾರರು ಧರಿಸಲು ನೀಡಲಾಗುವದು. ಈ ಮೂಲಕ ಉಭಯ ರಾಷ್ಟ್ರಗಳ ಸ್ನೇಹ ಸಂಬಂಧ ಉದಾಹರಣೆಯಾಗಿದೆ ಎಂದು ಅಮೆರಿಕದಲ್ಲಿನ ಭಾರತೀಯ ರಾಯಭಾರಿ ಕಚೇರಿ ತಿಳಿಸಿದೆ.

## 14-10-2020

### ರಕ್ಷಣ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ ರುಸ್ತುಂ 2 ಡ್ರೋನ್ ಪ್ರಯೋಗ ಯಶಸ್ವಿ




ರಕ್ಷಣ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ ಅಭಿವೃದ್ಧಿ ಪಡಿಸಿದ ರುಸ್ತುಂ 2 ಡ್ರೋನ್ ಪರೀಕ್ಷಾರ್ಥ ಪ್ರಯೋಗವು ಯಶಸ್ವಿಗೊಂಡಿದೆ. ಈ ಮೂಲಕ ಭಾರತೀಯ ವಾಯುಪಡೆಗೆ ಮತ್ತಷ್ಟು ಶಕ್ತಿ ತುಂಬಿದಂತಾಗಿದೆ. ಚಿತ್ರದುರ್ಗ ಸಮೀಪದ ನಾಯಕನಹಟ್ಟಿ ಬಳಿಯ DRDO ಪ್ರದೇಶದ ಏರೋನಾಟಿಕಲ್ ಟೆಸ್ಟ್ ರೇಂಜ್ ನಲ್ಲಿ ಚಾಲಕ ರಹಿತ ಈ ಯುದ್ಧ ಬಳಕೆಯ ಡ್ರೋನ್ ಪರೀಕ್ಷೆ ನಡೆಸಲಾಗಿದ್ದು, ಸತತ 8 ಗಂಟೆಗಳ ಕಾಲ ಯಶಸ್ವಿ ಹಾರಾಟ ನಡೆಸಿದೆ. ಈ ಡ್ರೋನ್ 40 ಕಿ.ಮೀ. ವ್ಯಾಪ್ತಿಯಲ್ಲಿ 16 ಸಾವಿರ ಅಡಿ ಎತ್ತರದಲ್ಲಿ ಹಾರಾಟ ನಡೆಸಿದ್ದು ವಿಶೇಷವಾಗಿದೆ. ರುಸ್ತುಂ 2 ವಿಶೇಷತೆಗಳು : ರುಸ್ತುಂ 2 ನಾನಾ ರೀತಿಯ ಶಸ್ತ್ರಾಸ್ತ್ರಗಳನ್ನು ಸಾಗಿಸಬಲ್ಲುದು. ಸಂಪೂರ್ಣವಾಗಿ ದೇಶೀಯ ತಂತ್ರಜ್ಞಾನದ ಬಳಸಿ ನಿರ್ಮಿಸಲಾಗಿರುವ ರುಸ್ತುಂ 2 ಮಾನವ ರಹಿತ ವಿಮಾನವಾಗಿದೆ. ಪ್ರಸ್ತುತ ಭಾರತೀಯ ವಾಯುಸೇನೆ ಇದೇ ಮಾದರಿಯ ಇಸ್ರೇಲ್ ನಿರ್ಮಿತ ಡ್ರೋನ್‌ಗಳ ಬಳಕೆ ಮಾಡುತ್ತಿದೆ.

### ಕೊರೋನಾ ಸೋಂಕಿನ ಕಾರಣ ಜೂನಿಯರ್ ವಿಶ್ವ ಕುಸ್ತಿ ಚಾಂಪಿಯನ್‌ಶಿಪ್ ರದ್ದು



ನವದೆಹಲಿ: ದೇಶವ್ಯಾಪಿ ಹರಡಿರುವ ಕೊರೋನಾ ವೈರಸ್ ಸೋಂಕಿನ ಭೀತಿಯಿಂದ 2020 ನೇ ಸಾಲಿನಲ್ಲಿ ಇದೆ ಡಿಸೆಂಬರ್ 12 ರಿಂದ 20ರವರೆಗೆ ಬೆಲ್ ಗ್ರೇಡ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದ್ದ, ಜೂನಿಯರ್ ವಿಶ್ವ ಕುಸ್ತಿ ಚಾಂಪಿಯನ್‌ಶಿಪ್ ರದ್ದುಪಡಿಸಿ ನಿರ್ಣಯ ಕೈಗೊಳ್ಳಲಾಗಿದೆ. ಒಂದು ವೇಳೆ ಚಾಂಪಿಯನ್‌ಶಿಪ್ ನಡೆಸಿದ್ದಲ್ಲಿ, ಸೋಂಕು ಹರಡುವ ಭೀತಿ ಹೆಚ್ಚಿರುವ ಕಾರಣ ಹಾಗೂ ಪ್ರಸ್ತುತ ಪರಿಸ್ಥಿತಿಗಳು ಅನುಕೂಲಕರವಾಗಿಲ್ಲದರಿಂದ ಜೂನಿಯರ್ ವಿಶ್ವ ಚಾಂಪಿಯನ್‌ಶಿಪ್ ಅನ್ನು ರದ್ದುಗೊಳಿಸಲು ವಿಶ್ವ ಕುಸ್ತಿ ಸಂಸ್ಥೆ ತೀರ್ಮಾನಿಸಿದೆ.


### ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರಶಂಸೆಗೊಳಗಾದ ಆರೋಗ್ಯಸೇತು ಆಯಪ್




ನವದೆಹಲಿ :ಭಾರತವು ಕೋವಿಡ್ 19ಸೋಂಕನ್ನು ನಿಯಂತ್ರಿಸಲು ಹಲವು ಕ್ರಮಗಳನ್ನು ಕೈಗೊಂಡಿದ್ದು, ಅವುಗಳ ಪೈಕಿ ಅರೋಗ್ಯ ಸೇತು ಆಯಪ್ ಬಳಕೆಯು ಸಹ ಸೇರಿದೆ. ಈ ಆಯಪ್ ಮೂಲಕ ಕೋವಿಡ್19 ಸಮೂಹವನ್ನು ಗುರುತಿಸಲು ಆರೋಗ್ಯ ಸಂಸ್ಥೆಗೆ ನೆರವಾಗುವ ಭಾರತದ ಆರೋಗ್ಯಸೇತು ಮೊಬೈಲ್ ಆಯಪ್ ಬಿಡುಗಡೆ ಗೊಳಿಸಿದ್ದು, ಈ ಆಯಪ್ ಗೆ ಇದೀಗ ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರಶಂಸೆ ದೊರೆತಿದೆ.

* ಪ್ರಸ್ತುತ ಈ ಆರೋಗ್ಯಸೇತು ಆಯಪ್ ಅನ್ನು ಸುಮಾರು 150 ಮಿಲಿಯನ್ ಗು ಅಧಿಕ ಬಳಕೆದಾರರು ಡೌನ್‌ಲೋಡ್ ಮಾಡಿಕೊಂಡಿದ್ದಾರೆ.
* ಕೇಂದ್ರ ಸರಕಾರವು ಲಾಕ್ ಡೌನ್ ಅವಧಿಯ ಎಪ್ರಿಲ್ ನಲ್ಲಿ ಆರೋಗ್ಯಸೇತು ಆಯಪ್‌ಗೆ ಚಾಲನೆ ನೀಡಿತ್ತು.
* ಈ ಆಯಪ್ ಮೂಲಕ ಸೋಂಕಿಗೆ ಸಂಬಂಧಿಸಿದ ಮಾಹಿತಿ, ಸಲಹೆ ಹಾಗೂ ಮುನ್ನೆಚ್ಚರಿಕಾ ಕ್ರಮ ಸೇರಿ ಹಲವು ಸೇವೆಯನ್ನು ಒದಗಿಸುತ್ತದೆ.

### ಪಾಲ್ ಆರ್. ಮಿಲ್ ಗ್ರೋಮ್ ಮತ್ತು ರಾಬರ್ಟ್ ಬಿ. ವಿಲ್ಸನ್ ಗೆ ಅರ್ಥಶಾಸ್ತ್ರ ನೊಬೆಲ್ ಪುರಸ್ಕಾರ



2020ನೇ ಸಾಲಿನ ಅರ್ಥಶಾಸ್ತ್ರ ನೊಬೆಲ್ ಪುರಸ್ಕಾರವನ್ನು ಘೋಷಿಸಲಾಗಿದ್ದು, ಈ ಬಹುಮಾನಕ್ಕೆ ಅಮೆರಿಕಾದ ಪಾಲ್ ಆರ್. ಮಿಲ್ ಗ್ರೋಮ್ ಮತ್ತು ರಾಬರ್ಟ್ ಬಿ. ವಿಲ್ಸನ್ ಜಂಟಿಯಾಯಾಗಿ ಆಯ್ಕೆಯಾಗಿದ್ದಾರೆ. "ಹರಾಜು ಸಿದ್ಧಾಂತದಲ್ಲಿನ ಸುಧಾರಣೆ ಮತ್ತು ಹೊಸ ಹರಾಜು ರೂಪ" ಕ್ಕಾಗಿ 2020 ನೇ ಸಾಲಿನ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

* ರಾಯಲ್ ಸ್ವೀಡಿಶ್ ಅಕಾಡೆಮಿ ಆಫ್ ಸೈನ್ಸಸ್ ಪ್ರಧಾನ ಕಾರ್ಯದರ್ಶಿ ಗೊರಾನ್ ಹನ್ಸನ್ ರವರು ಸ್ಟಾಕ್ ಹೋಮ್ ನಲ್ಲಿ ಅರ್ಥಶಾಸ್ತ್ರದ ನೊಬೆಲ್ ವಿಜೇತರನ್ನು ಘೋಷಣೆ ಮಾಡಿದರು.
* 1969 ರಿಂದ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಆರಂಭಿಸಲಾಗಿದೆ.
* ಈ ಪ್ರಶಸ್ತಿಯು 10 ಮಿಲಿಯನ್ ಕ್ರೋನ (1.1 ಮಿಲಿಯನ್ USD) ನಗದು ಬಹುಮಾನ ಜೊತೆಗೆ ಚಿನ್ನದ ಪದಕ ಒಳಗೊಂಡಿದೆ.

### ಭಾರತದ ಆರ್ಥಿಕತೆ ಈ ವರ್ಷ 10.3% ಕುಸಿತ : IMF



ಕೊರೊನಾ ಸೋಂಕಿನ ಕಾರಣ ಭಾರತದಲ್ಲಿ ವಿಧಿಸಿದ ಲಾಕ್ ಡೌನ್ ಪರಿಣಾಮ ಭಾರತದ ಆರ್ಥಿಕತೆಯು ಈ ಸಾಲಿನಲ್ಲಿ ಶೇಕಡಾ 10.3 ರಷ್ಟು ಕುಗ್ಗಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಂಎಫ್) ಹೇಳಿದೆ ನೀಡಿದೆ. ಈ ಮೂಲಕ ಭಾರತವು ಸ್ವಾತಂತ್ರ್ಯ ನಂತರ ಕಂಡ ಅತಿ ದೊಡ್ಡ ಕುಸಿತ ಎಂದು ಹೇಳಿದೆ. ಬರುವ ವರ್ಷ ಭಾರತದ ಆರ್ಥಿಕತೆ 8.8% ಏರಿಕೆ ಆಗಬಹುದು ಎಂದು IMF ಅಂದಾಜಿಸಿದ್ದು, ಇನ್ನು ಬ್ರೆಜಿಲ್ ಆರ್ಥಿಕತೆ 5.8% ಇಳಿಕೆ, ರಷ್ಯಾ 4.1% ಕುಸಿತ, ದಕ್ಷಿಣ ಆಫ್ರಿಕಾ 8% ಇಳಿಕೆ ಮತ್ತು ಚೀನಾ 1.9% ಬೆಳವಣಿಗೆ ದಾಖಲಿಸುವುದಾಗಿ ಐಎಂಎಫ್ ಅಂದಾಜಿಸಿದೆ.

## 15-10-2020

### ನಿರ್ಭಯ ಕ್ಷಿಪಣಿಯ ಪರೀಕ್ಷಾರ್ಥ ಉಡಾವಣೆ ತಾಂತ್ರಿಕ ದೋಷದಿಂದ ವಿಫಲ




ನವದೆಹಲಿ : ರಕ್ಷಣಾ ಮತ್ತು ಸಂಶೋಧನಾ ಅಭಿವೃದ್ಧಿ ಸಂಸ್ಥೆ (DRDO)ಯು ಅಭಿವೃದ್ಧಿ ಪಡಿಸಿದ ಸಬಸಾನಿಕ್ ದಾಳಿಯ ಕ್ಷಿಪಣಿ 'ನಿರ್ಭಯ'ಯು ತನ್ನ ಪರೀಕ್ಷಾರ್ಥ ಹಾರಾಟದಲ್ಲಿ ವಿಫಲಗೊಂಡಿದೆ ಸುಮಾರು 1,000 ಕಿ.ಮೀ.ವ್ಯಾಪ್ತಿಯ ಸಬಸಾನಿಕ್ ದಾಳಿ ಮಾಡಬಲ್ಲ ಕ್ಷಿಪಣಿ ಇದಾಗಿದ್ದು, ತನ್ನ ಪರೀಕ್ಷಾರ್ಥ ಉಡಾವಣೆಯಲ್ಲಿ ತಾಂತ್ರಿಕ ದೋಷದಿಂದಾಗಿ ವಿಫಲಗೊಂಡಿರುವುದಾಗಿ ಮೂಲಗಳು ಖಚಿತ ಪಡಿಸಿವೆ. ಇತ್ತೀಚಿಗೆ ಒಡಿಶಾದ ಬಾಲಸೋರ್‌ನ ಪರೀಕ್ಷಾ ವಲಯದಿಂದ ಪರೀಕ್ಷಾರ್ಥ ಉಡಾವಣೆಗೊಳಿಸಿದ ಕೆಲವೇ ನಿಮಿಷಗಳಲ್ಲಿ ಕ್ಷಿಪಣಿಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು, ಪತನಗೊಂಡಿದೆ.

### ಫೈರ್ ಆಯಂಡ್ ಫ್ಯೂರಿ ಘಟಕದ ಕೋರ್ ಕಮಾಂಡರ್ ಆಗಿ ಲೆ.ಜ. ಪಿಜಿಕೆ ಮೆನನ್ ನೇಮಕ



ನವದೆಹಲಿ : ಭಾರತ ಸೇನೆಯ 14ನೇ ಫೈರ್ ಆಯಂಡ್ ಫ್ಯೂರಿ ಘಟಕದ ಕೋರ್ ಕಮಾಂಡರ್ ಆಗಿ ಲೆಫ್ಟಿನಂಟ್ ಜನರಲ್ ಪಿಜಿಕೆ ಮೆನನ್ ಶೀಘ್ರದಲ್ಲೇ ಅಧಿಕಾರ ಸ್ವೀಕರಿಸಿದ್ದಾರೆ. ಪ್ರಸ್ತುತ 14ನೇ ಫೈರ್ ಆಯಂಡ್ ಫ್ಯೂರಿ ಘಟಕದ ಕೋರ್ ಕಮಾಂಡರ್ ಆಗಿರುವ ಲೆ.ಜ. ಹರಿಂದರ್ ಸಿಂಗ್ ಅವರು ಇಂಡಿಯನ್ ಮಿಲಿಟರಿ ಅಕಾಡೆಮಿಯ ಕಮಾಂಡೆಂಟ್ ಬಡ್ತಿ ಪಡೆದಿದ್ದು, ಅವರಿಂದ ತೆರವಾದ ಹುದ್ದೆಗೆ ಮೆನನ್ ನೇಮಕಗೊಂಡಿದ್ದಾರೆ. ಫೈರ್ ಆಯಂಡ್ ಫ್ಯೂರಿ :

* ಭಾರತೀಯ ಸೇನೆಯ ಫೈರ್ ಆಯಂಡ್ ಫ್ಯೂರಿ (14ನೇ ಕೋರ್ ಕಮಾಂಡ್) ಪೂರ್ವ ಲಡಾಖ್ ಪ್ರದೇಶದ ಸಂಪೂರ್ಣ ಗಡಿ ಪ್ರದೇಶದ ರಕ್ಷಣೆಯ ಜವಾಬ್ದಾರಿ ನಿರ್ವಹಿಸುತ್ತದೆ. ಭಾರತ ಚೀನಾ ಮಧ್ಯ ಗಡಿಯಲ್ಲಿ ಸಂಘರ್ಷ ಏರ್ಪಟ್ಟ ಈ ಸಂದರ್ಭದಲ್ಲಿ ಇವರ ನೇಮಕ ಪ್ರಮುಖವಾಗಿದೆ.
* ಈಗಾಗಲೇ ಭಾರತ ಚೀನಾ ಗಡಿವಿವಾದದ ಸಂಬಂದಿಸಿದ ಏಳು ಸುತ್ತಿನ ಮಿಲಿಟರಿ ಮಾತುಕತೆಯಲ್ಲಿ ಮೆನನ್ ಅವರು ಭಾಗವಹಿಸಿದ್ದು, ಮುಂದಿನ ದಿನಗಳಲ್ಲಿ ಮಾತುಕತೆಯ ನೇತೃತ್ವ ವಹಿಸಬೇಕಾಗುತ್ತದೆ.

## ವಿಶ್ವ ವಿದ್ಯಾರ್ಥಿಗಳ ದಿನ : ಭಾರತ ರತ್ನ ಡಾ.ಎಪಿಜೆ ಅಬ್ದುಲ್ ಕಲಾಂರ 89ನೇ ಜನ್ಮದಿನ




ನವದೆಹಲಿ : ಅಕ್ಟೋಬರ್ 15 ರಂದು ಭಾರತದ ಮಾಜಿ ರಾಷ್ಟ್ರಪತಿ ಹಾಗು ಬಾಹ್ಯಾಕಾಶ ವಿಜ್ಞಾನಿ ಭಾರತ ರತ್ನ ದಿವಂಗತ "ಡಾ.ಎಪಿಜೆ ಅಬ್ದುಲ್ ಕಲಾಂ"ರ 89 ನೇ ಜನ್ಮದಿನವಾಗಿದ್ದು, ಈ ದಿನವನ್ನು ಪ್ರತಿ ವರ್ಷ "ವಿಶ್ವ ವಿದ್ಯಾರ್ಥಿಗಳ ದಿನಾಚರಣೆ" ಎಂದು ಆಚರಿಸಲಾಗುತ್ತದೆ. ಡಾ. ಅಬ್ದುಲ್ ಕಲಾಂ ಅವರು ಭಾರತ ಕಂಡ ಶ್ರೇಷ್ಠ ವಿಜ್ಞಾನಿ, ನೆಚ್ಚಿನ ಶಿಕ್ಷಕ, ಮೇಧಾವಿ, ರಾಜಕಾರಣಿಯಾಗಿ ಭಾರತೀಯರ ಮನದಲ್ಲಿ ನೆಲೆಯೂರಿದ್ದು, ಇವರು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ವಿಶ್ವಸಂಸ್ಥೆಯು 2010ರಲ್ಲಿ ಅಕ್ಟೋಬರ್ 15ನ್ನು ಇವರ ಜನ್ಮ ದಿನವನ್ನು "ವಿಶ್ವ ವಿದ್ಯಾರ್ಥಿಗಳ ದಿನ"ವನ್ನಾಗಿ ಘೋಷಿಸಿದೆ.

* ಅಬ್ದುಲ್ ಕಲಾಂ ಅವರು ಭಾರತದ 11ನೇ ರಾಷ್ಟ್ರಪತಿಯಾಗಿದ್ದರು.
* ಕಲಾಂ ಅವರು 1931ರ ಅಕ್ಟೋಬರ್ 15ರಂದು ತಮಿಳುನಾಡಿನ ರಾಮೇಶ್ವರಂನಲ್ಲಿ ಜನಿಸಿದರು.
* ಕಲಾಂ ಅವರು 2002 ರಿಂದ 2007ರವರೆಗೆ ಭಾರತದ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದಾರೆ.
* 2015ರ ಜುಲೈ 27ರಂದು ಶಿಲ್ಲಾಂಗ್‌ನಲ್ಲಿ ವಿದ್ಯಾರ್ಥಿ ಉಪನ್ಯಾಸ ನೀಡುವಾಗ ವೇದಿಕೆ ಮೇಲೆ ಕುಸಿದು ಬಿದ್ದು, ಕೊನೆಯುಸಿರೆಳೆದರು.
* ಭಾರತದ ಕ್ಷಿಪಣಿಗಳ ಪಿತಾಮಹ ಎಂದು ಇವರನ್ನು ಗುರುತಿಸಲಾಗುತ್ತದೆ.

## ಇನ್ನು ಸರ್ಕಾರಿ ಕಚೇರಿಯಲ್ಲಿ 'BSNL' ಕಡ್ಡಾಯ : ಕೇಂದ್ರ ಸರ್ಕಾರ ಆದೇಶ




ನವದೆಹಲಿ: ಹಲವು ಟೆಲಿಕಾಂ ಸಂಸ್ಥೆಗಳ ಸೇವೆಯಿಂದ ಭಾರಿ ನಷ್ಟಕ್ಕೊಳಗಾದ ಸರ್ಕಾರೀ ಸ್ವಾಮ್ಯದ BSNL ಸಂಸ್ಥೆಗೆ ಆರ್ಥಿಕ ಬಲ ತುಂಬಲು ಕೇಂದ್ರ ಸರ್ಕಾರ ಹೊಸ ಆದೇಶವೊಂದನ್ನ ಜಾರಿ ಮಾಡಿದ್ದು, ಈ ಆದೇಶದ ಅನ್ವಯ ಇನ್ನು ದೇಶದ ಎಲ್ಲ ಸರ್ಕಾರೀ ಕಚೇರಿಗಳಲ್ಲಿ BSNL ಸೇವೆಯನ್ನು ಕಡ್ಡಾಯಗೊಳಿಸಿದೆ. * 2019 20ರ ಸಾಲಿನಲ್ಲಿ ಬಿಎಸ್‌ಎನ್‌ಎಲ್ ಸಂಸ್ಥೆ 15,500 ಕೋಟಿ ರೂಪಾಯಿಯಷ್ಟು ನಷ್ಟ ಅನುಭವಿಸಿದ್ದು, ಅಲ್ಲದೆ 2008ರಲ್ಲಿ 80 ಕೋಟಿಯಷ್ಟು ಚಂದಾರರನ್ನು ಹೊಂದಿದ ಈ ಸಂಸ್ಥೆಯು ಪ್ರಸ್ತುತ 80 ಲಕ್ಷ ಚಂದಾದಾರನ್ನು ಮಾತ್ರ ಹೊಂದಿದೆ. * ಕೇಂದ್ರ ಸರ್ಕಾರ ಹೊಸ ಆದೇಶದ ಅನ್ವಯ ಇನ್ನು ಸರ್ಕಾರದ ಎಲ್ಲ ಸಚಿವಾಲಯಗಳು, ಸರ್ಕಾರಿ ಇಲಾಖೆಗಳು ಹಾಗೂ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ BSNL ಮತ್ತು MTNL ದೂರಸಂಪರ್ಕ ಸೇವೆಯನ್ನು ಕಡ್ಡಾಯಗೊಳಿಸಿ ಆದೇಶಿಸಿದೆ.

## ಜ್ಞಾನಪೀಠ ಪುರಸ್ಕೃತ ಮಲಯಾಳಂ ಸಾಹಿತಿ ಅಕ್ಕಿಥಮ್ ಅಚ್ಯುತನ್ ನಂಬೂದಿರಿ ಇನ್ನಿಲ್ಲ



ಪಾಲಕ್ಕಾಡ್ : ಕೇರಳ ರಾಜ್ಯದ ಮಲಯಾಳಂ ಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಅಕ್ಕಿಥಮ್ ಅಚ್ಯುತನ್ ನಂಬೂದರಿ ಅವರು ತಮ್ಮ ವಯೋಸಹಜ ಕಾಯಿಲೆಯಿಂದ ಕೇರಳದ ತ್ರಿಶೂರ್ ನಗರದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

* ಇವರು 2019 ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗಿದ್ದರು. ಸೆಪ್ಟೆಂಬರ್ 24, 2019ರಂದು ಕೇರಳದ ಪಾಲಕ್ಕಾಡ್ ನ ಸರಳ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.
* ಕೇರಳ ಸರಕಾರದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ 'ಎಳಥುಚಾನ್ ಪ್ರಶಸ್ತಿ, ಭಾರತ ಸರ್ಕಾರದ "ಪದ್ಮಶ್ರೀ" ಪುರಸ್ಕಾರ, 'ಕೇರಳ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ, 'ಒಡಕ್ಕುಳಾಲ್' ಪ್ರಶಸ್ತಿ, 'ವಲ್ಲಥೋ' ಪ್ರಶಸ್ತಿ, 'ವಯಲಾರ್' ಪ್ರಶಸ್ತಿ, 'ಆಸಾನ್' ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

# 16-10-2020

## ಕೇಂದ್ರ ಸರ್ಕಾರದಿಂದ 75 ರೂ. ಮುಖ ಬೆಲೆಯ ನಾಣ್ಯ ಬಿಡುಗಡೆ




ಅಕ್ಟೋಬರ್ 16 ರಂದು ವಿಶ್ವಸಂಸ್ಥೆಯ ಆಹಾರ ಹಾಗೂ ಕೃಷಿ ಸಂಸ್ಥೆಯು ತನ್ನ 75ನೇ ವರ್ಷದ ವಾರ್ಷಿಕೋತ್ಸವದ ಆಚರಿಸಿಕೊಳ್ಳುತ್ತಿದ್ದು, ಈ ವಿಶೇಷ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು 75 ರೂಪಾಯಿ ಮುಖಬೆಲೆಯ ನಾಣ್ಯವನ್ನು ಬಿಡುಗಡೆ ಮಾಡಲಿದ್ದು, ಈ ಮೂಲಕ ಭಾರತ ಹಾಗೂ FAO (Food and Agriculture Organization of the United Nations) ನಡುವಿನ ಬಾಂಧವ್ಯವನ್ನು ಮತ್ತಷ್ಟು ಉತ್ತಮಗೊಳಿಸಲಾಗುತ್ತಿದೆ. ವಿಶ್ವಸಂಸ್ಥೆಯ ಆಹಾರ ಹಾಗೂ ಕೃಷಿ ಸಂಸ್ಥೆ : ವಿಶ್ವಸಂಸ್ಥೆಯ ವಿಶೇಷ ಭಾಗವಾಗಿರುವ ಆಹಾರ ಮತ್ತು ಕೃಷಿ ಸಂಸ್ಥೆ ಸಂಸ್ಥೆಯು, ಹಸಿವನ್ನು ನೀಗಿಸಲು ಪೋಷಣೆ ಮತ್ತು ಆಹಾರ ಸುರಕ್ಷತೆಯನ್ನು ಸುಧಾರಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದೆ. ಈ ಸಂಸ್ಥೆಯು ಅಕ್ಟೋಬರ್ 1945 ರಲ್ಲಿ ಕಾರ್ಯಾರಂಭ ಮಾಡಿತು.

## ಪದ್ಮಶ್ರೀ ಪುರಸ್ಕೃತ ಕೂಚುಪುಡಿ ನೃತ್ಯ ಕಲಾವಿದೆ ಶೋಭ ನಾಯ್ಡು ಇನ್ನಿಲ್ಲ



ಹೈದ್ರಾಬಾದ್ : ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆಯಾದ ಕೂಚುಪುಡಿ ನೃತ್ಯದಲ್ಲಿ ಅಪಾರ ಸಾಧನೆ ಮಾಡಿದ್ದ ಕಲಾವಿದೆ ಶೋಭಾ ನಾಯ್ಡು ಅವರು ಇತ್ತೀಚಿಗೆ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯೊಂದರಲ್ಲಿ ಕೊನೆಯುಸಿರೆಳೆದರು. * 1956 ರಲ್ಲಿ ಆಂಧ್ರಪ್ರದೇಶದ ಅನಕಪಲ್ಲಿಯಲ್ಲಿ ಜನನ

* ವೇಂಪತಿ ಚಿನ್ನ ಸತ್ಯಂ ಅವರಿಂದ ಕೂಚುಪುಡಿ ನೃತ್ಯ ತರಬೇತಿ ಪಡೆದಿದ್ದರು.
* 1991 ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 2001 ರಲ್ಲಿ ಭಾರತ ಸರ್ಕಾರದ ಪದ್ಮಶ್ರೀ ಗೌರವ ಮದ್ರಾಸ್‌ನ ಶ್ರೀ ಕೃಷ್ಣ ಗಣ ಸಭೆಯಿಂದ ನೃತ್ಯ ಚೂಡಾಮಣಿ ಪ್ರಶಸ್ತಿ ಇನ್ನು ಹಲವು ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ.
* ಹೈದರಾಬಾದ್‌ನ ಕೂಚುಪುಡಿ ಆರ್ಟ್ ಅಕಾಡೆಮಿಯ ಪ್ರಾಂಶುಪಾಲರಾಗಿಯೂ ಸೇವೆ ಸಲ್ಲಿಕೆ.
* ದೇಶ ವಿದೇಶದ ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದರು.

## 5 ಲಕ್ಷ ಕೋಟಿ ರೂ ಮಾರುಕಟ್ಟೆ ಬಂಡವಾಳ ಮೌಲ್ಯದಾಟಿದ ಇನ್ಫೋಸಿಸ್




ಬೆಂಗಳೂರು ಮೂಲದ ಇನ್ಫೋಸಿಸ್ ಲಿಮಿಟೆಡ್ ಸಂಸ್ಥೆಯು ಇತ್ತೀಚಿಗೆ ತನ್ನ ಮಾರುಕಟ್ಟೆ ಬಂಡವಾಳ ಮೌಲ್ಯವನ್ನು 5 ಲಕ್ಷ ಕೋಟಿ ರುಪಾಯಿಗಳಿಗೆ ಹೆಚ್ಚಿಸಿಕೊಂಡಿದ್ದು, ಹಾಗೂ ಈ ಮೂಲಕ 5 ಲಕ್ಷ ಮಾರುಕಟ್ಟೆ ಬಂಡವಾಳ ಮೌಲ್ಯ ದಾಟಿದ ಭಾರತದ ಐದನೇ ಕಂಪೆನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

* ಕಂಪನಿಯು ಈ ವರ್ಷ ತನ್ನ ಷೇರಿನ ಬೆಲೆಯಲ್ಲಿ 61% ಹೆಚ್ಚಳ ಕಂಡಿದೆ.

## "ಅತ್ಯುತ್ತಮ ನಿರ್ವಹಣೆಯ ನಿಲ್ದಾಣ" ಪ್ರಶಸ್ತಿ ಪಡೆದ ಮೈಸೂರು ರೈಲ್ವೆ ನಿಲ್ದಾಣ



ಮೈಸೂರು : ನೈಋತ್ಯ ರೈಲ್ವೆಯ ಪ್ರಮುಖ ನಿಲ್ದಾಣಗಳಲ್ಲಿ ಒಂದಾಗಿರುವ ಮೈಸೂರು ರೈಲ್ವೆ ನಿಲ್ದಾಣವನ್ನು 2019 20ನೇ ಸಾಲಿನ 'ಅತ್ಯುತ್ತಮ ನಿರ್ವಹಣೆಯ ನಿಲ್ದಾಣ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಮೂಲಕ ಮೈಸೂರು ನಿಲ್ದಾಣವು ನಾಲ್ಕು ಬಾರಿ ಈ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿದೆ. ಇನ್ನು ಮೈಸೂರು ನಿಲ್ದಾಣದಿಂದ ನಿಜಾಮುದ್ದೀನ್ (ದೆಹಲಿ) ನಿಲ್ದಾಣದ ನಡುವೆ ಚಲಿಸುವ ವಾರದ ಸೂಪರ್ ಫಾಸ್ಟ್ ರೈಲಾಗಿರುವ "ಸ್ವರ್ಣಜಯಂತಿ" ರೈಲಿಗೆ 2019 20ನೇ ಸಾಲಿನ ನೈಋತ್ಯ ರೈಲ್ವೆಯಲ್ಲಿ

'ಅತ್ಯುತ್ತಮವಾಗಿ ನಿರ್ವಹಿಸಿದ ರೇಕ್' ಎಂಬ ಪ್ರಶಸ್ತಿಯನ್ನು ಘೋಷಿಸಲಾಗಿದೆ.

## 17-10-2020

### ಶ್ರೀನಗರ ಕಣಿವೆಯಿಂದ ಲೇಹ್ ವರೆಗೆ ಸರ್ವಋತು ಸುರಂಗ ನಿರ್ಮಾಣಕ್ಕೆ ಚಾಲನೆ



ಶ್ರೀನಗರ: ಇತ್ತೀಚಿಗಷ್ಟೇ ಪ್ರಧಾನಿ ಮೋದಿಯವರು ಅಟಲ್ ಸುರಂಗವನ್ನು ಉದ್ಘಾಟಿಸಿದ ಬೆನ್ನಲ್ಲೇ, ಇದೀಗ ಶ್ರೀನಗರದಿಂದ ಲೇಹ ವರೆಗೆ ಸರ್ವಋತುಗಲ್ಲಿ ಸಂಚರಿಸಬಹುದಾದ ಸುರಂಗ ನಿರ್ಮಾಣಕ್ಕೆ ಕೇಂದ್ರ ಸಚಿವ ನಿತಿನ್ ಗಡ್ಕರಿಯವರು ಚಾಲನೆ ನೀಡಿದರು.

* ಒಟ್ಟು 14.15 ಕಿ.ಮೀ ಉದ್ದದ ಸುರಂಗ ಮಾರ್ಗ ಇದಾಗಲಿದ್ದು, ಇದು ಏಷ್ಯಾದ ಅತ್ಯಂತ ಉದ್ದದ ಸುರಂಗಗಳಲ್ಲಿ ಒಂದೆನಿಸಲಿದೆ.
* ಸುರಂಗ ನಿರ್ಮಾಣ ಆಧುನಿಕ ಭಾರತದ ಇತಿಹಾಸದಲ್ಲಿ ದೊಡ್ಡ ಸಾಧನೆಯಾಗಲಿದ್ದು, ಮಿಲಿಟರಿ ಚಟುವಟಿಕೆಗಳ ಮೂಲಕ ದೇಶದ ರಕ್ಷಣೆಗೂ ಸಹಕರಿಸಲಿದೆ.
* ಸುರಂಗ ಮಾರ್ಗ ಪೂರ್ಣಗೊಂಡ ಬಳಿಕಮೂರು ಗಂಟೆಯ ಸಂಚಾರದ ಅವಧಿ ಕೇವಲ 15 ನಿಮಿಷಕ್ಕೆ ಇಳಿಯಲಿದೆ.
* ಒಟ್ಟು 6,800 ಕೋಟಿ ರೂಪಾಯಿ ವೆಚ್ಚದ ಯೋಜನೆ ಇದಾಗಿದ್ದು, ಪ್ರಧಾನಿ ಮೋದಿ 2018 ಮೇನಲ್ಲಿ ಶಿಲಾನ್ಯಾಸ ನೆರವೇರಿಸಿದ್ದರು.

### ವಿಶ್ವಸಂಸ್ಥೆಯ ಮಾನವಹಕ್ಕುಗಳ ಮಂಡಳಿಗೆ ಆಯ್ಕೆಯಾದ ಪಾಕ್, ಚೀನಾ, ರಷ್ಯಾ, ಕ್ಯೂಬಾ



ವಿಶ್ವಸಂಸ್ಥೆ : ವಿಶ್ವಸಂಸ್ಥೆಯ ಮಾನವಹಕ್ಕುಗಳ ಮಂಡಳಿಗೆ ಸದಸ್ಯ ಸ್ಥಾನಗಳನ್ನು ಪಾಕಿಸ್ತಾನ, ಚೀನಾ, ರಷ್ಯಾ ಮತ್ತು ಕ್ಯೂಬಾ ದೇಶಗಳು ಪಡೆದಿವೆ.


* 193 ಸದಸ್ಯ ರಾಷ್ಟ್ರಗಳು ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ನಡೆಸಿದ ರಹಸ್ಯ ಮತದಾನದಲ್ಲಿ ಪಾಕಿಸ್ತಾನವು 169, ಉಜ್ಬೆಕಿಸ್ತಾನ 164, ನೇಪಾಳ 150 ಮತ್ತು ಚೀನಾ 139ಮತಗಳನ್ನು ಗಳಿಸಿದವು.
* ಇನ್ನು 90 ಮತಗಳನ್ನು ಪಡೆದ ಸೌದಿ ಅರೇಬಿಯಾವು ಸದಸ್ಯ ಸ್ಥಾನ ಪಡೆಯುವಲ್ಲಿ ವಿಫಲವಾಯಿತು.

### ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಚಾಲನೆ



ಮೈಸೂರು: ವಿಶ್ವ ವಿಖ್ಯಾತ ಮೈಸೂರು ದಸರಾವನ್ನು ಈ ಬಾರಿ ಕೋರೋಣ ಸೋಂಕಿನ ಕಾರಣ ಸರಳವಾಗಿ ಆಚರಿಸಲು ಸರ್ಕಾರ ಹಲವುರೀತಿಯ ಕ್ರಮಗಳನ್ನು ಕೈಗೊಂಡಿದ್ದು, ಮೈಸೂರಿನ ಚಾಮುಂಡೇಶ್ವರಿ ದೇವಿ ಸನ್ನಿಧಾನದಲ್ಲಿ ಮೈಸೂರು ದಸರಾ ಉದ್ಘಾಟನೆಯನ್ನು ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಮ್ಮುಖದಲ್ಲಿ ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರು ನೆರವೇರಿಸಿದ್ದಾರೆ.

### ಅಕ್ಟೋಬರ್ 16 = World Food Day 2020 (ವಿಶ್ವ ಆಹಾರದಿನ)




1945ರಲ್ಲಿ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ(FAO) ಯು ಪ್ರತಿವರ್ಷ ಅಕ್ಟೋಬರ್ 16 ತಾರೀಕಿನಂದು "ವಿಶ್ವ ಆಹಾರ ದಿನ"ವನ್ನಾಗಿ ಘೋಷಿಸಿತು. ಈ ಮೂಲಕ ಹಸಿವಿನ ಕುರಿತಾಗಿ ಜಾಗೃತಿ, ಉತ್ತಮ ಆರೋಗ್ಯಕ್ಕಾಗಿ ಆಹಾರದ ಕ್ರಮ ಸೇರಿ ಹಲವು ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

* ಈ ದಿನದಂದು ಜಗತ್ತಿನಾದ್ಯಂತ ಹಲವು ಕಾರ್ಯಕ್ರಮಗಳು, ಮ್ಯಾರಾಥಾನ್‌ಗಳು, ಹಸಿವಿನ ಮೆರವಣಿಗೆ, ವಸ್ತು ಪ್ರದರ್ಶನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಸೇರಿ ವಿವಿಧ ಜಾಗೃತಿ ಸಭೆ ಸಮಾರಂಭ ಆಯೋಜಿಸಲಾಗುತ್ತಿದೆ.
* ಈ ವರ್ಷ ಆಹಾರ ಮತ್ತು ಕೃಷಿ ಸಂಸ್ಥೆಯ 75ನೇ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿದೆ.
* ಈ ವರ್ಷದ ಧ್ಯೇಯವಾಕ್ಯ : ಬೆಳೆಯಿರಿ, ಪೋಷಿಸಿ, ಸುಸ್ಥಿರವಾಗಿರಿ. ಒಟ್ಟಾಗಿರಿ. ನಮ್ಮ ಕೆಲಸಗಳೇ ನಮ್ಮ ಭವಿಷ್ಯ.("Grow, nourish, sustain. Together. Our actions are our future.")

## 19-10-2020

### ಬ್ರಹ್ಮೋಸ್ ಸೂಪರ್ ಸಾನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ



ನವದೆಹಲಿ: ಭಾರತ ಹಾಗೂ ರಷ್ಯಾ ರಾಷ್ಟ್ರಗಳ ಜಂಟಿ ತಂತ್ರಜ್ಞಾನದೊಂದಿಗೆ ತಯಾರಿಸಲಾದ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಯ ನೌಕಾ ಆವೃತ್ತಿಯನ್ನು ಇತ್ತೀಚಿಗೆ ಐಎನ್‌ಎಸ್ ಚೆನ್ನೈನ ಅರಬ್ಬೀ ಸಮುದ್ರದಲ್ಲಿ ಪರೀಕ್ಷೆಗೊಳಪಡಿಸಲಾಯಿತು ಹಾಗೂ ಈ ಪರೀಕ್ಷೆಯಲ್ಲಿ ಬ್ರಹ್ಮೋಸ್ ಯಶಸ್ವಿಯಾಗಿದೆ ಎಂದು ಭಾರತೀಯ ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.
* ಈಗ ಪರೀಕ್ಷಿಸಲಾಗಿರುವ ಕ್ಷಿಪಣಿಯನ್ನು ಭಾರತೀಯ ನೌಕಾಪಡೆಯ ನೌಕೆಗಳ ಮೂಲಕ ಉಡಾಯಿಸಬಹುದಾಗಿದೆ.
* ಈ ಕ್ಷಿಪಣಿಯ 290 ಕಿ.ಮೀ ವ್ಯಾಪ್ತಿಯ ಸಾಮರ್ಥ್ಯ ಹೊಂದಿದೆ.
* ಕ್ಷಿಪಣಿಯು ಭೂ, ವಾಯು ಮತ್ತು ನೌಕಾ ರೂಪಾಂತರಗಳನ್ನು ಹೊಂದಿದೆ.
* ಮ್ಯಾಕ್ 2.8 ನ ವೇಗ ಹೊಂದಿದ್ದು, ಶಬ್ದದ ವೇಗಕ್ಕಿಂತಲೂ ಮೂರು ಪಟ್ಟು ಅಧಿಕವಾಗಿದೆ.

### ವಿದ್ಯುತ್ ನಿಗಮ ಖಾಸಗೀಕರಣಕ್ಕೆ ಕೇಂದ್ರದ ಪ್ರಸ್ತಾವ ತಿರಸ್ಕರಿಸಿದ ಕರ್ನಾಟಕ



ಬೆಂಗಳೂರು : ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (KPTCL) ಅಧೀನದಲ್ಲಿ ಒಟ್ಟು ಐದು ವಿದ್ಯುತ್ ಸರಬರಾಜು ನಿಗಮಗಳಿದ್ದು, ಇವುಗಳ ಪೈಕಿ ಮೂರು ನಿಗಮಗಳನ್ನು ಖಾಸಗೀಕರಣಗೊಳಿಸುವಂತೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸುವ ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ರಾಜ್ಯ ಸರ್ಕಾರ ತಿರಸ್ಕರಿಸಿದ್ದು, ರಾಜ್ಯದ ಎಲ್ಲ ಎಸ್ಕಾಂಗಳೂ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದು, ಇವುಗಳ ಖಾಸಗೀಕರಣ ಈಗಿನ ಪರಿಸ್ಥಿತಿಯಲ್ಲಿ ಅಗತ್ಯವಿಲ್ಲ ಎಂದು ರಾಜ್ಯ ಸರ್ಕಾರವು ಕೇಂದ್ರಕ್ಕೆ ಪ್ರತಿಕ್ರಿಯೆ ನೀಡಿದೆ. ರಾಜ್ಯದ ಬೆಸ್ಕಾಂ (ಬೆಂಗಳೂರು), ಚೆಸ್ಕಾಂ (ಮೈಸೂರು) ಮತ್ತು ಜೆಸ್ಕಾಂ (ಕಲಬುರಗಿ) ಸೇರಿ ಭಾರತದಲ್ಲಿನ ಒಟ್ಟು 34 ಎಸ್ಕಾಂಗಳನ್ನು ಖಾಸಗೀಕರಣಗೊಳಿಸಬಹುದೆಂದು ಕೇಂದ್ರ ಸರ್ಕಾರ ಹೇಳಿತ್ತು.

### ಮೈಸೂರು ವಿಶ್ವ ವಿದ್ಯಾಲಯದ 100 ನೇ ಘಟಿಕೋತ್ಸವದಲ್ಲಿ ಪ್ರಧಾನಿ ಮೋದಿ ಬಾಗಿ



ದಿನಾಂಕ 19 ಅಕ್ಟೋಬರ್ 2020 ರಂದು ಮೈಸೂರು ವಿಶ್ವವಿದ್ಯಾಲಯದ ಐತಿಹಾಸಿಕ 100ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮ ನೆರವೇರಿದ್ದು, ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಕಾರ್ಯಕ್ರಮದಲ್ಲಿ ವರ್ಚುಯಲ್ ಸಭೆಯ ಮೂಲಕ ಭಾಗಿಯಾಗಿ ಭಾಷಣ ಮಾಡಿದರು.

### ಶೀಘ್ರದಲ್ಲೇ ವಾಯುಪಡೆ ಮತ್ತೆ 3 4 ರಫೇಲ್ ಯುದ್ಧ ವಿಮಾನಗಳ ಸೇರ್ಪಡೆ



ನವದೆಹಲಿ : ಫ್ರಾನ್ಸ್ ದೇಶವು ಭಾರತದೊಂದಿಗಿನ ಒಪ್ಪಂದದ ಪ್ರಕಾರ ಈಗಾಗಲೇ ಮೊದಲನೇ ಹಂತದ ರಫೇಲ್ ಯುದ್ಧ ವಿಮಾನಗಳನ್ನು ಪೂರೈಸಿದ್ದು, ಇದೀಗ ಎರಡನೇ ಹಂತದಲ್ಲಿ 3 ರಿಂದ 4 ರಫೇಲ್ ಜೆಟ್ ಗಳು ಶೀಘ್ರದಲ್ಲೇ ಭಾರತಕ್ಕೆ ಆಗಮಿಸಲಿವೆ. ಈ

ವಿಮಾನಗಳು ಹರಿಯಾಣದ ಅಂಬಾಲಾದಲ್ಲಿರುವ ವಾಯುನೆಲೆಗೆ ನವೆಂಬರ್ ಮೊದಲ ವಾರದಲ್ಲಿ ಬಂದು ತಲುಪುವ ನಿರೀಕ್ಷೆಯಿದೆ.
* ಭಾರತವು ಒಟ್ಟು 36 ರಫೇಲ್ ಜೆಟ್ ಯುದ್ಧ ವಿಮಾನಗಳ ಖರೀದಿಗೆ ಫ್ರಾನ್ಸ್ ಒಪ್ಪಂದಮಾಡಿಕೊಂಡಿದೆ.
* ಐದು ವಿಮಾನಗಳು ಮೊದಲ ಬ್ಯಾಚ್‌ನಲ್ಲಿ ಜುಲೈ 28ರಂದು ಭಾರತಕ್ಕೆ ತಲುಪಿದ್ದು, ಸೆಪ್ಟೆಂಬರ್ 10ರಂದು ವಾಯುಪಡೆಗೆ ಅಧಿಕೃತವಾಗಿ ಸೇರ್ಪಡೆಗೊಳಿಸಲಾಗಿದೆ.
* ರಫೇಲ್ ಯುದ್ಧ ವಿಮಾನ ಹಾರಿಸಲಿರುವ ಮೊದಲ ಮಹಿಳಾ ಪೈಲಟ್ ಶಿವಾಂಗಿ

## ಪೃಥ್ವಿ 2 ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗ ಯಶಸ್ವಿ



ಭುವನೇಶ್ವರ್ : ಭಾರತೀಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ದೇಶೀಯ ತಂತ್ರಜ್ಞಾನ ಬಳಸಿಕೊಂಡು ತಯಾರಿಸಲಾಗಿರುವ "ಪೃಥ್ವಿ 2" ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗವು ಒಡಿಶಾದ ಬಾಲಾಸೋರ್ ಕರಾವಳಿ ತೀರದಲ್ಲಿರುವ ಉಡಾವಣಾ ಕೇಂದ್ರದಿಂದ ನಡೆಸಲಾಗಿದ್ದು, ಈ ಪ್ರಯೋಗವು ಯಶಸ್ವಿಯಾಗಿದೆ ಎಂದು ಮೂಲಗಳು ಖಚಿತ ಪಡಿಸಿವೆ. * "ಪೃಥ್ವಿ 2" ಕ್ಷಿಪಣಿಯು 250 ಕಿ.ಮೀ ದೂರ ಕ್ರಮಿಸಬಲ್ಲದು
* ಇದೊಂದು ಅಣ್ವಸ್ತ್ರ ಸಿಡಿತಲೆ ಸಹಿತ ಕ್ಷಿಪಣಿಯಾಗಿದ್ದು, 1 ಟನ್ ಅಣ್ವಸ್ತ್ರ ಸಿಡಿತಲೆಯನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿದೆ.

## ಜಾಗತಿಕ ಹಸಿವು ಸೂಚ್ಯಂಕ : ಭಾರತಕ್ಕೆ 94ನೇ ಸ್ಥಾನ



ನವದೆಹಲಿ : 'ಜಾಗತಿಕ ಹಸಿವು ದಿನ'ವಾದ ಅಕ್ಟೋಬರ್ 16 ರಂದು ಜಾಗತಿಕ ಹಸಿವು ಸೂಚ್ಯಂಕ ಪ್ರಕಟಗೊಂಡಿದ್ದು, ಭಾರತವು 94ನೇ ಸ್ಥಾನವನ್ನು ಪಡೆದಿದೆ. ಕಳೆದ ವರ್ಷದ ಹಸಿವು ಸೂಚ್ಯಂಕದಲ್ಲಿ ಭಾರತವು 102ನೇ ಸ್ಥಾನವನ್ನು ಪಡೆದಿತ್ತು, ಆದರೆ ಈ ವರ್ಷ 8 ಸ್ಥಾನಗಳ ಏರಿಕೆ ಕಂಡಿದೆ.
* ಈ ವರ್ಷ 132 ದೇಶಗಳ ಹಸಿವಿನ ಹಾಗೂ ಅಪೌಷ್ಟಿಕತೆಯ ದತ್ತಾಂಶಗಳನ್ನು ಸಂಗ್ರಹಿಸಲಾಗಿತ್ತಾದರೂ, ಈ ಸೂಚ್ಯಂಕದಲ್ಲಿ 107 ದೇಶಗಳಲ್ಲಿನ ಹಸಿವಿನ ಪ್ರಮಾಣ ಹಾಗೂ ಅಪೌಷ್ಟಿಕತೆಯ ಪ್ರಮಾಣದ ವಿವರಗಳನ್ನು ಮಾತ್ರ ನೀಡಲಾಗಿದೆ.
* ಮಕ್ಕಳ ದೇಹತೂಕದ ಪ್ರಮಾಣದಲ್ಲೂ ಭಾರತದ ಸಾಧನೆ ಅತ್ಯಂತ ಕಳಪೆಯಾಗಿದ್ದು ಇದು ಶೇ.17.3 ಆಗಿದೆ.
* ಭಾರತದಲ್ಲಿ ಶೇ. 37.4ರಷ್ಟು ಮಕ್ಕಳು ಕುಂಠಿತವಾದ ದೇಹವುಳ್ಳವರಾಗಿದ್ದರೆಂದು ಸೂಚ್ಯಂಕ ತಿಳಿಸಿದೆ.
* ಭಾರತದ ನೆರೆಯ ಬಾಂಗ್ಲಾದೇಶ 75ನೇ ಸ್ಥಾನ, ಮ್ಯಾನ್ಮಾರ್ 78 ಮತ್ತು ಪಾಕಿಸ್ತಾನ 88ನೇ ಸ್ಥಾನ, ನೇಪಾಳ 73ನೇ ಸ್ಥಾನ, ಶ್ರೀಲಂಕಾ 64ನೇ ಸ್ಥಾನ ಪಡೆದಿದೆ.
* ಚೀನಾ, ಬೆಲಾರಸ್, ಉಕ್ರೇನ್, ಟರ್ಕಿ, ಕ್ಯೂಬಾ ಮತ್ತು ಕುವೈತ್ ಸೇರಿದಂತೆ 17 ರಾಷ್ಟ್ರಗಳು ಜಾಗತಿಕ ಹಸಿವು ಸೂಚ್ಯಂಕದಲ್ಲಿ ಅಗ್ರ ಸ್ಥಾನವನ್ನು ಪಡೆದಿವೆ.

## ನ್ಯೂಜಿಲೆಂಡ್ ಚುನಾವಣೆಯಲ್ಲಿ ಜೆಸಿಂಡಾ ಪಕ್ಷಕ್ಕೆ ಜಯ




ಆಕ್ಲಂಡ್ : ನ್ಯೂಜಿಲೆಂಡ್ ನಲ್ಲಿ ಇತ್ತೀಚಿಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಧಾನಿ ಜೆಸಿಂಡಾ ಆರ್ಡರ್ನ್ ಅವರ ಪಕ್ಷವು ದಿಗ್ವಿಜಯ ಸಾಧಿಸಿದೆ. ಜೆಸಿಂಡಾ ನೇತೃತ್ವದ ಲೇಬರ್ ಪಕ್ಷವು ಶೇ 49.2 ರಷ್ಟು ಮತಗಳನ್ನು ಪಡೆಯುವ ಮೂಲಕ 120 ಸದಸ್ಯರ ಸಂಸತ್‌ನಲ್ಲಿ ಸುಮಾರು 64 ಸ್ಥಾನಗಳನ್ನು ಪಡೆದುಕೊಂಡಿದೆ.

## 20-10-2020

### ಸ್ತ್ರೀಯರ ಮದುವೆ ವಯಸ್ಸು ಪರಿಷ್ಕರಿಸುವ ಬೆಗ್ಗೆ ಶೀಘ್ರ ಕೇಂದ್ರದ ನಿರ್ಧಾರಸಾಧ್ಯತೆ



ನವದೆಹಲಿ: ಭಾರತದಲ್ಲಿ ಎಲ್ಲರಿಗೂ ತಿಳಿದಿರುವಂತೆ ಪ್ರಸ್ತುತ ಹೆಣ್ಣು ಮಕ್ಕಳ ಮದುವೆ ವಯಸ್ಸು, 18 ವರ್ಷ ಆಗಿದ್ದು, ಇನ್ನು ಗಂಡು ಮಕ್ಕಳ ಮದುವೆ ವಯಸ್ಸು 21 ಆಗಿದೆ. ಹಲವು ವರ್ಷಗಳಿಂದ ಹೆಣ್ಣು ಮಕ್ಕಳ ಮದುವೆ ವಯಸ್ಸನ್ನು ಪರಿಸ್ಕರಿಸುವಂತೆ ಆಗ್ರಹಿಸುತ್ತಿರುವ ಬೆನ್ನಲ್ಲೇ ಕೇಂದ್ರ ಸರ್ಕಾರವು ಈ ಕುರಿತು ಅಧ್ಯಯನ ನಡೆಸಿ ಶಿಫಾರಸ್ಸು ಮಾಡಲು ಸಮಿತಿಯೊಂದನ್ನು ನೇಮಿಸಿದೆ. ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರವು ನಿರ್ಣಯ ತೆಗೆದುಕೊಳ್ಳುವುದಾಗಿ ಪ್ರಧಾನಿ ಮೋದಿಯವರು ಇತ್ತೀಚಿಗೆ ಸಮಾರಂಭವೊಂದರಲ್ಲಿ ತಿಳಿಸಿದ್ದಾರೆ.

* ಭಾರತದ ಹೆಣ್ಣು ಮಕ್ಕಳು ಶಿಕ್ಷಣ ಸೇರಿ ಎಲ್ಲ ಕ್ಷೇತ್ರಗಳನ್ನು ಸಾಧನೆ ಮಾಡುತ್ತಿರುವದರಿಂದ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ಈ ನಿರ್ಧಾರ ಪ್ರಾಮುಖ್ಯತೆ ಪಡೆದಿದೆ.

### ಹಿರಿಯ ಕನ್ನಡ ಚಿತ್ರರಂಗದ ಕಲಾವಿದ ಕೃಷ್ಣ ನಾಡಿಗ್ ಇನ್ನಿಲ್ಲ



ಬೆಂಗಳೂರು: ಕನ್ನಡ ಚಿತ್ರರಂಗದ ಮತ್ತು ಕಿರುತೆರೆ ಕಲಾವಿದ ಕೃಷ್ಣ ನಾಡಿಗ್ ಅವರು ಇತ್ತೀಚಿಗೆ ತೀವ್ರ ಎದೆನೋವಿನಿಂದ ಬಳಲಿ ಇಹಲೋಕ ತ್ಯಜಿಸಿದರು. ಕನ್ನಡ ಚಿತ್ರರಂಗ ಮತ್ತು ಕಿರುತೆರೆಯಲ್ಲಿ ಕೃಷ್ಣ ನಾಡಿಗ್ ಅವರು ಲೇಖಕ, ವ್ಯವಸ್ಥಪಕ, ನಟರಾಗಿ ತಮ್ಮ ಸೇವೆ ಸಲ್ಲಿಸಿದ್ದಾರೆ.

* ಇಲ್ಲಿಯವರೆಗೆ ಇವರು ಒಟ್ಟು 60 ಕ್ಕೂ ಹೆಚ್ಚು ಚಿತ್ರಗಳಿಗೆ ಸಂಭಾಷಣೆ, ಚಿತ್ರಕತೆ ಬರೆದಿದ್ದಾರೆ.
* ಕನ್ನಡ ಚಿತ್ರರಂಗದಲ್ಲಿ 50 ವರ್ಷಗಳಷ್ಟು ಸೇವೆ ಸಲ್ಲಿಸಿದ್ದಾರೆ.

### ಕೇರಳದಲ್ಲಿ ಜಲಟ್ಯಾಕ್ಸಿ ಸೇವೆಆರಂಭ



ಕೇರಳ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಜಲ ಟ್ಯಾಕ್ಸಿ ಸೇವೆ ಆರಂಭಿಸಲಾಗಿದ್ದು, ಅಲಪ್ಪುಳದ ಹಿನ್ನೀರಿನಲ್ಲಿ ಈ ಸೇವೆ ಆರಂಭವಾಗಿದೆ. ಕೇರಳ ರಾಜ್ಯ ಜಲ ಸಾರಿಗೆ ಇಲಾಖೆಯು (SWTD) ಆರಂಭಿಸಲು ಉದ್ದೇಶಿಸಿರುವ ನಾಲ್ಕು ದೋಣಿ ಸಂಚಾರ ಸರಣಿಯಲ್ಲಿ ಇದು ಮೊದಲನೆಯದಾಗಿದೆ. ಕೇರಳದಲ್ಲಿ ಅಲಪ್ಪುಳ ಹಿನ್ನೀರು ಪ್ರಮುಖ ಪ್ರವಾಸಿ ಸ್ಥಳವಾಗಿದ್ದು, ಕೇರಳದ ಈ ಜಲ ಟ್ಯಾಕ್ಸಿ ಸೇವೆಯು ರಾಜ್ಯದ ಪ್ರವಾಸೋದ್ಯಮಕ್ಕೆ ಆರ್ಥಿಕ ಬಲ ನೀಡಲಿದೆ.

### ಗುರುನಾನಕ್ ಜಯಂತಿ ಭಾರತೀಯ ಸಿಖ್ಖರನ್ನು ಆಹ್ವಾನಿಸಿದ ಪಾಕಿಸ್ತಾನ



ಇಸ್ಲಾಮಾಬಾದ್ : ಗುರುನಾನಕ್ ಅವರ 551ನೇ ಜಯಂತಿಯಲ್ಲಿ ಪಾಲ್ಗೊಳ್ಳಲು ಭಾರತೀಯ ಸಿಖ್ಖರಿಗೆ ಪಾಲ್ಗೊಳ್ಳಲು ಪಾಕಿಸ್ತಾನ ಆಹ್ವಾನ ನೀಡಿದೆ. ಪ್ರತಿ ವರ್ಷ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಗುರುನಾನಕ್ ಅವರ ಜನ್ಮಸ್ಥಳವಾದ ಗುರುದ್ವಾರ ನಂಕನ ಸಾಹಿಬ್ ನಲ್ಲಿ ಭಾರತ ಮತ್ತು ವಿಶ್ವದ ವಿವಿಧ ಭಾಗಗಳಲ್ಲಿ ನೆಲೆಸಿರುವ ಸಿಖ್ಖರು ಗುರುನಾನಕ್ ರ ಜಯಂತಿ ಉತ್ಸಹವದಲ್ಲಿ ಪಾಲ್ಗೊಳ್ಳುತ್ತಾರೆ. ಈ ವರ್ಷ ನವೆಂಬರ್ 27 ರಂದು ನಂಕನ ಸಾಹಿಬ್‌ನಲ್ಲಿ ಆರಂಭವಾಗುವ ಗುರು ನಾನಕರ ಜಯಂತಿಯಲ್ಲಿ ಪಾಲ್ಗೊಳ್ಳಲು ಭಾರತೀಯ ಸಿಖ್ ಯಾತ್ರಿಕರಿಗೆ ಪಾಕಿಸ್ತಾನ ಐದು ದಿನಗಳ ವೀಸಾ ನೀಡಲು ಮುಂದಾಗಿರುವದಾಗಿ ತಿಳಿದುಬಂದಿ

## ಚೀನಾ ಒತ್ತಡಕ್ಕೆ ಮಣಿದು ಟಿಕ್ ಟಾಕ್ ಮೇಲಿನ ನಿಷೇಧ ತೆರವುಗೊಳಿಸಿದ ಪಾಕಿಸ್ತಾನ




ಭಾರತ, ಅಮೇರಿಕಾ ಸೇರಿ ಹಲವು ರಾಷ್ಟ್ರಗಳು ವಿವಿಧ ಕಾರಣ ನೀಡಿ ನಿಷೇಧಿಸಿರುವ ಚೀನಿ ಮೂಲಕ ಟಿಕ್ ಟಾಕ್ ಮೊಬೈಲ್ ಅಯಪ್ ನ್ನು ಪಾಕಿಸ್ತಾವು ಕೂಡ ಅಶ್ಲೀಲ ಎಂಬ ಆರೋಪದ ಹಿನ್ನಲೆಯಲ್ಲಿ ತನ್ನ ರಾಷ್ಟ್ರದಲ್ಲಿ ನಿಷೇಧಕ್ಕೊಳಪಡಿಸಿತ್ತು. ಆದರೆ ಇದೀಗ ಚೀನಾದ ಒತ್ತಡಕ್ಕೆ ಮಣಿದು ಪಾಕಿಸ್ತಾವು ನಿಷೇದಿಸಿದ ಕೇವಲ 10 ದಿನಗಳ ನಂತರ ಟಿಕ್ ಟಾಕ್ ಮೇಲೆ ವಿಧಿಸಿದ್ದ ನಿಷೇಧವನ್ನು ತೆರವುಗೊಳಿಸಿದೆ.

## ಮಲಬಾರ್ ನೌಕಾಪಡೆ ಸಮರಾಭ್ಯಾಸಕ್ಕೆ ಆಸ್ಟ್ರೇಲಿಯ ಸೇರ್ಪಡೆ: ಭಾರತದಿಂದ ಘೋಷಣೆ




ನವದೆಹಲಿ : ಅರಬ್ಬಿ ಸಮುದ್ರ ಹಾಗೂ ಬಂಗಾಳಕೊಲ್ಲಿಯ ವ್ಯಾಪ್ತಿಯಲ್ಲಿ ಭಾರತ, ಅಮೆರಿಕ, ಜಪಾನ್ ದೇಶಗಳು ಜಂಟಿ ನೌಕಾ ಸಮರಾಭ್ಯಾಸ ನಡೆಸುತ್ತಾ ಬಂದಿದ್ದವು ಇದೀಗ ಇದೆ ನವೆಂಬರ್‌ನಲ್ಲಿ ನಡೆಯಲಿರುವ ಮಲಬಾರ್ ನೌಕಾಪಡೆ ಸಮರಾಭ್ಯಾಸದಲ್ಲಿ ಸಮರಾಭ್ಯಾಸಕ್ಕೆ ಆಸ್ಟ್ರೇಲಿಯಾ ಕೂಡ ಸೇರಿಕೊಳ್ಳುವುದಾಗಿ ಭಾರತವು ಅಧಿಕೃತವಾಗಿ ಘೋಷಿಸಿದೆ. ಈ ಮೂಲಕ ಭಾರತ, ಅಮೆರಿಕ, ಜಪಾನ್, ಆಸ್ಟ್ರೇಲಿಯ ರಾಷ್ಟ್ರಗಳ ಚತುರ್‌ರಾಷ್ಟ್ರ ಮೈತ್ರಿಕೂಟದ ಬೃಹತ ಸಮರಾಭ್ಯಾಸ ನಡೆಯಲಿದೆ.

* 2007 ರಲ್ಲಿ ಆಸ್ಟೇಲಿಯಾವು ಈ ಸಮರಾಭ್ಯಾಸದಲ್ಲಿ ಪಾಲ್ಗೊವುದಾಗಿ ತಿಳಿಸಿದಾಗ ಚೀನಾವು ಇದನ್ನು ವಿರೋಧಿಸಿದ ಹಿನ್ನಲೆ ಆಸ್ಟ್ರೇಲಿಯ ಹಿಂದೆ ಸರಿದಿತ್ತು. ಆದರೆ ಈಗ ಆಸ್ಟ್ರೇಲಿಯ ಈ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳಲಿದ್ದು, ಇದರಿಂದ ಚೀನಾಕ್ಕೆ ತೀವ್ರ ಮುಖಬಂಗವಾಗಿದೆ.
* 1992ರಲ್ಲಿ ಮೊದಲ ಬಾರಿಗೆ ಮಲಬಾರ್ ನೌಕಾಪಡೆ ಸಮರಾಭ್ಯಾಸ ಆರಂಭಗೊಂಡಿತು. ಆರಂಭದಲ್ಲಿ ಅಮೆರಿಕ ಹಾಗೂ ಭಾರತ ಮಾತ್ರ ಈ ಸಮರಾಭ್ಯಾಸ ನಡೆಸುತ್ತಿದ್ದವು, 2015ರಲ್ಲಿ ಈ ನೌಕಾಪಡೆ ಕವಾಯತಿಗೆ ಜಪಾನ್ ಸೇರ್ಪಡೆಗೊಂಡಿತು. ಇದೀಗ ಆಸ್ಟ್ರೇಲಿಯಾ ಕೂಡ ಸೇರಿಕೊಳ್ಳಲಿದೆ.

# 21-10-2020

## ಚಂದ್ರನ ಅಂಗಳದಲ್ಲಿ 4ಜಿ ಜಾಲ ಸ್ಥಾಪನೆಗೆ ನಾಸಾ ನಿರ್ಧಾರ




ನ್ಯೂಯಾರ್ಕ್: ಭೂಗ್ರಹದ ಉಪಗ್ರಹವಾದ ಚಂದಿರನ ಮೇಲೆ 4ಜಿ ಇಂಟರ್‌ನೆಟ್ ಜಾಲ ಸ್ಥಾಪಿಸಲು ಅಮೆರಿಕದ ಬಾಹ್ಯಾಕಾಶ ಸಂಸ್ಥೆ NASA ಸಿದ್ಧತೆ ನಡೆಸಿದೆ. ಇನ್ನು ನಾಸಾದ ಈ ಕೆಲಸವನ್ನು ನಿರ್ವಹಿಸಲು ಟೆಲಿಕಾಂ ಆಗ್ರಾ ಸಂಸ್ಥೆಯಾದ ನೋಕಿಯಾ ಸೇರಿ ಹಲವು ಸಂಸ್ಥೆಗಳು ಗುತ್ತಿಗೆ ಪಡೆದಿವೆ. ಈ ಯೋಜನೆಯ ಮೂಲಕ 4ಜಿ ವ್ಯವಸ್ಥೆ ಚಂದ್ರನ ಮೇಲ್ಮೈ ಮೇಲೆ ಅತಿ ದೂರದ, ಅತಿ ವೇಗದ ಹಾಗೂ ದಕ್ಷ ಸಂವಹನಕ್ಕೆ ನೆರವಾಗಲಿದೆ ಎಂದು ನಾಸಾ ಪ್ರಕಟಣೆಯಲ್ಲಿ ತಿಳಿಸಿದೆ. ಈ ಯೋಜನೆಯು ಭವಿಷ್ಯದ ದಿನಗಳಲ್ಲಿ ಚಂದ್ರನ ಮೇಲೆ ಮಾನವ ವಲಸೆ ಹೋಗುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ನೆರವಾಗಲಿದೆ ಎಂದು ನಾಸಾ ಆಡಳಿತಾಧಿಕಾರಿ ಜಿಮ್ ಬ್ರೈಡೆನ್‌ಸ್ಟೈನ್ ತಿಳಿಸಿದ್ದಾರೆ.

## ಜಿಯೋ ಹಾಗೂ ಕ್ವಾಲ್ ಕಾಮ್ ಸಂಸ್ಥೆಗಳಿಂದ ಯಶಸ್ವೀ 5G ಪರೀಕ್ಷೆ




ರಿಲಯನ್ಸ್ ಇಂಡಸ್ಟ್ರೀಸ್ ಒಡೆತನದ ಜಿಯೋ ಸಂಸ್ಥೆ ಹಾಗೂ ಕ್ವಾಲ್ ಕಾಮ್ ಸಂಸ್ಥೆ ಜಂಟಿಯಾಗಿ ಭಾರತದಲ್ಲಿ ಐದನೇ ತಲೆಮಾರಿನ (5th Generation) ರೇಡಿಯೋ ಆಕ್ಸೆಸ್

ನೆಟ್ ವರ್ಕ್ (RAN) ಸ್ಥಳೀಯವಾಗಿ ಅಭಿವೃದ್ಧಿ ಮಾಡಿದಲ್ಲದೆ, ಯಶಸ್ವಿಯಾಗಿ ಪರೀಕ್ಷೆಗೊಳಪಡಿಸಿದೆ. ಈ ಪರೀಕ್ಷೆಯಲ್ಲಿ ಪ್ರತಿ ಸೆಕೆಂಡ್ ಗೆ ಒಂದು ಗಿಗಾಬೈಟ್ ಗಿಂತ (1GBps) ಹೆಚ್ಚು ವೇಗದಲ್ಲಿ ಡೇಟಾ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಲಾಗಿದೆ.

### ಭಾರತ್‌ಮಾಲಾ : ರಾಜಸ್ಥಾನದಲ್ಲಿ 60 ಕಿ.ಮೀ. ಉದ್ದದ ಗ್ರೀನ್‌ಫೀಲ್ಡ್ ಹೆದ್ದಾರಿ ನಿರ್ಮಾಣ




ರಾಷ್ಟ್ರ ರಾಜಧಾನಿ ದೆಹಲಿ ಹಾಗೂ ವಾಣಿಜ್ಯ ನಗರಿ ಮುಂಬೈ ನಡುವಿನ ರಸ್ತೆ ಸಂಪರ್ಕವನ್ನು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಯೋಜನೆಯಾದ ಭಾರತ್‌ಮಾಲಾ ಅಡಿಯಲ್ಲಿ ರಾಜಸ್ಥಾನದಲ್ಲಿ 60 ಕಿ.ಮೀ. ಉದ್ದದ ಗ್ರೀನ್‌ಫೀಲ್ಡ್ ಹೆದ್ದಾರಿ ನಿರ್ಮಾಣ ಮಾಡಲು ಯೋಜಿಸಲಾಗಿದೆ.

* ಈ ಯೋಜನೆಯಡಿ ನಿರ್ಮಿಸಲಾಗುವ ಹೆದ್ದಾರಿಯು ರಾಜಸ್ಥಾನದ ಮುಕುಂದ್ರ ಪರ್ವತ ಹುಲಿ ಸಂರಕ್ಷಿತಾರಣ್ಯದಲ್ಲಿ ಹಾದು ಹೋಗಲಿದ್ದು, ಇಲ್ಲಿ ಹೆದ್ದಾರಿ ಸುರಂಗ ನಿರ್ಮಿಸಲಾಗುವದು.
* ರಾಜಸ್ಥಾನದಲ್ಲಿ ಭೆಂಡಾ ಹೀರಾ ಹಳ್ಳಿಯಿಂದ ಮೂಂದಿಯಾ ಹಳ್ಳಿಯವರೆಗೆ ಎಂಟು ಪಥಗಳಲ್ಲಿ ಈ ಹೆದ್ದಾರಿ ನಿರ್ಮಿಸಲು ಯೋಜಿಸಲಾಗಿದೆ.
* ಕೇಂದ್ರ ಪರಿಸರ ಇಲಾಖೆಯ ಮೂಲಗಳ ಪ್ರಕಾರ ಗುರುಗ್ರಾಮ, ಭರತ್‌ಪುರ, ಕೋಟಾ ಸೇರಿ ಹಲವು ನಗರಕ್ಕೆ ಈ ಹೆದ್ದಾರಿಯಿಂದ ಸಂಪರ್ಕ ದೊರೆಯಲಿದೆ.

## 22-10-2020

### ವಿದೇಶಕ್ಕೆ ವಲಸೆ: ಎರಡನೇ ಸ್ಥಾನ ಪಡೆದ ಭಾರತ



ನವದೆಹಲಿ: ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ (OECD) ಇತ್ತೀಚಿಗೆ 2018 ರಲ್ಲಿ ವಲಸೆ ಹೋಗಿ ವಿವಿಧ ರಾಷ್ಟ್ರಗಳ ಪೌರತ್ವ ಪಡೆದಿರುವವರ ಕುರಿತು ವರದಿಯನ್ನು ಪ್ರಕಟಿಸಿದ್ದು, ಈ ವರದಿಯ ಪ್ರಕಾರ ಚೀನಾ ರಾಷ್ಟ್ರದಿಂದ ಅತಿ ಹೆಚ್ಚು ಹೆಚ್ಚು ಜನ ವಲಸೆ ಹೋಗಿದ್ದು, ಭಾರತವು ಎರಡನೇ ಸ್ಥಾನದಲ್ಲಿದೆ. ಇನ್ನು ಭಾರತದಿಂದ ವಲಸೆ ಹೋಗಿರುವವರ ಪ್ರಮಾಣ ಶೇಕಡ 10 ಹೆಚ್ಚಳವಾಗಿ 3.30 ಲಕ್ಷಕ್ಕೆ ಏರಿಕೆಯಾಗಿದ್ದು, ಇದು ಒಟ್ಟು ವಲಸಿಗರ ಪೈಕಿ ಶೇಕಡ 5 ರಷ್ಟಿದೆ ಎಂದು OECD ವರದಿಯಲ್ಲಿ ತಿಳಿಸಲಾಗಿದೆ. ಇನ್ನು ಅತಿ ಹೆಚ್ಚು ವಲಸಿಗರು ಹೋಗಿರುವ ರಾಷ್ಟ್ರಗಳ ಪೈಕಿ ಅಮೆರಿಕ, ಕೆನಡಾ, ಇಟಲಿ ಮತ್ತು ಬ್ರಿಟನ್ ಕ್ರಮವಾಗಿ ಅಗ್ರಸ್ಥಾನದಲ್ಲಿವೆ. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ(OECD) : 1960ರ ಡಿಸೆಂಬರ್ 14ರಂದು ಆರಂಭಿಸಲಾದ ಈ ಸಂಸ್ಥೆಯು ಆರಂಭದಲ್ಲಿ ಅಮೆರಿಕ ಆಸ್ಟ್ರೇಲಿಯಾ, ಬೆಲ್ಜಿಯಂ ಸೇರಿ 20 ರಾಷ್ಟ್ರಗಳ ಪರಸ್ಪರ ಆರ್ಥಿಕ ಸಹಕಾರಕ್ಕಾಗಿ ಕಾರ್ಯಾರಂಭಮಾಡಿತು. ನಂತರದ ದಿನಗಳಲ್ಲಿ ಹಂತ ಹಂತವಾಗಿ ಇನ್ನು 17 ದೇಶಗಳು ಈ ಗುಂಪಿಗೆ ಸೇರ್ಪಡೆಗೊಂಡಿವೆ. ಪ್ರಸ್ತುತ ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯಾ ಒಟ್ಟು ಸದಸ್ಯ ಬಲವು 37 ಆಗಿದೆ.

### ಶೇ.13 ರಷ್ಟು ಏರಿಕೆ ಕಂಡ ವಿದೇಶಿ ನೇರ ಬಂಡವಾಳಹೂಡಿಕೆ




ನವದೆಹಲಿ : 2020 ನೇ ಸಾಲಿನಲ್ಲಿ ಇದುವರೆಗೆ ವಿದೇಶಿ ನೇರ ಬಂಡವಾಳ ಹೂಡಿಕೆ ಶೇ.13 ರಷ್ಟು ಏರಿಕೆ ಕಂಡು, ಅದು 35.73 ಶತಕೋಟಿ ಡಾಲರ್ ಗೆ ತಲುಪಿರುವುದಾಗಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ.

### ಭಾರತ ಮತ್ತು ಅಮೆರಿಕ ನಡುವೆ ಶೀಘ್ರ2+2ಮಹತ್ವದಚರ್ಚೆ ಸಾಧ್ಯತೆ



ನವದೆಹಲಿ: ಶೀಘ್ರದಲ್ಲೇ ಭಾರತ ಮತ್ತು ಅಮೆರಿಕ ರಾಷ್ಟ್ರಗಳ ನಡುವೆ ಎರಡನೇ 2+2 ಸಚಿವರುಗಳ ಮಹತ್ವದ ಮಾತುಕತೆ ನಡೆಯುವ ಸಾಧ್ಯತೆ ಇದ್ದು, ಈ ಸಭೆಯಲ್ಲಿ ಭದ್ರತೆ, ರಕ್ಷಣೆ, ವಿದೇಶಾಂಗ ನೀತಿ ಸೇರಿದಂತೆ ಕೆಲವು ಪ್ರಮುಖ ವಿಷಯಗಳ ಕೆಲ ಒಪ್ಪಂದಗಳಿಗೆ ಉಭಯ ರಾಷ್ಟ್ರಗಳು ಸಹಿ ಹಾಕುವ ಸಾಧ್ಯತೆ ಇದೆ. ಅಮೆರಿಕ ರಕ್ಷಣಾ ಸಚಿವ ಮಾರ್ಕ್ ಎಕ್ಸ್‌ಪರ್ವ್ ಹಾಗೂ ವಿದೇಶಾಂಗ ಸಚಿವ ಮೈಕ್ ಪುಂಪಿಯೊ ಶೀಘ್ರದಲ್ಲಿ ಭಾರತಕ್ಕೆ ಭೇಟಿ ನೀಡಿ, ರಾಜನಾಥ್ ಸಿಂಗ್ ಮತ್ತು ಎಸ್.ಜೈಶಂಕರ್ ಅವರೊಂದಿಗೆ 2+2 ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇಂಡೋ ಫೆಸಿಫಿಕ್ ಪ್ರಾಂತ್ಯದಲ್ಲಿ ಚೀನಾದ ಪ್ರಾಭಲ್ಯ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಉಪಟಳ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅಮೆರಿಕ ಭಾರತ ನಡುವಣ ಚರ್ಚೆ ತೀವ್ರ ಮಹತ್ವ ಪಡೆದುಕೊಂಡಿದೆ.

### ಚುನಾವಣೆ ವೆಚ್ಚದ ಮಿತಿ ಶೇ.10 ಹೆಚ್ಚಳ: ಚುನವಣಾ ಆಯೋಗ




ಹೊಸದಿಲ್ಲಿ: ವಿಧಾನಸಭೆ ಮತ್ತು ಲೋಕಸಭಾ ಕ್ಷೇತ್ರಗಳಿಗೆ ನಡೆಯುವ ಚುನಾವಣೆಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳ ಚುನಾವಣಾ ವೆಚ್ಚವನ್ನು ಶೇ.10ರಷ್ಟು ಹೆಚ್ಚಿಸಿ ಕೇಂದ್ರ ಚುನಾವಣಾ ಆಯೋಗವು ಆದೇಶ ಹೊರಡಿಸಿದ್ದು, ಈ ನಿಯಮವು ಶೀಘ್ರದಲ್ಲೇ ರಾಜ್ಯದಲ್ಲಿ ನಡೆಯಲಿರುವ ವಿಧಾನಸಭಾ ಉಪಚುನಾವಣೆಗಳಿಗೂ ಅನ್ವಯಿಸಲಿದೆ. ಚುನಾವಣಾ ಪ್ರಚಾರದಲ್ಲಿ ಕೊರೊನಾ ಸೋಂಕಿನ ಕುರಿತು ಜಾಗೃತಿಗಾಗಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಬೇಕಾಗಿರುವದರಿಂದ ಪ್ರಚಾರದ ವೆಚ್ಚ ಹೆಚ್ಚಾಗುವ ಸಾಧ್ಯತೆ ಇರುವದರಿಂದ ವೆಚ್ಚದ ಮಿತಿಯನ್ನು ಶೇ.10ರಷ್ಟು ಹೆಚ್ಚಿಸಲು ಚುನಾವಣಾ ಆಯೋಗವು ಶಿಫಾರಸು ಮಾಡಿದೆ.

ನೂತನ ಶಿಫಾರಸ್ಸಿನಂತೆ

* ಲೋಕಸಭಾ ಚುನಾವಣೆಗೆ ಗರಿಷ್ಠ 77 ಲಕ್ಷ ರೂ. (ಮೊದಲು 70ಲಕ್ಷ ರೂ.),
* ವಿಧಾನಸಭೆ ಚುನಾವಣೆಗೆ ಗರಿಷ್ಠ 30.8 ಲಕ್ಷ ರೂ.(28 ಲಕ್ಷ ರೂ.) ಗಳನ್ನೂ ಅಭ್ಯರ್ಥಿಗಳಿಗೆ ಖರ್ಚು ಮಾಡಲು ಅವಕಾಶ ನೀಡಲಾಗಿದೆ.

### FATF: ಬೂದು ಪಟ್ಟಿಯಲ್ಲಿ ಉಳಿಯಲಿರುವಪಾಕಿಸ್ತಾನ




ಇಸ್ಲಾಮಾಬಾದ್: 'ಗ್ಲೋಬಲ್ ವಾಚ್ ಡಾಗ್' ಇತ್ತೀಚಿಗೆ ಸಿದ್ಧಪಡಿಸಿದ 'ಹಣಕಾಸು ಕ್ರಿಯಾ ಯೋಜನೆ'ಯ (FATF) 27 ಅಂಶಗಳ ಪೈಕಿ ಪಾಕಿಸ್ತಾನವು 06 ಅಂಶಗಳನ್ನು ಪಾಲಿಸುವಲ್ಲಿ ವಿಫಳಗಿರುವ ಹಿನ್ನಲೆ ಈ ಬಾರಿಯೂ ಹಣಕಾಸು ಕ್ರಿಯಾ ಪಡೆಯ ಬೂದು ಪಟ್ಟಿಯಲ್ಲಿ ಮುಂದುವರೆಯಲಿದೆ.

## 23-10-2020

### ತಮಿಳುನಾಡು ಸರ್ಕಾರ ದಿಂದ ಸ್ಮಾರ್ಟ್ ಬ್ಲ್ಯಾಕ್ ಬೋರ್ಡ್ ಯೋಜನೆ ಜಾರಿ




ತಮಿಳುನಾಡು ರಾಜ್ಯದಲ್ಲಿನ 80,000 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಲ್ಲಿ ಉತ್ತಮ ಬೋಧನಾ ವಾತಾವರಣ ನಿರ್ಮಿಸಲು "ಸ್ಮಾರ್ಟ್ ಬ್ಲ್ಯಾಕ್ ಬೋರ್ಡ್ ಯೋಜನೆ"ಯನ್ನು ತಮಿಳುನಾಡು ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿದೆ. ತಮಿಳುನಾಡು ರಾಜ್ಯ ಸರ್ಕಾರವು ಸ್ಮಾರ್ಟ್ ಬ್ಲ್ಯಾಕ್ ಬೋರ್ಡ್ ಯೋಜನೆಯುಡಿ ಡಿಜಿಟಲ್ ತರಗತಿ ಕೋಣೆಗಳಲ್ಲಿ ಪೆನ್ ಡ್ರೈವ್‌ಗಳನ್ನು ಬಳಸಿಕೊಂಡು ಕಂಪ್ಯೂಟರ್ ಪರದೆಗಳ ಮೂಲಕ ಬೋದಿಸಲಾಗುವದು. ಈ ಮೂಲಕ 2020 21ರ ಪಠ್ಯಕ್ರಮವನ್ನು ಶೇಕಡಾ 40 ರಷ್ಟು ಕಡಿಮೆ ಮಾಡಲು ತಮಿಳುನಾಡು ರಾಜ್ಯ ಸರ್ಕಾರವು ನಿರ್ಧರಿಸಿದೆ. * ರಾಜಸ್ಥಾನ ರಾಜ್ಯದಲ್ಲಿ ಕಲಿಕೆ ನಿರ್ವಹಣೆಗಾಗಿ ಸಾಮಾಜಿಕ ಮಾಧ್ಯಮ ಇಂಟರ್ಫೇಸ್, SMILE ಅನ್ನು ಪ್ರಾರಂಭಿಸಲಾಯಿತು.

* ಜಮ್ಮು ರಾಜ್ಯದಲ್ಲಿ ಪ್ರಾಜೆಕ್ಟ್ ಹೋಮ್ ತರಗತಿಗಳನ್ನು ಪ್ರಾರಂಭಿಸಲಾಯಿತು
* ಛತ್ತೀಸ್ಗಡ್ ರಾಜ್ಯದಲ್ಲಿ "ಪಧೈ ತುನ್ವಾರ್ ದುವಾರ್" ಎಂಬ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳ ಮನೆ

ಬಾಗಿಲಿನಲ್ಲಿ ಶಿಕ್ಷಣವನ್ನು ಪ್ರಾರಂಭಿಸಲಾಯಿತು.
* ಬಿಹಾರ ರಾಜ್ಯದಲ್ಲಿ "ಉನ್ನಾಯನ್" ಎಂಬ ಅಭಿಯಾನ ಪ್ರಾರಂಭಿಸಲಾಯಿತು.
* ಕೇರಳ ಸರ್ಕಾರ ರಾಜ್ಯದಲ್ಲಿ "ಕೈಟ್ ವಿಕ್ಟರ್ಸ್" ಎಂಬ ಟಿವಿ ಚಾನೆಲ್ ಮೂಲಕ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ.
* ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಸಚಿವಾಲಯವು ಕೋವಿಡ್ 19 ಕಾಲದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣಕೊಡುವ ಸಲುವಾಗಿ "ವಿದ್ಯಾಗಮ" ಎಂಬ ಕಾರ್ಯಕ್ರಮವನ್ನು ಆರಂಭಿಸಲಾಗಿದೆ

## ಭಾರತೀಯ ಮೊದಲ ಮಹಿಳಾ ಪೈಲಟ್‌ಗಳ ಬ್ಯಾಚ್ ಅನ್ನು ನೌಕಾಪಡೆ ಕಾರ್ಯಾಚರಣೆಗೆ ಸಿದ್ಧ



ಭಾರತೀಯ ನೌಕಾಪಡೆಯ ದಕ್ಷಿಣ ನೌಕಾ ಕಮಾಂಡ್ ಕೊಚ್ಚಿಯಲ್ಲಿ ಅಕ್ಟೋಬರ್ 22, 2020 ರಂದು, ಡಾರ್ನಿಯರ್ ವಿಮಾನದಲ್ಲಿ ಮಹಿಳಾ ಪೈಲಟ್‌ಗಳ ಮೊದಲ ಬ್ಯಾಚ್ ತನ್ನ ಕಾರ್ಯಾಚರಣೆಗೆ ಸಿದ್ಧಗೊಂಡಿದೆ. ಲೆಫ್ಟಿನೆಂಟ್ ದಿವ್ಯಾ ಶರ್ಮಾ, ಲೆಫ್ಟಿನೆಂಟ್ ಶಿವಾಂಗಿ ಮತ್ತು ಲೆಫ್ಟಿನೆಂಟ್ ಶುಭಂಗಿ ಸ್ವರೂಪ್ ಈ ಮೂವರು ಮಹಿಳಾ ಪೈಲಟ್‌ಗಳು ಭಾರತೀಯ ನೌಕಾಪಡೆಯೊಂದಿಗೆ DOFT ಕೋರ್ಸ್‌ಗೆ ತರಬೇತಿ ಪಡೆದಿರುತ್ತಾರೆ. ಪ್ರಸ್ತುತ ಭಾರತೀಯ ಮಿಲಿಟರಿಯಲ್ಲಿ 3,5000 ಕ್ಕೂ ಹೆಚ್ಚು ಮಹಿಳೆಯರು ಸೇವೆ ಸಲ್ಲಿಸುತ್ತಿದ್ದು, 2015 ರವರೆಗೆ ಯುದ್ಧ ಪಾತ್ರದಲ್ಲಿ ನಿಯೋಜಿಸದಂತೆ ನಿರ್ಬಂಧಿಸಲಾಗಿತ್ತು. ಭಾರತೀಯ ಇತಿಹಾಸದಲ್ಲಿ ಮೊದಲ ಬಾರಿಗೆ 2015 ರಲ್ಲಿ ಮಹಿಳೆಯರನ್ನು ವಾಯುಪಡೆಗೆ ಸೇರ್ಪಡೆಮಾಡಲಾಯಿತು.
* 1992 ರಲ್ಲಿ ಮೊದಲ ಬಾರಿಗೆ ಭಾರತೀಯ ಮಹಿಳೆಯರನ್ನು ಭಾರತೀಯ ಸೇನೆಯಲ್ಲಿ ನಿಯೋಜಿಸಲಾಯಿತು.
* ಪ್ರಾರಂಭದ ದಿನಗಳಲ್ಲಿ ಅವರಿಗೆ 6 ವರ್ಷಗಳ ಕಾಲ ಮಾತ್ರ ಸೇವೆ ಸಲ್ಲಿಸಲು ಅವಕಾಶವಿತ್ತು, ಇದೀಗ ಮಹಿಳಾ ಸೈನಿಕರು 14 ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಬಹುದು.
* ಭಾರತೀಯ ಸೇನೆಯಲ್ಲಿ ಮೊತ್ತ ಮೊದಲು ಮಹಿಳೆಯರಿಗೆ ದಾದಿಯರಾಗಿ ಸೇವೆ ಸಲ್ಲಿಸಲು 1888ರಲ್ಲಿ ಅವಕಾಶ ನೀಡಲಾಗಿತ್ತು.

## ಕೇಂದ್ರ ಸರ್ಕಾರದಿಂದ "ಇ ಧಾರ್ತಿ ಜಿಯೋ ಪೋರ್ಟಲ್" ಸೇವೆ ಆರಂಭ




ಕೇಂದ್ರ ಸಚಿವ ಶ್ರೀ ಹರ್ದೀಪ್ ಸಿಂಗ್ ಪುರಿ ಅವರು ಅಕ್ಟೋಬರ್ 21, 2020 ರಂದು "ಇ ಧಾರ್ತಿ ಜಿಯೋ ಪೋರ್ಟಲ್" ಗೆ ಚಾಲನೆ ನೀಡಿದರು. ಈ ನೂತನ ಪೋರ್ಟಲ್ ಮೂಲಕ ಭೌಗೋಳಿಕ ಮಾಹಿತಿ ವ್ಯವಸ್ಥೆ, ನಕ್ಷೆ ಮತ್ತು ಗುತ್ತಿಗೆ ಯೋಜನೆಗಳ ಮಾಹಿತಿಯನ್ನು ಪಡೆಯಬಹುದಾಗಿದೆ.
* ಈ ಪೋರ್ಟಲ್ ಮೂಲಕ ಆಸ್ತಿ ಪ್ರಮಾಣಪತ್ರದ ವಿವರಗಳು ಮತ್ತು ಆಸ್ತಿಯ ಆನ್ಲೈನ್ ನಕ್ಷೆಯನ್ನು ಸುಲಭವಾಗಿ ಪಡೆಯಬಹುದಾಗಿದೆ.
* ಭೂ ಮತ್ತು ಅಭಿವೃದ್ಧಿ ಕಚೇರಿ 50000 ಕ್ಕೂ ಹೆಚ್ಚು ವಸತಿ, ವಾಣಿಜ್ಯ, ಕೈಗಾರಿಕಾ ಮತ್ತು ಸಾಂಸ್ಥಿಕ ಆಸ್ತಿಗಳೊಂದಿಗೆ ವ್ಯವಹರಿಸುತ್ತದೆ.

## ಥಾರ್ ಮರುಭೂಮಿ: 1,72,000 ವರ್ಷಗಳ ಹಿಂದೆ ಹರಿಯುತ್ತಿದ್ದ ನದಿ ಕುರುಹು ಪತ್ತೆ



ನವದೆಹಲಿ: ಇತ್ತೀಚಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಎಜುಕೇಶನ್ ಆಯಂಡ್ ರಿಸರ್ಚ್, ಚೆನ್ನೈನ ಅಣ್ಣಾ ವಿಶ್ವ ವಿದ್ಯಾಲಯ ಹಾಗೂ ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಇನ್‌ಸ್ಟಿಟ್ಯೂಟ್ ಫಾರ್ ದ ಸೈನ್ಸ್ ಆಫ್ ಹ್ಯೂಮನ್ ಹಿಸ್ಟರಿ (MPI SHH) ವಿಜ್ಞಾನಿಗಳು jantiyagi ನಡೆಸಿದ ಅಧ್ಯಯನದ ಪ್ರಕಾರ ರಾಜಸ್ಥಾನ ಥಾರ್ ಮರುಭೂಮಿಯಲ್ಲಿ ಸುಮಾರು 172000 ವರ್ಷಗಳ ಹಿಂದೆ ನದಿಯೊಂದು ಹರಿಯುತ್ತಿತ್ತು ಹಾಗೂ ಅದು ಜನರ ಜೀವನಾಡಿಯಾಗಿತ್ತು ಎಂದು ಕುರುಹುಗಳ ಪತ್ತೆಯಾಗಿರುವದಾಗಿ ತಿಳಿದು ಬಂದಿದೆ. ಬಿಕಾನೇರ್ ಸಮೀಪದ ನಲ್ ಎಂಬ ಗ್ರಾಮದಲ್ಲಿ 2014 ರಿಂದ 2019ರ ಅವಧಿಯಲ್ಲಿ ನಡೆಸಿದ

ಸಂಶೋದನೆಗಳಿಂದಾಗಿ ಈ ಅಂಶ ದೃಢಪಟ್ಟಿದೆ.

### ಈ ಬಾರಿ ಮೈಸೂರು ದಸರಾ ಜಂಬೂ ಸವಾರಿಯಲ್ಲಿ ಕೇವಲ 2 ಸ್ತಬ್ದ ಚಿತ್ರಗಳ ಮೆರವಣಿಗೆ



ಮೈಸೂರು : ವಿಶ್ವ ವಿಖ್ಯಾತ ಮೈಸೂರು ದಸರಾವು ಪ್ರತಿ ವರ್ಷ ವಿಶ್ವದ ಹಲವು ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು, ಆದರೆ ಈ ಬಾರಿ ಕೋರೋಣ ಭೀತಿಯಿಂದ ಸರಳವಾಗಿ ದಸರಾ ಆಚರಣೆ ಮಾಡಲು ರಾಜ್ಯ ಸರ್ಕಾರವು ಉದ್ದೇಶಿಸಿರುವ ಹಿನ್ನಲೆ ಜಂಬೂ ಸವಾರಿಯಲ್ಲಿ ಕೇವಲ 2 ಸ್ತಬ್ದ ಚಿತ್ರಗಳ ಮೆರವಣಿಗೆ ನಡೆಸಲು ಉದ್ದೇಶಿಸಲಾಗಿದೆ.

* ಮೈಸೂರು ಸಂಸ್ಕೃತಿ ಪ್ರತೀಕವಾಗಿರುವ ಆನೆ ಬಂಡಿ ಸ್ತಬ್ದ ಚಿತ್ರ ಹಾಗೂ ಕೊರೊನಾ ವಾರಿಯರ್ಸ್ ಗೆ ಅಭಿನಂದನೆ ಸಲ್ಲಿಸುವ ಸ್ತಬ್ದ ಚಿತ್ರಗಳ ಮೆರವಣಿಗೆ ಈ ವರ್ಷ ಜಂಬೂ ಸವಾರಿಯಲ್ಲಿ ನಡೆಯಲಿದೆ.
* ಪ್ರತಿ ವರ್ಷ ರಾಜ್ಯದ ಜಿಲ್ಲೆಗಳ ಸಂಸ್ಕೃತಿಯನ್ನು ಬಿಂಬಿಸುವ 30 ಕ್ಕೂ ಅಧಿಕ ಸ್ತಬ್ದ ಚಿತ್ರಗಳ ಮೆರವಣಿಗೆ ನಡೆಯುತ್ತಿತ್ತು.

### ಕೋರೋಣ ಕಾರಣ ವಿಶ್ವದ 175 ದಶಲಕ್ಷಕ್ಕೂ ಹೆಚ್ಚು ಜನರಿಗೆ ತೀವ್ರ ಬಡತನ : ವಿಶ್ವಸಂಸ್ಥೆ

ವಿಶ್ವಸಂಸ್ಥೆ: ಇಡೀ ಜಗತ್ತನ್ನೇ ಕಾಡಿದ ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ವಿಶ್ವದಾದ್ಯಂತ ಸುಮಾರು 175 ದಶಲಕ್ಷಕ್ಕೂ ಹೆಚ್ಚು ಜನರು ತೀವ್ರ ಬಡತನಕ್ಕೊಳಗಾಗಿದ್ದರೆಂದು, ಇತ್ತೀಚಿಗೆ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮೂರನೇ ಸಮಿತಿ (ಸಾಮಾಜಿಕ, ಮಾನವೀಯ ಮತ್ತು ಸಾಂಸ್ಕೃತಿಕ)ಯಲ್ಲಿ ಭಾಗವಹಿಸಿದ್ದ ವಿಶ್ವಸಂಸ್ಥೆಯ ತೀವ್ರ ಬಡತನ ಮತ್ತು ಮಾನವ ಹಕ್ಕುಗಳ ವಿಶೇಷ ವರದಿಗಾರ ಒಲಿವಿಯರ್ ಡಿ ಷುಟರ್ ಮಾಹಿತಿ ನೀಡಿದ್ದಾರೆ.

## 24-10-2020

### ಕೊರೋನಾ ಲಸಿಕೆ ಒಂದು ವಾರದಲ್ಲಿ ಜನರ ಬಳಕೆಗೆ ಸಿದ್ದ: ಡೊನಾಲ್ಡ್ ಟ್ರಂಪ್



ಅಮೆರಿಕ: ಜಾಗತಿಕವಾಗಿ ಕಾಡಿದ ಕೋರೋಣ ಸೋಂಕಿಗೆ ಲಸಿಕೆ ಸಿದ್ದವಾಗಿದ್ದು, ಇನ್ನು ಕೇವಲ ಒಂದು ವಾರದೊಳಗೆ ಜನರ ಬಳಕೆಗೆ ಸಿದ್ದವಾಗಲಿದೆ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚಿಗೆ ಘೋಷಿಸಿದ್ದಾರೆ. ಇದೆ ನವೆಂಬರ್ 03 ರಂದು ಅಮೇರಿಕಾದಲ್ಲಿ ಅಧ್ಯಕ್ಷೀಯ ಚುನಾವಣೆ ನಡೆಯಲಿದ್ದು, ಚುನಾವಣಾ ಪ್ರಚಾರದ ಭಾಷಣದಲ್ಲಿ ಟ್ರಂಪ್ ಈ ಘೋಷಣೆ ಹೊರಡಿಸಿದ್ದಾರೆ. ಕೋರೋಣ ಸೋಂಕು ಆರಂಭದಿಂದಲೂ ವಿಶ್ವ ಆರೋಗ್ಯ ಸಂಸ್ಥೆ ಸೇರಿ ಅನೇಕ ದೇಶಗಳಲ್ಲಿ ಕೊರೋನಾ ಲಸಿಕೆ ಪ್ರಯೋಗಗಳು ನಡೆಯುತ್ತಲಿದೆ. ಆದರೆ ಇದುವರೆಗೂ ಯಾವ ಲಸಿಕೆಯು ಪರಿಮಾಣಕಾರಿಯಾಗಿಲ್ಲ, ಇನ್ನು ರಷ್ಯಾ ದೇಶವು ಹಲವು ದಿನಗಳ ಹಿಂದೆಯೇ ಕೊರೋನಾಗೆ ಲಸಿಕೆಯನ್ನು ಕಂಡುಹಿಡಿದಿರುವುದಾಗಿ ಘೋಷಿಸಿತ್ತಾದರೂ, ನಂತರದ ದಿನಗಳಲ್ಲಿ ಅದು ಸಹ ವಿಫಲವಾಗಿದೆ ಎಂಬ ಸುದ್ದಿಗಳು ಹರಿದಾಡುತ್ತಿವೆ.

### ಬೆಂಗಳೂರಿನಲ್ಲಿ ಎಲೆಕ್ಟ್ರಿಕ್ ಬಸ್ಸುಗಳ ಪರೀಕ್ಷಾರ್ಥ ಸಂಚಾರ ಆರಂಭ



ಬೆಂಗಳೂರು: ರಾಜ್ಯರಾಜಧಾನಿ ಬೆಂಗಳೂರಿನಲ್ಲಿ ಸಾರ್ವಜನಿಕರ ಓಡಾಟಕ್ಕಾಗಿ "ಎಲೆಕ್ಟ್ರಿಕ್ ಬಸ್"ಗಳ ಸಂಚಾರಕ್ಕೆ ಸರ್ಕಾರ ಯೋಜನೆ ರೂಪಿಸಿದ್ದು, ಇದೀಗ 'ಒಲೆಕ್ಟ್ರಾ' ಎಂಬ ಸಂಸ್ಥೆಯು ದೇಶಿ ನಿರ್ಮಿತ ಎಲೆಕ್ಟ್ರಿಕ್ ಬಸ್‌ಗಳ ಪರೀಕ್ಷಾರ್ಥ ಸಂಚಾರವನ್ನು ಇತ್ತೀಚಿಗೆ ನಗರದಲ್ಲಿ ನಡೆಸಲಾಯಿತು.

* ಬ್ಯಾಟರಿ ತಂತ್ರಜ್ಞಾನದ ಹೊರತು ಪಡಿಸಿ ಬಸ್ಸುಗಳಲ್ಲಿ ಪೂರ್ಣ ಪ್ರಮಾಣದ ದೇಶಿಯ ತಂತ್ರಜ್ಞಾನ ಬಳಸಲಾಗಿದೆ.

* ಈ ಬಸ್ಸುಗಳು ಪ್ರತಿ ಕಿಲೋ ಮೀಟರ್ ಸಂಚಾರಕ್ಕೆ 1.2 ರಿಂದ 1.4 KWH ವಿದ್ಯುತ್ ಬಳಸಲಿವೆ. ಅಲ್ಲದೆ ಬ್ಯಾಟರಿ ಪೂರ್ಣ ಚಾರ್ಜ್ ಮಾಡಲು ಕೇವಲ 2ರಿಂದ 3ಗಂಟೆ ಅವಧಿ ಸಾಕು.

* ಒಮ್ಮೆ ಬ್ಯಾಟರಿಯನ್ನು ಪೂರ್ಣ ಚಾರ್ಜ್ ಮಾಡಿದರೆ 200 250 ಕಿಲೋ ಮೀಟರ್ ಸಂಚಾರ ಮಾಡಬಹುದಾಗಿದೆ.

* 'ಒಲೆಕ್ಟ್ರಾ' ಸಂತೆಯ ಈ ಬಸ್ಸುಗಳು ಈಗಾಗಲೇ ಹೈದರಾಬಾದ್,
ಪುಣೆ ಮುಂಬೈ, ಹಿಮಾಚಲ ಪ್ರದೇಶದ ಮನಾಲಿಯಲ್ಲಿ ಯಶಸ್ವಿಯೆಯಾಗಿ ಸಂಚಾರ ನಡೆಸಿವೆ. ಹಾಗೂ ಇನ್ನು ಹವಳು ಕಡೆಗಳಲ್ಲಿ ಈ ಬಸ್ ಸಂಚಾರಕ್ಕೆ ಅನುಮತಿ ದೊರೆತಿದೆ.


* ಕೇಂದ್ರ ಸರ್ಕಾರದ ಫೇಮ್ 2 ಯೋಜನೆಯಡಿಯಲ್ಲಿ ಪ್ರತಿ ಬಸ್ಸಿಗೆ ₹55 ಲಕ್ಷ ಮತ್ತು ರಾಜ್ಯ ಸರ್ಕಾರದಿಂದ ₹33 ಲಕ್ಷ ನೆರವು ಒಟ್ಟು ಸೇರಿ ಪ್ರತಿ ಬಸ್ಸಿಗೆ ₹88 ಲಕ್ಷ ತಗುಲಲಿದೆ.

## ಅತ್ಯಾಧುನಿಕ 'ನಾಗ್' ಕ್ಷಿಪಣಿಯ ಅಂತಿಮ ಹಂತದ ಪರೀಕ್ಷೆ ಯಶಸ್ವಿ



ನವದೆಹಲಿ : ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಯಿಂದ ನಿರ್ಮಿಸಲಾದ ಟ್ಯಾಂಕ್ ನಿರೋಧಕ ಕ್ಷಿಪಣಿ 'ನಾಗ್' (ಎಟಿಜಿಎಂ ನಾಗ್) ಅನ್ನು ರಾಜಸ್ಥಾನದ ಪೋಖರಣ್ ಸೇನಾ ರೇಂಜ್ ನಲ್ಲಿ ಅಂತಿಮ ಪರೀಕ್ಷೆಗೊಳಪಡಿಸಲಾಗಿದ್ದು, ಅಂತಿಮ ಪರೀಕ್ಷೆ ಯಶಸ್ವಿಯಾಗಿ ನೆರವೇರಿದೆ. 'ನಾಗ್' ಕ್ಷಿಪಣಿಯನ್ನು ಹಂತ ಹಂತವಾಗಿ ಒಟ್ಟು ವಿವಿಧ ಹತ್ತು ಪರೀಕ್ಷೆಗೊಳಪಡಿಸಲಾಗಿದ್ದು, ಈ ಎಲ್ಲಾ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿರುವದರಿಂದ 'ನಾಗ್' ಕ್ಷಿಪಣಿ ಸೇನೆಗೆ ಶೀಘ್ರವೇ ಸೇರ್ಪಡೆಯಾಗಲಿದೆ.

## ಪ್ರಧಾನಿ ಮೋದಿಯವರಿಂದ ಗುಜರಾತ್‌ನಲ್ಲಿ ಮೂರು ಯೋಜನೆಗಳಉದ್ಘಾಟನೆ



ಭಾರತದ ಪ್ರದಾನ ಮಂತ್ರಿಯಾದ ನರೇಂದ್ರ ಮೋದಿಯವರು ಇಂದು (ಅಕ್ಟೋಬರ್ 24) ಗುಜರಾತ್ ರಾಜ್ಯದಲ್ಲಿ ಒಟ್ಟು ಮೂರೂ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

* ವಿಶ್ವಸಂಸ್ಥೆಯ ಮೆಹ್ತಾ ಹೃದಯ ಸಂಶೋಧನಾ ಸಂಸ್ಥೆ,ಅಹಮದಾಬಾದ

*ಗಿರ್ನಾರ್‌ರೋಪ್‌ವೇಯೋಜನೆ

* ಕಿಸಾನ್ ಸರ್ವೋದಯ್ ಯೋಜನೆ ಅಹಮದಾಬಾದನಲ್ಲಿ ವಿಶ್ವಸಂಸ್ಥೆಯ ಮೆಹ್ತಾ ಹೃದಯ ಸಂಶೋಧನಾ ಸಂಸ್ಥೆಯನ್ನು ಒಟ್ಟು 850 ಹಾಸಿಗೆಗಳ ಸಾಮರ್ಥ್ಯಕ್ಕೆ ಏರಿಸಲಾಗಿದೆ. ಇಲ್ಲಿ ಮಕ್ಕಳ ಹೃದಯ ಚಿಕಿತ್ಸೆಗಾಗಿ ವಿಶೇಷ ಸೌಲಭ್ಯ ಕಲ್ಪಿಸಲಾಗಿದೆ. ಗುಜರಾತ್‌ನ ರಾಜ್ಯದ ಜುನಾಗಢ್ ಜಿಲ್ಲೆಯ ಪವಿತ್ರ ಯಾತ್ರಾಸ್ಥಳವಾದ ಮೌಂಟ್ ಗಿರ್ನಾರ್ ನಲ್ಲಿ 1983 ರಲ್ಲಿ ಆರಂಭಿಸಲಾದ ರೋಪ್ ವೇ ಯೋಜನೆಯುಏಷ್ಯಾದಉದ್ದದರೋಪ್ ವೇ ಆಗಿರುತ್ತದೆ. ಗುಜರಾತ್ ಪ್ರದೇಶದ ರೈತರಿಗೆ ಕೃಷಿಗೆ ವಿದ್ಯುತ್ ಒದಗಿಸುವ ಕಿಸಾನ್ ಸೂರ್ಯೋದಯ ಯೋಜನೆಯು ನೀರಾವರಿಗಾಗಿ ಹಗಲಿನ ಸಮಯದಲ್ಲಿ ವಿದ್ಯುತ್ ಸರಬರಾಜುನ್ನು ಒದಗಿಸಲಿದೆ. ಗುಜರಾತ್ ರಾಜ್ಯ ಸರ್ಕಾರವು ಈ ಯೋಜನೆಗಾಗಿ 3,500 ಕೋಟಿ ರೂಪಾಯಿ ವ್ಯಯಿಸಲಿದೆ.

## INS ಕವರತ್ತಿ ಭಾರತೀಯ ನೌಕಾಪಡೆಗೆ ಸೇರ್ಪಡೆ



ವಿಶಾಖಪಟ್ಟಣ: ಇತ್ತೀಚಿಗೆ INS ಕರವತ್ತಿ ಜಲಾಂತರಗಾಮಿ ನೌಕೆಯು ವಿಶಾಖಪಟ್ಟಣದ ನೌಕಾ ನೆಲೆಯಲ್ಲಿ ವಿದ್ಯುಕ್ತವಾಗಿ ಭಾರತೀಯ ನೌಕಾಪಡೆಗೆ ಸೇರ್ಪಡೆಗೊಂಡಿದೆ. ಕೋಲ್ಕತಾದ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಆಂಡ್ ಇಂಜಿನಿಯರ್ಸ್ ಸಂಸ್ಥೆಯಿಂದ

ನಿರ್ಮಿಸಲಾಗಿದ್ದು, ಭಾರತೀಯ ನೌಕಾಪಡೆಯ ಆಂತರಿಕ ಸಂಸ್ಥೆಯಾದ ನೌಕಾಪಡೆ ವಿನ್ಯಾಸ ನಿರ್ದೇಶನಾಲಯವು ಈ ನೌಕೆಯ ವಿನ್ಯಾಸಗೊಳಿಸಿದೆ. ಈ ನೌಕೆಯು ಅತ್ಯಾಧುನಿಕ ಶಸ್ತ್ರಾಸ್ತ್ರ, ಹಾಗೂ ಸೆನ್ಸರ್ ವ್ಯವಸ್ಥೆ ಹೊಂದಿದ್ದು, ಸಬ್ ಮೆರಿನ್ ವಿರೋಧಿ ಸಮರದಲ್ಲಿ ಪ್ರಮುಖ ಪಾತ್ರವಹಿಸಲಿದೆ.

## 26-10-2020

### ಇನ್ನು 'JEE' ಪರೀಕ್ಷೆ ಕನ್ನಡ ಸೇರಿ 8 ಭಾಷೆಗಳಲ್ಲಿ ಬರೆಯಲು ಅವಕಾಶ



ನವದೆಹಲಿ: ದೇಶದ ಸರ್ಕಾರಿ ಎಂಜಿನಿಯರಿಂಗ್ ಮತ್ತು ಆರ್ಕಿಟೆಕ್ಚರ್ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸಲಾಗುವ JEE (ಜಂಟಿ ಪ್ರವೇಶ ಪರೀಕ್ಷೆ) ಪರೀಕ್ಷೆಗಳನ್ನು ಇನ್ನುಮುಂದೆ ಕನ್ನಡ ಸೇರಿ 8 ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡಲಾಗಿದೆ. ಇಲ್ಲಿಯವರೆಗೂ JEE ಪರೀಕ್ಷೆಯನ್ನು ಕೇವಲ ಇಂಗ್ಲಿಷ್, ಹಿಂದಿ ಹಾಗೂ ಗುಜರಾತಿ ಭಾಷೆಯಲ್ಲಿ ಬರೆಯಲು ಮಾತ್ರ ಅವಕಾಶ ನೀಡಲಾಗಿತ್ತು, ಆದರೆ 2021ರ ಜನವರಿಯಿಂದ ಅನ್ವಯಿಸುವಂತೆ ಹೊಸದಾಗಿ ಕನ್ನಡ ಸೇರಿ 8 ಭಾಷೆಗಳಿಗೆ ಅವಕಾಶ ನೀಡಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಆದೇಶಿಸಿದೆ. ಕನ್ನಡ, ಅಸ್ಸಾಮಿ, ಬಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಮರಾಠಿ, ಒಡಿಯಾ, ತಮಿಳು, ತೆಲುಗು ಹಾಗೂ ಉರ್ದುವಿನಲ್ಲಿ ಇನ್ನು ವಿದ್ಯಾರ್ಥಿಗಳು ಪರೀಕ್ಷೆ ಬರೆಯಬಹುದಾಗಿದೆ.

### ಪಾಕಿಸ್ತಾನದಲ್ಲಿ ಮೊಟ್ಟ ಮೊದಲ ಮೆಟ್ರೋ ರೈಲು ಕಾರ್ಯಾರಂಭ



ಲಾಹೋರ್ : ಪಾಕಿಸ್ತಾನದ ಲಾಹೋರ್ ನಗರದಲ್ಲಿ ದೇಶದ ಮೊಟ್ಟಮೊದಲ ಮೆಟ್ರೋ ರೈಲು ಸೇವೆಗೆ ಚಾಲನೆ ನೀಡಲಾಯಿತು. ಈ ಮೆಟ್ರೋ ರೈಲನ್ನು ಚೀನಾದ ಸ್ಟೇಟ್ ರೈಲ್ವೆ ಗ್ರೂಪ್ ಕಂಪೆನಿ ಮತ್ತು ನಾರ್ತ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಸಂಸ್ಥೆಗಳು ಜಂಟಿಯಾಗಿ ನಿರ್ಮಿಸಿವೆ.

### ಸೇನಾ ಕ್ಯಾಂಟೀನ್'ಗಳಲ್ಲಿ ಮದ್ಯ ಸೇರಿ ವಿವಿಧ ವಸ್ತುಗಳ ಬ್ಯಾನ್



ನವದೆಹಲಿ: ಇತ್ತೀಚೆಗೆ ಕೇಂದ್ರವು ಚೀನಾ ಸೇರಿ ವಿವಿಧ ದೇಶಗಳಿಂದ ಆಮದಾಗುವ ವಸ್ತುಗಳನ್ನು ಸೇನಾ ಕ್ಯಾಂಟೀನ್ಗಳಲ್ಲಿ ಮಾರಾಟ ಮಾಡುವದನ್ನು ನಿಷೇದಿಸಿತ್ತು, ಇದೀಗ ವಿದೇಶಗಳಿಂದ ಆಮದಾಗುವ ಮದ್ಯ ಸೇರಿ ಅಮಲು ಪದಾರ್ಥಗಳನ್ನು ಮಾರಾಟವನ್ನುನಿಷೇಧಿಸಿರುವುದಾಗಿ ಮೂಲಗಳಿಂದ ತಿಳಿದು ಬಂದಿದೆ. ಇನ್ನು "ಸೇನಾ ಕ್ಯಾಂಟೀನ್ ಗಳಲ್ಲಿ ಭಾರತದಲ್ಲಿ ತಯಾರಾದ ಉತ್ಪನ್ನಗಳನ್ನು ಮಾತ್ರವೇ ಮಾರಾಟ ಮಾಡುವ ಕುರಿತು ಸಚಿವಾಲಯದಿಂದ ಯಾವುದೇ ನಿರ್ಧಾರ ಕೈಗೊಂಡಿರುವುದುಲ್ಲ ಎಂದು ರಕ್ಷಣಾ ಸಚಿವ ಶ್ರೀಪಾದ್ ನಾಯಕ್ ಅವರು ಮಾಹಿತಿ ನೀಡಿದ್ದಾರೆ.

### ಸ್ಯಾಮ್‌ಸಂಗ್ ಅಧ್ಯಕ್ಷ ಲೀ ಕುನ್ ಹೀ ಇನ್ನಿಲ್ಲ




ಸಿಯೋಲ್: ದಕ್ಷಿಣ ಕೊರಿಯಾ ಮೂಲದ ಸ್ಯಾಮಸಂಗ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಅಧ್ಯಕ್ಷ ಲೀ ಕುನ್ ಹೀ ಅವರು ತಮ್ಮ 78ನೇ ವಯಸ್ಸಿನಲ್ಲಿ ನಿಧನರಾದರು ಎಂದು ಸಂಸ್ಥೆಯು ಅಧಿಕೃತವಾಗಿ ಘೋಷಿಸಿದೆ. ಲೀ ಕುನ್ ಹೀ ಅವರ ನಾಯಕತ್ವದಲ್ಲಿ ಸ್ಯಾಮ್'ಸಂಗ್ ಸಂಸ್ಥೆಯು ವಿಶ್ವದ ಪ್ರಮುಖ ಎಲೆಕ್ಟ್ರಿಕ್ ಉತ್ಪನ್ನಗಳ ತಯಾರಕ ಸಂಸ್ಥೆಯಾಗಿ ಗುರುತಿಸಿಕೊಂಡಿತ್ತು, ಹಾಗೂ ಸಂಸ್ಥೆಯ ಒಟ್ಟಾರೆ ವಹಿವಾಟು ಪ್ರಸ್ತುತ ದಕ್ಷಿಣ ಕೊರಿಯಾದ ಜಿಡಿಪಿಯ ಐದನೇ ಒಂದು ಭಾಗಕ್ಕೆ ಸಮವಾಗಿದೆ.

# 27-10-2020

## ಗುರು ತೇಜ್ ಬಹದ್ದೂರ್ ಅವರ 400 ನೇ ಜಯಂತಿಗಾಗಿ ಸಮಿತಿ ರಚಿಸಿದ ಕೇಂದ್ರ ಸರ್ಕಾರ



ಸಿಖ್ ಧರ್ಮದ ಹತ್ತು ಗುರುಗಳಲ್ಲಿ ಒಂಬತ್ತನೆಯವರಾದ ಗುರು ತೇಜ್ ಬಹದ್ದೂರ್ ಅವರು 1621 ರಲ್ಲಿ ಈಗಿನ ಪಂಜಾಬಿನ ಅಮೃತಸರದಲ್ಲಿ ಜನಿಸಿದರು. ಗುರು ಹರ್ಗೋಬಿಂದ್ ಅವರ ಕಿರಿಯ ಮಗರಾದ ಇವರ ಹುತಾತ್ಮರಾದ ದಿನವಾದ ನವೆಂಬರ್ 24 ರಂದು, ಪ್ರತಿವರ್ಷ "ಗುರು ತೇಜ್ ಬಹದ್ದೂರ್ನ ಶಹೀದಿ ದಿವಸ್" ಎಂದು ಸ್ಮರಿಸಲಾಗುತ್ತದೆ. ಕೇಂದ್ರ ಸರ್ಕಾರವು ಇವರ 400 ನೇ ಜಯಂತಿಯನ್ನು ಕ್ರಮಬದ್ಧವಾಗಿ ಆಚರಿಸುವ ಸಲುವಾಗಿ ಪ್ರಧಾನಿ ಮೋದಿ ಅವರ ನೇತೃತ್ವದ ಒಟ್ಟು 70 ಸದಸ್ಯ ಬಲದ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಈ ಸಮಿತಿಯಲ್ಲಿರುವ ಪ್ರಮುಖರು : ಡಾ.ಮನಮೋಹನ್ ಸಿಂಗ್, ಓಂ ಬಿರ್ಲಾ, ರಾಜನಾಥ್ ಸಿಂಗ್, ಅಮಿತ್ ಷಾ, ನಿತಿನ್ ಗಡ್ಕರಿ, ನಿರ್ಮಲಾ ಸೀತಾರಾಮನ್, ಹರ್ದೀಪ್ ಸಿಂಗ್ ಪುರಿ, ಪಂಜಾಬ್ ಮುಖ್ಯಮಂತ್ರಿ ಕ್ಯಾಪ್ಟನ್ ಅಮರೀಂದರ್ ಸಿಂಗ್ ಸೇರಿ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಹರಿಯಾಣ, ಬಿಹಾರ್, ತಮಿಳುನಾಡು, ಮಹಾರಾಷ್ಟ್ರ, ಉತ್ತರಾಖಂಡ, ಹಿಮಾಚಲ ಪ್ರದೇಶ, ಒಡಿಶಾ ಹಾಗೂ ರಾಜಸ್ಥಾನ ರಾಜ್ಯಗಳ ಮುಖ್ಯಮಂತ್ರಿಗಳು ಈ ಸಮಿತಿಯ ಸದಸ್ಯರಾಗಿದ್ದಾರೆ.

## ವಿಶ್ವ ವಿಖ್ಯಾತ ಐತಿಹಾಸಿಕ ದಸರಾ ಜಂಬೂಸವಾರಿ ಯಶಸ್ವಿ



ವಿಶ್ವ ವಿಖ್ಯಾತ ಮೈಸೂರು ದಸರಾವನ್ನು ಸರಳವಾಗಿ ಕೋರೋಣ ಕಾರಣದಿಂದಾಗಿ ಆಚರಿಸಲಾಯಿತು. ಇದೆ ಮೊದಲ ಬಾರಿ ಚಿನ್ನದ ಅಂಬಾರಿ ಹೊತ್ತು ಅಭಿಮನ್ಯು ಎಂಬ ಆನೆ ಸಾಗಿತು. ಐತಿಹಾಸಿಕ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿಗೆ ರಾಜ್ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

* ಇದೆ ವೇಳೆ 21 ಸುತ್ತು ಕುಶಾಲು ತೋಪು ಸಿಡಿಸಲಾಯಿತು.
* ಅಂಬಾರಿ ಹೊತ್ತ ಆನೆ ಅಭಿಮನ್ಯು ಜೊತೆ ಕಾವೇರಿ, ವಿಜಯ, ಗೋಪಿ, ವಿಕ್ರಮ ಎಂಬ ಆನೆಗಳು ಅಕ್ಕ ಪಕ್ಕದಲ್ಲಿ ಸಾಗಿದವು.
* ಮೆರವಣಿಗೆ ವೇಳೆ ಮಂಗಳವಾದ್ಯ, ಡೋಲು, ಕರ್ನಾಟಕ ಪೊಲೀಸ್ ಬ್ಯಾಂಡ್ ವತಿಯಿಂದ ಆನೆ ಬಂಡಿ ಸ್ತಬ್ಧಚಿತ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೊರೊನಾ ಜಾಗೃತಿ ಟ್ಯಾಬ್ಲೊ ಸಾಗಿತು.
* ಈ ಬಾರಿ ಜಂಬೂ ಸವಾರಿ ಮೆರವಣಿಗೆ ವೇಳೆ ಕೇವಲ 500 ಕ್ಕೂ ಹೆಚ್ಚು ಜನ ಬಾಗಿಯಾಗಿದ್ದರು.

## ಸೌರ ವಿದ್ಯುತ್ ಕ್ಷೇತ್ರದಲ್ಲಿ ಜಗತ್ತಿನಲ್ಲಿಯೇ ಭಾರತಕ್ಕೆ 5ನೇ ಸ್ಥಾನ: ಮೋದಿ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿಯವರು ಇತ್ತೀಚಿಗೆ ಗುಜರಾತ್ ರಾಜ್ಯದಲ್ಲಿ ಕಿಸಾನ್ ಸೂರ್ಯೋದಯ, ಮಕ್ಕಳ ಹೃದ್ರೋಗ ಆಸ್ಪತ್ರೆ, ಗಿರ್ನಾರ್ ರೋಪ್ ವೇ ಸೇರಿ ಹಲವು ಯೋಜನೆಗಳನ್ನು ಉದ್ಘಾಟಿಸಿ ಮಾತನಾಡಿದ್ದು, ಈ ಸಂದರ್ಭದಲ್ಲಿ ಅವರು ಭಾರತವು ಸೌರ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಭಾರತ ಉತ್ತಮ ಸಾಧನೆ ಮಾಡುತ್ತ ಸಾಗಿದ್ದು, ಪ್ರಸ್ತುತ ಜಗತ್ತಿನಲ್ಲಿ 5ನೇ ಸ್ಥಾನ ಪಡೆದಿಕೊಂಡಿರುವುದಾಗಿ ಅವರು ತಿಳಿಸಿದರು. ರೈತರಿಗೆ ಕಿಸಾನ್ ಸೂರ್ಯೋದಯ ಯೋಜನೆಯಿಂದ ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ವಿದ್ಯುತ್ ದೊರಕಿಸಿಕೊಡಲು ಸಹಕಾರಿಯಾಗಲಿದೆ.

## ಅಕ್ಟೋಬರ್ 27 2020 ರಂದು "ವಿಶ್ವ ಆಡಿಯೋ ವಿಷುಯಲ್ ಹೆರಿಟೇಜ್ ದಿನ" ಎಂದು ಆಚರಿಸಲಾಯಿತು



ಆಡಿಯೋ ದೃಶ್ಯ ದಾಖಲೆಗಳ ಮಹತ್ವವನ್ನು ವಿಶ್ವಕ್ಕೆ ಪರಿಚಯಿಸಲು ಸದುದ್ದೇಶದಿಂದ ಯುನೆಸ್ಕೋ "ಆಡಿಯೋ ವಿಷುಯಲ್ ಹೆರಿಟೇಜ್ ದಿನ"ವನ್ನು ಆಚರಿಸುತ್ತಿದೆ ಹಾಗೂ ಇದನ್ನು ನಿಮ್ಮ "ವಿಂಡೋ ಟು ದಿ ವರ್ಲ್ಡ್" ಎಂಬ ಥೀಮ್ ಅಡಿಯಲ್ಲಿ ಆಚರಿಸಲಾಗುತ್ತದೆ. ಈ ಯುನೆಸ್ಕೋ ಯೋಜನೆ ನಮ್ಮ ಆಡಿಯೋವಿಶುವಲ್ ಪರಂಪರೆಯನ್ನು ರಕ್ಷಿಸಲು ಪ್ರಯತ್ನಿಸುತ್ತದೆ. 1992 ರಿಂದ ಈ ದಿನಾಚರಣೆಯನ್ನು ಆಚರಣೆಗೆ ತರಲಾಯಿತು. ವಿಶ್ವ ಸಾಕ್ಷ್ಯಚಿತ್ರ ಪರಂಪರೆ ಎಲ್ಲರಿಗೂ ಸೇರಿದೆ ಎಂಬ ಅಂಶವನ್ನು ತಿಳಿಸುವ, ಸಾಕ್ಷ್ಯಚಿತ್ರ ಪರಂಪರೆಯ ಸಂರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತದೆ.

## ಯುನೆಸ್ಕೋ ಪ್ರಮುಖ ದಿನಗಳು




ಜನವರಿ 24: ಅಂತರರಾಷ್ಟ್ರೀಯ ಶಿಕ್ಷಣ ದಿನ
ಫೆಬ್ರವರಿ 13: ವಿಶ್ವ ರೇಡಿಯೋ ದಿನ
ಫೆಬ್ರವರಿ 21: ಅಂತರರಾಷ್ಟ್ರೀಯ ಮಾತೃಭಾಷಾ ದಿನ
ಮಾರ್ಚ್ 8: ಅಂತರರಾಷ್ಟ್ರೀಯ ಮಹಿಳಾ ದಿನ
ಮಾರ್ಚ್ 21: ವಿಶ್ವ ಕವನ ದಿನ
ಮಾರ್ಚ್ 21: ಜನಾಂಗೀಯ ತಾರತಮ್ಯದ ನಿರ್ಮೂಲನೆಗೆ ಅಂತರರಾಷ್ಟ್ರೀಯ ದಿನ
ಮಾರ್ಚ್ 22: ನೀರಿಗಾಗಿ ವಿಶ್ವ ದಿನ ಮೇ 16: ಅಂತರರಾಷ್ಟ್ರೀಯಬೆಳಕಿನದಿನ
ಮೇ 21: ಸಂವಾದ ಮತ್ತು ಅಭಿವೃದ್ಧಿಗೆ ಸಾಂಸ್ಕೃತಿಕ ವೈವಿಧ್ಯತೆಗಾಗಿ ವಿಶ್ವ ದಿನ
ಜೂನ್ 5: ವಿಶ್ವ ಪರಿಸರ ದಿನ
ಜೂನ್ 8: ವಿಶ್ವ ಸಾಗರ ದಿನ
ಆಗಸ್ಟ್ 9: ವಿಶ್ವದ ಸ್ಥಳೀಯ ಜನರ ಅಂತರರಾಷ್ಟ್ರೀಯ ದಿನ
ಆಗಸ್ಟ್ 12: ಅಂತರರಾಷ್ಟ್ರೀಯ ಯುವ ದಿನ
ಆಗಸ್ಟ್ 23: ಗುಲಾಮರ ವ್ಯಾಪಾರದ ನೆನಪಿಗಾಗಿ ಮತ್ತು ನಿರ್ಮೂಲನೆಗೆ ಅಂತರರಾಷ್ಟ್ರೀಯ ದಿನ ಸೆಪ್ಟೆಂಬರ್ 8: ಅಂತರರಾಷ್ಟ್ರೀಯ ಸಾಕ್ಷರತಾ ದಿನ
ಸೆಪ್ಟೆಂಬರ್ 15: ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ
ಸೆಪ್ಟೆಂಬರ್ 21: ಅಂತರರಾಷ್ಟ್ರೀಯ ಶಾಂತಿ ದಿನ
ಅಕ್ಟೋಬರ್ 5: ವಿಶ್ವ ಶಿಕ್ಷಕರ ದಿನ
ಅಕ್ಟೋಬರ್ 13: ವಿಪತ್ತು ಕಡಿತಕ್ಕೆ ಅಂತರರಾಷ್ಟ್ರೀಯ ದಿನ
ಅಕ್ಟೋಬರ್ 17: ಬಡತನ ನಿರ್ಮೂಲನೆಗೆ ಅಂತರರಾಷ್ಟ್ರೀಯ ದಿನ
ನವೆಂಬರ್ 5: ವಿಶ್ವ ಸುನಾಮಿ ಜಾಗೃತಿ ದಿನ
ನವೆಂಬರ್ ಮೂರನೇ ಗುರುವಾರ: ವಿಶ್ವ ತತ್ವಶಾಸ್ತ್ರ ದಿನ
ನವೆಂಬರ್ 16: ಸಹಿಷ್ಣುತೆಗಾಗಿ ಅಂತರರಾಷ್ಟ್ರೀಯ ದಿನ
ಡಿಸೆಂಬರ್ 1: ವಿಶ್ವ ಏಡ್ಸ್ ದಿನ
ಡಿಸೆಂಬರ್ 3: ವಿಕಲಾಂಗ ವ್ಯಕ್ತಿಗಳ ಅಂತರರಾಷ್ಟ್ರೀಯದಿನ
ಡಿಸೆಂಬರ್10:ಮಾನವಹಕ್ಕುಗಳದಿನ
ಡಿಸೆಂಬರ್18: ಅಂತರರಾಷ್ಟ್ರೀಯ ವಲಸಿಗರ ದಿನ

## ರಣಹದ್ದು ಸಂರಕ್ಷಣೆಗಾಗಿ ರಾಷ್ಟ್ರೀಯ ಕ್ರಿಯಾ ಯೋಜನೆ



ಭಾರತದ 5 ರಾಜ್ಯಗಳಲ್ಲಿ ರಣಹದ್ದು ಸಂರಕ್ಷಣಾ ಕೇಂದ್ರಗಳು ತ್ರಿಪುರ, ಉತ್ತರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿ ಇತ್ತೀಚೆಗೆ ರಣಹದ್ದು ಸಂರಕ್ಷಣೆಗಾಗಿ ರಾಷ್ಟ್ರೀಯ ಕ್ರಿಯಾ ಯೋಜನೆಯಡಿ ರಣಹದ್ದು ಸಂರಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ರಾಷ್ಟ್ರೀಯ ವನ್ಯಜೀವಿ ಮಂಡಳಿಯು ಅಕ್ಟೋಬರ್ 5, 2020 ರಂದು ರಾಷ್ಟ್ರೀಯ ಕ್ರಿಯಾ ಯೋಜನೆಯನ್ನುಅಂಗೀಕರಿಸಿತು. ಈ ಮೊದಲು 2006 ರಲ್ಲಿ ರಣಹದ್ದುಗಳ ಸಂರಕ್ಷಣಾ ಯೋಜನೆಯನ್ನು ರೂಪಿಸುವದರೊಂದಿಗೆ ಇದನ್ನು 3 ವರ್ಷಗಳವರೆಗೆ ಜಾರಿಗೆ ತರಲಾಯಿತು. ಈ ಯೋಜನೆಯಡಿ ಮುಖ್ಯವಾಗಿ 3 ರಣಹದ್ದು ಜಾತಿಗಳ ಸಂರಕ್ಷಣೆಯ ಮೇಲೆ ಕೇಂದ್ರೀಕರಿಸಲಾಗಿದೆ.

*ಓರಿಯಂಟಲ್‌ಬಿಳಿಬೆಂಬಲಿತರಣಹದ್ದು
*ತೆಳ್ಳಗಿನಬಿಲ್‌ರಣಹದ್ದು
* ಲಾಂಗ್ ಬಿಲ್ ರಣಹದ್ದು

## 28-10-2020

### ಭಾರತ ಸರ್ಕಾರದಿಂದ ಬುಡಕಟ್ಟು ಕಲ್ಯಾಣಕ್ಕಾಗಿ ಎರಡು ಶ್ರೇಷ್ಠತಾ ಕೇಂದ್ರಗಳ ಸ್ಥಾಪನೆ



ಭಾರತ ಸರ್ಕಾರದ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಬುಡಕಟ್ಟು ಜನಾಂಗದ ಕಲ್ಯಾಣಕ್ಕಾಗಿ ಹಾಗೂ ಬುಡಕಟ್ಟು ರೈತರಿಗೆ ತರಬೇತಿ ನೀಡುವ ಸಲುವಾಗಿ ಮುಖ್ಯ ಉದ್ದೇಶದೊಂದಿಗೆ ಎರಡು ಶ್ರೇಷ್ಠತಾ ಕೇಂದ್ರಗಳ ಸ್ಥಾಪನೆಗೆ ಮುಂದಾಗಿದೆ. ಈ ಮೂಲಕ ಬುಡಕಟ್ಟು ಜನರ ಕರ್ತವ್ಯ ಮತ್ತು ನಿಯಮಗಳ ಬಗ್ಗೆ ಜಾಗೃತಿ ಮೂಡಿಸಲಾಗುವುದು. ಅಲ್ಲದೆ ಬುಡಕಟ್ಟು ಜನರಿಗೆ ಕಲ್ಯಾಣ ಯೋಜನೆಗಳನ್ನು ಲಭ್ಯವಾಗುವಂತೆ ನೋಡಿಕೊಳ್ಳುವುದು ಈ ಕೇಂದ್ರಗಳ ಮುಖ್ಯ ಕಾರ್ಯವಾಗಿದೆ. ಈ ಯೋಜನೆಯ ಮೂಲಕ ಈಗಾಗಲೇ ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ 10000 ಬುಡಕಟ್ಟು ರೈತರಿಗೆ "ಗೋ ಅಧರಿತ್" ಕೃಷಿ ತಂತ್ರಗಳನ್ನು ಆಧರಿಸಿ ನೈಸರ್ಗಿಕ ಕೃಷಿಯ ಬಗ್ಗೆ ತರಬೇತಿ ನೀಡಲಾಗಿದೆ. ಭಾರತ ಸರ್ಕಾರದ ಇತರ ಬುಡಕಟ್ಟು ಕಲ್ಯಾಣ ಯೋಜನೆಗಳು: ಪ್ರಧಾನ್ ಮಂತ್ರಿ ವ್ಯಾನ್ ಧನ್ ಯೋಜನೆ ಏಕಲವ್ಯ ಮಾದರಿ ವಸತಿ ಶಾಲೆಗಳು ಬುಡಕಟ್ಟು ಪ್ರದೇಶಗಳಲ್ಲಿ ವೃತ್ತಿಪರ ತರಬೇತಿಗಾಗಿ ಯೋಜನೆ ವಿಶೇಷವಾಗಿ ದುರ್ಬಲ ಟ್ರೈಬಾಲ್ ಗುಂಪುಗಳ ಅಭಿವೃದ್ಧಿ ಬುಡಕಟ್ಟು ಸಂಶೋಧನಾ ಸಂಸ್ಥೆಯ ಮೂಲಕ ಬೆಂಬಲಿಸಲು ಆದಿವಾಸಿ ಮಹಿಲಾ ಸಶಕ್ತಕರನ್ ಯೋಜನೆ ಆದಿವಾಸಿ ಶಿಕ್ಷಾ ರಿನ್ನ ಯೋಜನೆ.

### ಸೆಶಲ್ಸ್ ಅಧ್ಯಕ್ಷೀಯ ಚುನಾವಣೆಯಲ್ಲಿ ರಾಮ್‌ಕಲವಾನ್ ಜಯಭೇರಿ



ವಿಕ್ಟೋರಿಯಾ : ದ್ವೀಪಸಮೂಹ ರಾಷ್ಟ್ರವಾದ ಸೆಶೆಲ್ಸ್‌ನಲ್ಲಿ ಇತ್ತೀಚಿಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ವಾವೆಲ್ ರಾಮ್‌ಕಾಲವನ್ ಜಯಭೇರಿ ಸಾದಿಸುವ ಮೂಲಕ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಭಾರತೀಯ ಮೂಲದವರಾದ ರಾಮ್‌ಕಲವನ್ ಅವರು ಮೂಲತಃ ಬಿಹಾರದವರು. ಇವರಿಗೆ ಚುನಾವಣೆಯಲ್ಲಿ 54.9 ಶೇಕಡ ಮತಗಳು ದೊರೆತಿದ್ದು, ಹಾಲಿ ಅಧ್ಯಕ್ಷ ಡ್ಯಾನಿ ಫೌರ ಅವರಿಗೆ 43.5 ಶೇಕಡ ಮತಗಳು ಲಭ್ಯವಾಗಿವೆ.

* ಬ್ರಿಟಿಶ್ ವಸಾಹತು ಪ್ರದೇಶವಾಗಿದ್ದ ಸೆಶಲ್ಸ್ ದ್ವೀಪ ರಾಷ್ಟ್ರವು 1976ರಲ್ಲಿ ಸ್ವತಂತ್ರವಾಗಿತ್ತು.

### ಭಾರತ ಮತ್ತು ಅಮೇರಿಕಾ ರಾಷ್ಟ್ರಗಳ ಮಧ್ಯ 2+2 ಮಾತುಕತೆ



ಭಾರತ ಹಾಗೂ ಅಮೆರಿಕದ ರಾಷ್ಟ್ರಗಳ ವಿದೇಶಾಂಗ ಹಾಗೂ ರಕ್ಷಣಾ ಸಚಿವರ 2+2 ಸಭೆಯು ಇತ್ತೀಚಿಗೆ ಭಾರತದ ನವದೆಹಲಿಯಲ್ಲಿ ಯಶಸ್ವಿಯಾಗಿ ನಡೆದಿದ್ದು, ಈ ಸಭೆಯಲ್ಲಿ ಹಲವು ಮಹತ್ವದ ದ್ವಿಪಕ್ಷೀಯ ಹಾಗೂ ಜಾಗತಿಕ ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು. ಪ್ರಮುಖವಾಗಿ ರಕ್ಷಣೆಗೆ ಸಂಬಂಧಿಸಿದಂತೆ ಮಹತ್ವದ ತೀರ್ಮಾನವನ್ನು ಕೈಗೊಳ್ಳಲಾಯಿತು.

* ಹಿಂದು ಮಹಾಸಾಗರ ಶಾಂತಸಾಗರ (ಇಂಡೋ ಪೆಸಿಫಿಕ್) ವಲಯದಲ್ಲಿ ಚೀನಾದ ಪ್ರಾಭಲ್ಯವನ್ನು ಮಟ್ಟ ಹಾಕುವಲ್ಲಿ ಸಭೆಯು ಮಹತ್ವ ಪಡೆದಿದೆ.
* ಕಾಯಂ ಸದಸ್ಯತ್ವಕ್ಕೆ ಬೆಂಬಲ: ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯ ಸ್ಥಾನಕ್ಕಾಗಿ ಅಮೆರಿಕದ ಸಂಪೂರ್ಣ ಬೆಂಬಲವನ್ನು ಇದೆ ವೇಳೆ ಅಮೆರಿಕಾದ ಪಾಂಪಿಯೋ ಘೋಷಿಸಿದರು. "2+2 ಮಾತುಕತೆ" ಎಂದರೇನು? ಯಾವುದೇ 2 ರಾಷ್ಟ್ರಗಳ ವಿದೇಶಾಂಗ ಸಚಿವ ಮತ್ತು ರಕ್ಷಣ ಸಚಿವರು ಒಟ್ಟಿಗೇ ಕುಳಿತು ನಡೆಸುವ ಮಾತುಕತೆಯಾಗಿದ್ದು, ವಿದೇಶಾಂಗ ಮಾತುಕತೆಗಳಲ್ಲಿ ಸಾಮಾನ್ಯವಾಗಿ ಈ ಪದ ಬಳಕೆ ಮಾಡಲಾಗುವದು. ಇನ್ನು ಈ ಮಾತುಕತೆಯಲ್ಲಿ ಉಭಯ ದೇಶಗಳ ವ್ಯೂಹಾತ್ಮಕ, ಭದ್ರತೆ, ರಾಜತಾಂತ್ರಿಕ ಸೇರಿ ಹಲವು ವಿಷಯಗಳ ಚರ್ಚೆ ನಡೆಸಲಾಗುವದು. ಯಾರು ಭಾಗವಹಿಸುವವರು ? ಭಾರತದಿಂದ ಎಸ್.ಜೈಶಂಕರ್ ವಿದೇಶಾಂಗ ಸಚಿವ ಮತ್ತು ರಾಜನಾಥ್ ಸಿಂಗ್ ರಕ್ಷಣ ಸಚಿವ ಅಮೆರಿಕದಿಂದ ಮೈಕ್ ಪೊಂಪ್ಯು ವಿದೇಶಾಂಗ ಸಚಿವ ಹಾಗೂ ಮಾರ್ಕ್ ಎಸ್ಪರ್ ರಕ್ಷಣ ಸಚಿವ
* ಭಾರತ ಮತ್ತು ಅಮೆರಿಕಗಳ ದೇಶಗಳ ಮಧ್ಯ ಮೊದಲು 2018ರ ಸೆಪ್ಟೆಂಬರ್‌ನಲ್ಲಿ 2+2 ಮಾತುಕತೆಯು ನವದೆಹಲಿಯಲ್ಲಿ ನಡೆದಿತ್ತು. ಇನ್ನು ಪ್ರಸ್ತುತ ನಡೆದಿರುವ ಮಾತುಕತೆಯು

ಮೂರನೇ 2+2 ಮಾತುಕತೆಯಾಗಿದೆ.

## 29-10-2020

### ಯಲಹಂಕದಲ್ಲಿರುವ ರೈಲು ಚಕ್ರ ಕಾರ್ಖಾನೆಯಿಂದ ಮೊದಲ ಬಾರಿ ರೈಲ್ವೆ ಚಕ್ರ ಮತ್ತು ಅಕ್ಸಲ್ ಗಳ ರಫ್ತು



ಬೆಂಗಳೂರು : ರಾಜ್ಯ ರಾಜಧಾನಿ ಬೆಂಗಳೂರಿನ ಸಮೀಪದಲ್ಲಿರುವ ಯಲಹಂಕ ರೈಲು ಚಕ್ರ ಕಾರ್ಖಾನೆ (ಆರ್ ಡಬ್ಲ್ಯುಎಫ್) ಯು ಇದೆ ಮೊದಲ ಬಾರಿಗೆ ವಿದೇಶಕ್ಕೆ ರೈಲು ಗಾಲಿ ಹಾಗೂ ಎಕ್ಸಲ್ ಗಳನ್ನು ತಯಾರಿಸಿ ರಫ್ತು ಮಾಡಲಿದೆ. ಆಫ್ರಿಕಾದ ಮೊಜಾಂಬಿಕ್ ದೇಶವು ಯಲಹಂಕ ರೈಲು ಚಕ್ರ ಕಾರ್ಖಾನೆಗೆ ಒಟ್ಟು 1485 ಚಕ್ರಗಳು ಮತ್ತು ಆಕ್ಸಲ್ಗಳನ್ನು ಬೇಡಿಕೆಯಿಟ್ಟಿತ್ತು. ಅದೇ ರೀತಿ RWF ಯು ಮೊದಲ ಬ್ಯಾಚ್ ನ ಚಕ್ರ ಮತ್ತು ಎಕ್ಸಲ್ಗಳ ರಫ್ತು ಮಾಡಿದೆ. ಈ ಒಪ್ಪಂದದ ಒಟ್ಟು ಮೊತ್ತ 8.13 ಕೋಟಿ ರೂಪಾಯಿಯಾಗಿದ್ದು, ಒಟ್ಟು 1485 ಉತ್ಪನ್ನಗಳನ್ನು (990 ಚಕ್ರಗಳು ಮತ್ತು 495 ಆಕ್ಸಲ್)ಒಳಗೊಂಡಿದೆ. Railway Wheel Factory , ಯಲಹಂಕ: ಈ ಸಂಸ್ಥೆಯು 1984ರಲ್ಲಿ ಬೆಂಗಳೂರಿನ ಸಮೀಪದ ಯಲಹಂಕದಲ್ಲಿ ಆರಂಭವಾಯಿತು. ಈ ಸಂಸ್ಥೆಯು ಅಕ್ಟೋಬರ್ 21, 2020 ಕ್ಕೆ ಅನ್ವಯಿಸುವಂತೆ ಒಟ್ಟು ನಾಲ್ಕು ದಶಲಕ್ಷ ರೈಲು ಚಕ್ರಗಳನ್ನೂ ತಯಾರಿಸಿದೆ.

### ಮೊದಲ ಬಾರಿಗೆ 'ಗ್ರೀನ್ ಚೆಕ್‌ಪೋಸ್ಟ್' ನಿರ್ಮಿಸಿದಕೇರಳ



ತಿರುವನಂತಪುರ: ಕೇರಳ ರಾಜ್ಯದ ಇಡುಕ್ಕಿ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣ 'ವಾಗಮನ್' ಬೆಟ್ಟ ಪ್ರದೇಶದ ವ್ಯಾಪ್ತಿಯಲ್ಲಿ ಇದೆ ಮೊದಲ ಬಾರಿಗೆ ಕೇರಳ ರಾಜ್ಯ ಸರ್ಕಾರವು 'ಗ್ರೀನ್ ಚೆಕ್ ಪೋಸ್ಟ್'ಗಳಿಗೆ ಚಾಲನೆ ನೀಡಿದೆ. ಗ್ರೀನ್ ಚೆಕ್ ಪೋಸ್ಟ್ ಗಳ ಸ್ಥಾಪನೆಯಿಂದ ಸ್ಥಳೀಯ ಪರಿಸವನ್ನು ಕಾಪಾಡುವ ಮುಖ್ಯ ಉದ್ದೇಶ ಹೊಂದಲಾಗಿದೆ. ಹಾಗೂ ಈ ಪ್ರದೇಶವನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ಸಲುವಾಗಿ ವಾಗಮನ್ ಬೆಟ್ಟಕ್ಕೆ ಇರುವ ಒಟ್ಟು ಐದು ಪ್ರವೇಶ ಮಾರ್ಗಗಳಲ್ಲಿ 'ಹರಿತ ಕೇರಳಂ'(ಹಸಿರು ಕೇರಳ) ಯೋಜನೆಯಡಿ 'ಹಸಿರುಸೇನೆ' ಯನ್ನು ಸರ್ಕಾರ ನೇಮಿಸಿದೆ.

### ಕಾಶ್ಮೀರದಲ್ಲಿ ಇನ್ನು ಜಮೀನು ಕೊಳ್ಳಬಹುದು: ಕೇಂದ್ರದಿಂದ ನೂತನ ಕಾನೂನು



ಶ್ರೀನಗರ : ಕಳೆದ ವರ್ಷ ಕೇಂದ್ರ ಸರ್ಕಾರವು ಕಾಶ್ಮೀರಕಿರುವ ವಿಶೇಷ ಸ್ಥಾನಮಾನವನ್ನು ಹಿಂಪಡೆದಿದ್ದು, ನಿರೀಕ್ಷೆಯಂತೆ ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ಇನ್ನು ಯಾವುದೇ ಭಾರತೀಯನು ಕೂಡ ಕಾಶ್ಮೀರ ರಾಜ್ಯದಲ್ಲಿ ಇನ್ನು ಜಾಮೀನು ಖರೀದಿಸಲು ಅವಕಾಶ ನೀಡಲಾಗಿದೆ. ಈ ಮೊದಲು ಕೇವಲ ಜಮ್ಮು ಕಾಶ್ಮೀರ ಮತ್ತು ಲಡಾಖ್ ನಿವಾಸಿಗಳು ಮಾತ್ರ ಈ ಹಕ್ಕು ಹೊಂದಿದ್ದರು. ಆದರೆ, 370ನೇ ವಿಧಿ ರದ್ದುಮಾಡಿ ವಿಶೇಷ ಸ್ಥಾನಮಾನ ಹಿಂಪಡೆದ ಕಾರಣ ಕಾಶ್ಮೀರದಲ್ಲಿ ದೇಶದ ಇತರ ರಾಜ್ಯಗಳಂತೆ ಮುಕ್ತ ವ್ಯವಹಾರಕ್ಕೆ ತೆರೆದಿಡಲಾಗಿದೆ.

### ಸೌದಿ ಅರೇಬಿಯಾಯಿಂದ ಭಾರತಕ್ಕೆ ವಿಶೇಷಕೊಡುಗೆ



ದುಬೈ: ಮುಸ್ಲಿಂ ರಾಷ್ಟ್ರವಾಗಿರುವ ಸೌದಿ ಅರೇಬಿಯಾಯಿಂದ ಭಾರತಕ್ಕೆ ವಿಶೇಷ ಕೊಡುಗೆಗಳು ಲಭಿಸಿದ್ದು, ಭಾರತದಲ್ಲಿ 75 ಶತಕೋಟಿ ಡಾಲರ್ ಬಂಡವಾಳ ಹೂಡಲು ಸೌದಿ ಆಸಕ್ತಿ ತೋರಿದೆ. ಇನ್ನು ಸೌದಿ ಅರೇಬಿಯಾಯು ಈ ಹಿಂದೆ ಪಾಕಿಸ್ತಾನಕ್ಕೆ ನೀಡಿದ್ದ ಒಂದು ಶತಕೋಟಿ ಡಾಲರ್ ಸಾಲವನ್ನು ವಾಪಸ್ ಸಂಗ್ರಹಿಸಿದೆ. ಈ ಮೂಲಕ ಪಾಕಿಸ್ತಾನಕ್ಕೆ ತೀವ್ರ ಹಿನ್ನಡೆಯಾಗಿದೆ. ಇನ್ನು ಸೌದಿ ಅರೇಬಿಯಾ ರಾಷ್ಟ್ರವು ಭಾರತದ ಮುಖೇಶ್

ಅಂಬಾನಿ ಒಡೆತನದ ರಿಲಯನ್ಸ್ ಸಮೂಹ ಸಂಸ್ಥೆಗಳಲ್ಲಿ 15 ಶತಕೋಟಿ ಡಾಲರ್ ಬಂಡವಾಳ ಹೂಡಲು ಈಗಾಗಲೇ ಆಸಕ್ತಿ ತೋರಿದೆ.
* ನವೆಂಬರ್ 21 ಮತ್ತು 22ರಂದು ನಡೆಯುವ ಜಿ 20 ಶೃಂಗಸಭೆಯ ಆತಿಥ್ಯವನ್ನು ಸೌದಿ ಅರೇಬಿಯಾ ವಹಿಸಲಿದೆ.

### ಮಾನವನಲ್ಲಿ ಹೊಸ ಅಂಗ ಪತ್ತೆಹಚ್ಚಿದ ನೆದರ್‌ಲ್ಯಾಂಡ್ ವಿಜ್ಞಾನಿಗಳು



ಇತ್ತೀಚಿಗೆ ನೆದರ್‌ಲ್ಯಾಂಡ್ ವಿಜ್ಞಾನಿಗಳು ಮಾನವನ ಮೂಗಿನ ಹಿಂಭಾಗದಲ್ಲಿ ಕಂಡುಬರುವ ಹೊಸ ಅಂಗವನ್ನು ಪತ್ತೆಹಚ್ಚಿದ್ದಾರೆ. ಹಾಗೂ ಇದನ್ನು ಟ್ಯೂಬೀರಿಯಲ್ ಲಾಲಾರಸ ಗ್ರಂಥಿ (Tuberial Salivary Gland) ಎಂದು ಹೆಸರಿಸಿದ್ದಾರೆ.
* ಈ ಅಂಗವನ್ನು ನೆದರ್‌ಲ್ಯಾಂಡ್‌ನ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ವಿಜ್ಞಾನಿಗಳು ಪ್ರಾಸ್ಟೇಟ್ ಕ್ಯಾನ್ಸರ್ ಕುರಿತು ಸಂಶೋಧನೆ ನಡೆಸುತ್ತಿರುವಾಗ ಕಂಡುಹಿಡಿದಿದ್ದು, ಅಂಗವು ಕ್ಯಾನ್ಸರ್ ಚಿಕಿತ್ಸೆಗೆ ಸಹಾಯ ಮಾಡುತ್ತದೆ.
* ಈ ಹೊಸ ಗ್ರಂಥಿಯ ಪತ್ತೆ ಬಳಿಕ ಮಾನವ ದೇಹದಲ್ಲಿ ಒಟ್ಟು ಲಾಲಾರಸ ಗ್ರಂಥಿಗಳ ಸಂಖ್ಯೆ 4 ಕ್ಕೆ ಏರಿದೆಯಾಗಿದೆ.

## 30-10-2020

### ಕರ್ನಾಟಕದಾದ್ಯಂತ ನವೆಂಬರ್ 17 ರಿಂದ ಡಿಗ್ರಿ ಕಾಲೇಜ್ ಆರಂಭ= ಡಿಸಿಎಂ ಡಾ.ಅಶ್ವತ್ಥ ನಾರಾಯಣ



ಬೆಂಗಳೂರು : ಕೊರೋನಾ ಸೋಂಕಿನ ಭೀತಿಯಿಂದ ರಾಜ್ಯದ ಎಲ್ಲ ಶಾಲಾ ಕಾಲೇಜುಗಳಿಗೂ ರಜೆ ಘೋಷಿಸಿ ಸುಮಾರು ತಿಂಗಳುಗಳ ಬಳಿಕ ರಾಜ್ಯ ಸರ್ಕಾರವು ಕಾಲೇಜುಗಳ ತರಗತಿಗಳನ್ನು ಆರಂಭಿಸಲು ಒಲವು ತೋರಿದ್ದು, ಇದೆ ನವೆಂಬರ್ 17 ರಿಂದ ಕಾಲೇಜುಗಳ ಆರಂಭಿಸುವುದಾಗಿ ರಾಜ್ಯದ ಉಪಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ ಅವರು ಘೋಷಿಸಿದ್ದಾರೆ. ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ತಜ್ಞರೊಂದಿಗೆ ನಡೆಸಿದ ಸಭೆಯಾ ಬಳಿಕ ಕೊರೋನಾ ಸೋಂಕಿನ ಮುಂಜಾಗ್ರತೆಗಾಗಿ ಸುರಕ್ಷಾ ಕ್ರಮಗಳೊಂದಿಗೆ ರಾಜ್ಯದಲ್ಲಿ ನವೆಂಬರ್ 17 ನೇ ತಾರೀಕಿನಿಂದ ಪದವಿ ಕಾಲೇಜುಗಳನ್ನು ಹೈಬ್ರಿಡ್ ಮಾದರಿಯಲ್ಲಿ ತೆರೆಯಲು ಒಪ್ಪಿಗೆ ಸೂಚಿಸಿರುವುದಾಗಿ ತಿಳಿದುಬಂದಿದೆ.

### ಮಂಗಳೂರು ವಿಮಾನ ನಿಲ್ದಾಣ ಅದಾನಿ ಕಂಪೆನಿಗೆಹಸ್ತಾಂತರ




ಮಂಗಳೂರು : ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಇದೆ ಅಕ್ಟೋಬರ್ 31 ರಿಂದ ನಿರ್ವಹಣೆ, ಅಭಿವೃದ್ಧಿ ಹಾಗೂ ಕಾರ್ಯಾಚರಣೆಗಾಗಿ ಗೌತಮ್ ಅದಾನಿ ಮಾಲೀಕತ್ವದ ಅದಾನಿ ಸಮೂಹ ಸಂಸ್ಥೆಗೆ ವರ್ಗಾವಣೆಗೊಳ್ಳಲಿದೆ. ಈ ಕುರಿತು ಅದಾನಿ ಮಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ಕಂಪೆನಿ ಹಾಗು ಕೇಂದ್ರ ವಿಮಾನಯಾನ ಸಚಿವಾಲಯವು ಇತ್ತೀಚಿಗೆ ಪರಸ್ಪರ ಒಪ್ಪಂದ ಮಾಡಿಕೊಂಡವು.

### ದೇಶದ ಮಹಾನಗರಗಳ ರಸ್ತೆ ಅಪಘಾತ ಬೆಂಗಳೂರಿಗೆ3ನೇಸ್ಥಾನ



ಬೆಂಗಳೂರು : ಇತ್ತೀಚಿಗೆ ಕೇಂದ್ರ ರಸ್ತೆ ಮತ್ತು ಹೆದ್ದಾರಿ ಖಾತೆ ಸಚಿವಾಲಯವು 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ ಮಹಾನಗರಗಳ ಅಪಘಾತದ ವರದಿಯನ್ನು ಬಿಡುಗಡೆಗೊಳಿಸಿದ್ದು, ಈ ವರದಿಯ ಪ್ರಕಾರ ರಾಜ್ಯದ ಬೆಂಗಳೂರು ನಗರವು 3ನೇ ಸ್ಥಾನ ಪಡೆದಿದ್ದು, ಕಳೆದ ವರ್ಷ ನಗರದಲ್ಲಿ 4,684 ರಸ್ತೆ ಅಪಘಾತ ಸಂಭವಿಸಿ, ಒಟ್ಟು 768 ಜನರು ಸಾವಿಗೀಡಾಗಿದ್ದಾರೆ.
* 2018 ಮತ್ತು 2019 ರಲ್ಲಿಯು ಬೆಂಗಳೂರು ನಗರ 3ನೇ ಸ್ಥಾನದಲ್ಲಿಯೇ ಮುಂದುವರೆದಿದೆ.

* ಇನ್ನು ಅತಿ ಹೆಚ್ಚು ಅಪಘಾತ ಸಂಭವಿಸಿದ ಮಹಾನಗರದ ಪೈಕಿ ಚೆನ್ನೈ ಪ್ರಥಮ ಸ್ಥಾನ ಪಡೆದಿದ್ದು, ಇಲ್ಲಿ ಒಟ್ಟು 6871 ಅಪಘಾತಗಳ ಪೈಕಿ ನಡೆದಿದ್ದರೆ 1252 ಜನರು ಸಾವಿಗೀಡಾಗಿದ್ದಾರೆ.
* ದೆಹಲಿ ಮಹಾನಗರವು 2ನೇ ಸ್ಥಾನದಲ್ಲಿದ್ದು, 5601 ಅಪಘಾತಗಳ ಪೈಕಿ 1463 ಜನರು ಮೃತಪಟ್ಟಿರುವುದಾಗಿ ವರದಿಯಾಗಿದೆ.

### ಅಂಚೆ ಇಲಾಖೆಯೊಡನೆ ಭಾಗ್ಯಲಕ್ಷ್ಮೀ, ಸುಕನ್ಯಾ ಸಮೃದ್ಧಿ ಯೋಜನೆ ವಿಲೀನ




ಬೆಂಗಳೂರು: ಕರ್ನಾಟಕ ರಾಜ್ಯಸರ್ಕಾರವು ಭಾಗ್ಯಲಕ್ಷ್ಮೀ ಯೋಜನೆಯನ್ನು ಕೇಂದ್ರ ಸರಕಾರದ ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯ ಜತೆ ವಿಲೀನಗೊಳಿಸಿ ಅಂಚೆ ಇಲಾಖೆ ಮೂಲಕ ಜಾರಿ ಗೊಳಿಸಲು ರಾಜ್ಯ ಸಚಿವ ಸಂಪುಟದಲ್ಲಿ ತೀರ್ಮಾನಿಸಿಲಾಗಿದೆ. 2020 21ರಿಂದ ಭಾಗ್ಯಲಕ್ಷ್ಮೀ ಯೋಜನೆಯು ಸುಕನ್ಯಾ ಸಮೃದ್ಧಿ ಯೋಜನೆಯ ಜತೆ ವಿಲೀನಗೊಳಿಸಿ ಜಾರಿಗೆ ತರಲಾಗುವದು. ಇನ್ನು ಮರು ವಿನ್ಯಾಸದಡಿ ಭಾಗ್ಯಲಕ್ಷ್ಮೀ ಹೆಸರು ಮುಂದುವರಿಯಲಿದೆ.

### ಜರ್ಮನಿಯ ಜೂಲಿಯಾ ಜಾರ್ಜ್ಸ್ ಟೆನಿಸ್‌ಗೆ ವಿದಾಯ



ಬರ್ಲಿನ್ : ಜರ್ಮನಿಯ ಟೆನಿಸ್ ತಾರೆ, 31ರ ಹರೆಯದ ಜೂಲಿಯಾ ಜಾರ್ಜ್ಸ್ ಅವರು ತಮ್ಮ ಕ್ರೀಡಾ ಬದುಕಿಗೆ ಇತ್ತೀಚಿಗೆ ವಿದಾಯ ಘೋಷಿಸಿದರು.
* 2018ರಲ್ಲಿ ವಿಂಬಲ್ಡನ್ ಸೆಮಿಫೈನಲ ಪಂದ್ಯ ಆಡಿದ್ದರು.
* ವಿಶ್ವ ರ್ಯಾಂಕಿಂಗ್‌ನಲ್ಲಿ ಇವರು 45ನೇ ಸ್ಥಾನ ಪಡೆದಿದ್ದರೆ.
* ಡಬ್ಲ್ಯುಟಿಎ ಟೂರ್‌ನಲ್ಲಿ ಜಾರ್ಜ್ಸ್ ಒಟ್ಟು ಏಳು ಸಿಂಗಲ್ಸ್ ಮತ್ತು ಐದು ಡಬಲ್ಸ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.
* ವಿಶ್ವ ರ್ಯಾಂಕಿಂಗ್‌ನಲ್ಲಿ ಜೀವನ ಶ್ರೇಷ್ಠ ವಿಶ್ವದ ಒಂಭತ್ತನೇ ಸ್ಥಾನ ತಲುಪಿದ್ದರು.

### ಗುಜರಾತ ರಾಜ್ಯದ ಮಾಜಿ ಮುಖ್ಯಮಂತ್ರಿ 'ಕೇಶುಬಾಯ್ ಪಟೇಲ್' ನಿಧನ



ಅಹಮದಬಾದ್ : ಗುಜುರಾತನ ಮಾಜಿ ಮುಖ್ಯಮಂತ್ರಿ 'ಕೇಶುಬಾಯ್ ಪಟೇಲ್' ಅವರು ಅಹಮದಬಾದ್ ನ ಖಾಸಗಿ ಆಸ್ಪತ್ರೆಯಲ್ಲಿ ತೀವ್ರ ಅನಾರೋಗ್ಯದ ಕಾರಣ ಕೊನೆಯುಸಿರೆಳೆದರು.
* ಇವರು 1995ರಲ್ಲಿ ಮೊದಲ ಬಾರಿಗೆ ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು. ಅಲ್ಲದೇ 1998 ರಿಂದ 2001ರವರೆಗೆ ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ್ದರು.
* ಗುಜರಾತ್ ನ ವಿಧಾನಸಭೆಯ ಸದಸ್ಯರಾಗಿ ಒಟ್ಟು ಆರು ಬಾರಿ ಆಯ್ಕೆಯಾಗಿದ್ದರು.
* 2012ರಲ್ಲಿ ಬಿಜೆಪಿ ತೊರೆದು, 'ಗುಜರಾಜ್ ಪರಿವರ್ತನಾ ಪಕ್ಷ'ವನ್ನು ಸ್ಥಾಪಿಸಿದರು.

## 31-10-2020

### ಶೀಘ್ರ ರಾಜ್ಯದಲ್ಲಿ ಎಲ್ಲಾ ತುರ್ತು ಸೇವೆಗಳಿಗೆ ಒಂದೇ 'ಸಹಾಯವಾಣಿ' 112



ಬೆಂಗಳೂರು :ರಾಜ್ಯದಲ್ಲಿ ಪ್ರಸ್ತುತ ಪೊಲೀಸ್, ಆಂಬುಲೆನ್ಸ್ ಹಾಗು ಅಗ್ನಿಶಾಮಕ ಸಹಾಯಕ್ಕೆ ಬೇರೆ ಬೇರೆ ಸಹಾಯವಾಣಿ ಸಂಖ್ಯೆಗಳಿದ್ದು, ಇದರಿಂದಾಗಿ ಸಾರ್ವಜನಿಕರು ತುರ್ತು ಸಂದರ್ಭಗಳಲ್ಲಿ ಗೊಂದಲಕ್ಕೀಡಾಗುವ ಸಾಧ್ಯತೆ ಹೆಚ್ಚಿರುವ ಕಾರಣ ರಾಜ್ಯ ಸರ್ಕಾರವು ಇನ್ನು ಯಾವುದೇ ತುರ್ತು ಸಂದರ್ಭಕ್ಕೂ ಒಂದೇ ಸಹಾಯವಾಣಿಯನ್ನು ಶೀಘ್ರದಲ್ಲೇ ಜಾರಿಗೆ

ತರಲಿದೆ. ಎಲ್ಲಾ ತುರ್ತು ಸಂದರ್ಭದಲ್ಲಿ ಇನ್ನು 112 ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ, ಎಲ್ಲಾ ಸೇವೆ ಪಡೆಯಬಹುದು. ಈ ನೂತನ ಸಹಾಯವಾಣಿ ಈಗಾಗಲೇ 6 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಯಲ್ಲಿದ್ದು, ಶೀಘ್ರದಲ್ಲೇ ರಾಜ್ಯಾದ್ಯಂತ ಜಾರಿಗೆ ಬರಲಿದೆ.

## ಅಣೆಕಟ್ಟುಗಳ ನಿರ್ವಹಣೆಗೆ ಮೋದಿ ಸರ್ಕಾರದಿಂದ 10 ಸಾವಿರ ಕೋಟಿ ಮೊತ್ತದ ಯೋಜನೆ ಜಾರಿ



ನವದೆಹಲಿ: ಭಾರತದಲ್ಲಿರುವ 19 ರಾಜ್ಯಗಳ 736 ಡ್ಯಾಮ್ ಗಳ ನಿರ್ವಹಣೆಗಾಗಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹೊಸ ಯೋಜನೆ ಜಾರಿಗೆ ಯೋಜನೆಯನ್ನು ರೂಪಿಸಲಾಗಿದೆ. ಹಾಗೂ ಈ ಹೊಸ ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಈ ನೂತನ ಯೋಜನೆಯಡಿಯಲ್ಲಿ ಮುಂದಿನ 10 ವರ್ಷಗಳ ಕಾಲ ಡ್ಯಾಂಗಳನ್ನು ನಿರ್ವಹಣೆ ಮಾಡಲು ಅಗತ್ಯವಿರುವ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವದು. ಇದಕ್ಕಾಗಿ ಅಂದಾಜು 10,211 ಕೋಟಿ ರೂಪಾಯಿ ನೆರವು ನೀಡಲಾಗುವುದು. ಅಲ್ಲದೇ, ಡ್ಯಾಂಗಳ ಸುರಕ್ಷತೆ ಮತ್ತು ದೇಶದ ಜನರಿಗೆ ನೀರಿನ ಭದ್ರತೆ ಒದಗಿಸುವುದು, ಅಭಿವೃದ್ಧಿ ಕೆಲಸಗಳ ಮೂಲಕ ಉದ್ಯೋಗ ಸೃಷ್ಟಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.

## ಪ್ರಧಾನಿ ಮೋದಿಯವರಿಂದ 'ಆರೋಗ್ಯ ವನ'ಉದ್ಘಾಟನೆ



ಕೆವಾಡಿಯಾ : ಗುಜರಾತ ರಾಜ್ಯದ ವಿಶ್ವ ಪ್ರಸಿದ್ಧ ಪ್ರವಾಸಿ ತಾಣ 'ಏಕತಾ ಪ್ರತಿಮೆ'ಯ ಸಮೀಪದಲ್ಲಿ (ಕೆವಾಡಿಯಾ ಎಂಬಲ್ಲಿ) ಪ್ರಧಾನಿ ಮೋದಿಯವರು ಔಷಧೀಯ ಸಸ್ಯಗಳು, ಗಿಡಮೂಲಿಕೆಗಳ ಉದ್ಯಾನ 'ಆರೋಗ್ಯ ವನ' ಕ್ಕೆ ಚಾಲನೆ ನೀಡಿದರು. ಒಟ್ಟು 17 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಈ 'ಆರೋಗ್ಯ ವನ'ದಲ್ಲಿ ವೈವಿಧ್ಯಮಯ ಔಷಧೀಯ ಸಸ್ಯ ಹಾಗೂ ವಿವಿಧ ಬಗೆಯ ಗಿಡಮೂಲಿಕೆಗಳನ್ನು ಬೆಳೆಸಲಾಗಿದೆ. ಈ ಮೂಲಕ ಔಷದಿ ಸಸ್ಯಗಳ ಮಹತ್ವವನ್ನು ತಿಳಿಸಲಾಗುವದು.


KPSC Vaani
KPSC VAANI
Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ
ಸೇವೆಗಳು:
• ಪ್ರತಿದಿನದ ಉದ್ಯೋಗ ಮಾಹಿತಿ
• ಪ್ರತಿದಿನದ ಪ್ರಚಲಿತ ಘಟನೆಗಳು
• ಸ್ಟಡಿ ಮೆಟೀರಿಯಲ್ಸ್
• ಹಳೆಯ ಪ್ರಶ್ನೆಪತ್ರಿಕೆಗಳ ಸಂಗ್ರಹ
• ಕಟ್ ಆಫ್ ಅಂಕಗಳ ಮಾಹಿತಿ
• ಸ್ಪರ್ಧಾತ್ಮಕ ಲೇಖನಗಳು
• ವೀಡಿಯೊ ತರಗತಿಗಳು
• ಹಾಗೂ ಇನ್ನು ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ ಬೇಟಿ ನೀಡಿ
www.kpscvaani.com
Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ
Scan QR Code to download kpscvaani App